ಶ್ರೀಮದ್ವೇಂಕಟನಾಥರ

ಶ್ರೀ ದಶಾವತಾರ ಸ್ತೋತ್ರ

ಅನುವಾದ ಮತ್ತು ವಿವರಣೆ—ವೇದಾಂತ ವಿದ್ವಾನ್ ವೇದಾಂತ ಸಾರಜ್ಞ
ಶ್ರೀ ಕೃಷ್ಣ ತಾತಾಚಾರ್ಯರು, ಬೆಂಗಳೂರು, ಇವರಿಂದ

ಶ್ರೀಮಾನ್ವೇಂಕಟನಾಥಾರ್ಯಃ ಕವಿತಾರ್ಕಿಕಕೇಸರೀ ।
ವೇದಾನ್ತಾಚಾರ್ಯವರ್ಯೋ ಮೇ ಸನ್ನಿಧತ್ತಾಂ ಸದಾ ಹೃದಿ ॥

ಅವತಾರಿಕೆ:—

ಈ ಸ್ತೋತ್ರವನ್ನು ಕವಿಹೃದಯಾನುಸಾರ ಚೆನ್ನಾಗಿ ಭಾವಿಸಿದರೆ ಅದೃಶ್ಯವಾದ ಬ್ರಹ್ಮವು ದೃಶ್ಯವಾಗುವುದಕ್ಕೂ ರಸಸ್ವರೂಪವಾದ ಆ ಬ್ರಹ್ಮದ ರಸವು ಭಾವುಕರ ಹೃದಯದಲ್ಲಿ ಸಂಕ್ರಾನ್ತವಾಗುವುದಕ್ಕೂ ಸಹಾಯವಾಗುವುದು. ಅಧೋಕ್ಷಜನು ತನ್ನ ಅವತಾರಗಳ ಮೂಲಕ ಎಲ್ಲರ ಕಣ್ಣುಗಳಿಗೂ ಗೋಚರಿಸುತ್ತಾನೆ. ಮಂದಭಾಗ್ಯರಾದ ನಮಗೆ ಅತಿಕ್ರಾನ್ತವಾದ ಆ ಅವತಾರಗಳು ಕಾಣಿಸವು. ನಾವು ಭಾವುಕರೂ ರಸಿಕರೂ ಆದಲ್ಲಿ ಶುಕಪರಾಂಕುಶ ಪರಕಾಲಾದಿಗಳಂತೆ ಈಗಲೂ ಅವುಗಳನ್ನು ಪ್ರತ್ಯಕ್ಷಸಮಾನವಾಗಿ ಮಾಡಿಕೊಳ್ಳಬಹುದೆಂದು "ಲಬ್ಧನಿರ್ಭರರಸೈರಧ್ಯಕ್ಷಿತೋ ಭಾವುಕೈಃ" ಎಂಬುದರಿಂದ ಆಚಾರ್ಯರು ಸೂಚಿಸಿದ್ದಾರೆ. "ಪಿಬತ ಭಾಗವತಂ ರಸಮಾಲಯಂ ಮುಹುರಹೋ ರಸಿಕಾ ಭುವಿ ಭಾವುಕಾಃ,"—ಎಂಬಲ್ಲಿ ಶ್ರೀ ಶುಕರೂ ಇದನ್ನು ತೋರಿಸಿದ್ದಾರೆ. ರಸಿಕರೂ ಭಾವುಕರೂ ಆದವರೇ ಆ ಬ್ರಹ್ಮರಸದ ಚರ್ವಣಕ್ಕೆ ಅಧಿಕಾರಿಗಳು. ನಾಟ್ಯಗಳು ಅಭಿನಯಿಸಲ್ಪಡುವಾಗ ಅಭಿನೇಯವಾದ ರಸವು ಸುಲಭಕರವಾಗಿ ಸಭ್ಯರಿಗೆ ಅನುಭವವಾಗುತ್ತದೆ. ರಸವೇ ನಾಯಕ, ನಟ, ಎಲ್ಲವೂ ಆದರೆ ಅವನ ಚೇಷ್ಟಿತವೆಲ್ಲವೂ ರಸಮಯವೇ ಆದೀತು. "ರಸೋ ವೈ ಸಃ, ರಸಂ ಹ್ಯೇವಾಯಂ ಲಬ್ಧ್ವಾನನ್ದೀ ಭವತಿ"— ಎಂಬ ಶ್ರುತಿಯು ಆನಂದಮಯನಾದ ಭಗವಂತನೇ ಮುಖ್ಯರಸವೆಂದೂ ಅವನ ಸಂಬಂಧದಿಂದ ಇತರ ಸುಖಗಳು ರಸವೆನಿಸುವುದೆಂದೂ ಶ್ರುತಪಡಿಸುತ್ತದೆ. ರಸಸ್ವರೂಪನಾದ ಭಗವಂತ ನಟನಾಗಿ ನಾಯಿಕೆಯೊಡಗೂಡಿ ನಡೆಸುವ ಲೋಕೋತ್ತರ ಭೂಮಿಕೆಗಳನ್ನು ನೋಡುವುದರಿಂದ ನಿಜವಾಗಿಯೂ ಭಾವುಕರಿಗೆ ಚಿತ್ತರಂಜನವಾಗದಿರದು. ಆಯಾ ಅವತಾರಗಳನ್ನು ವಿಚಿತ್ರವಾಗಿ ವರ್ಣಿಸಿರುವುದರಿಂದ ನಾಟಕಗಳಿಂದ ಆಗುವುದಕ್ಕಿಂತ ಅತಿಶಯವಾದ ಚಿತ್ತರಂಜನವನ್ನು ಆಚಾರ್ಯರು ಈ ಸ್ತೋತ್ರದಲ್ಲಿ ಉಂಟುಮಾಡಿದ್ದಾರೆ. ಆಯಾ ಅವತಾರಗಳನ್ನು ಕುರಿತು ಮಹರ್ಷಿಗಳು ಬಹು ಗ್ರಂಥಗಳಿಂದ ವರ್ಣಿಸಿರುವುದೆಲ್ಲ ಅತಿವಿಚಿತ್ರವಾಗಿ ಇದರ ಮೊದಲನೆಯ ಶ್ಲೋಕದಲ್ಲಿಯೇ ಸಂಗೃಹೀತವಾಗಿದೆ.

ಪ್ರಪಂಚವು ಒಂದು ರಂಗಸ್ಥಳ. ಈಶ್ವರ ಮತ್ತು ಚೇತನರೆಲ್ಲ ನಟರು. ಶುದ್ಧ
ಚೈತನ್ಯವು ಇದರಲ್ಲಿ ಅನುಗತವಾಗಿದ್ದರೂ, ವಿವಿಧ ಇವರೆಲ್ಲ ಭೂಮಿಕೆಗಳನ್ನು ಪರಿಗ್ರ
ಹಿಸಿ ನಟನಮಾಡುತ್ತಲೇ ಇದ್ದಾರೆ ನಾವು ನಮ್ಮ ನಾಟ್ಯದಿಂದ ಭಗವಂತನಿಗೆ ಲೀಲಾ
ರಸವನ್ನುಂಟುಮಾಡುತ್ತೇವೆ ನಮ್ಮನ್ನು ಉದ್ಧರಿಸಲಿಚ್ಛೆಯಿಂದ ಅವನು ವಿವಿಧ
ವೇಷಗಳಿಂದ ಇಲ್ಲಿ ಅವತರಿಸಿ ನಟನ ಮಾಡುತ್ತಾನೆ. ನಮ್ಮ ಆರ್ತಿ ಅವನನ್ನು ಕೆಳಕ್ಕೆ
ಬರಮಾಡುತ್ತದೆ. ನಮ್ಮ ಉನ್ನಿನೀಷೆಯಿಂದ ಅವನು ಅವತರಿಸುತ್ತಾನೆ.

> ಕಾನ್ತಾಂ ಪ್ರಾಪ್ಯ ವಿಚಿತ್ರಕರ್ಮರಚಿತಾಂ ಪರ್ಯಾಯತೋ ಭೂಮಿಕಾಂ
> ಕೇನಾಪ್ಯದ್ಭುತನಾಟಕೇನ ಕಮಪಿ ಶ್ರೀಮನ್ತಮಾನಂದಯನ್ ।
> ಕೃತ್ವಾ ಶಾಸ್ತ್ರಮುಖೇಷು ನಃ ಪ್ರತಿಮುಖಂ ಗರ್ಭಾರ್ಣವಮರ್ಶಾತ್ಪರಂ
> ವಿದ್ಯಾನಿರ್ವಹಣೇನ ನಿರ್ಭರರಸೋ ಹೃದ್ಯೇಷ ವಿದ್ಯೋತತೇ ॥"

ಎಂದು ನ್ಯಾಯಸಿದ್ಧಾಂಜನದಲ್ಲಿ ಆಚಾರ್ಯರು ಹೇಳಿರುವರು. ನಟನಂತೆ ವಿವಿಧ
ವೇಷಗಳನ್ನು ಪರಿಗ್ರಹಿಸುವ ಭಗವಂತನನ್ನು ನಾವೂ ವಿವಿಧ ವೇಷಪರಿಗ್ರಹದ
ಮೂಲಕ ಲೀಲಾರಸವನ್ನುಂಟುಮಾಡಿ ಸಂತೋಷಪಡಿಸುತ್ತೇವೆ. ಎಂದಾದರೂ
ಅಹೃದಯವಾಗಿಯಾದರೂ ಪ್ರಪನ್ನನೆಂಬ ವೇಷಪರಿಗ್ರಹಿಸಿದೆವಾದರೆ, ಅಷ್ಟು
ಮಾತ್ರದಿಂದಲೇ ಸಂತೋಷಿತನಾದ ಶ್ರಿಯಃಪತಿಯು ನಮ್ಮನ್ನು ಹೃದಯದಲ್ಲಿ
ಭೂಷಣವನ್ನಾಗಿ ಧರಿಸಿ ಬೆಳಗುತ್ತಾನೆ. "ಏಷಹ್ಯೇವಾಸನ್ನಯಾತಿ"—ಎಂಬಂತೆ
ಎಲ್ಲರ ಆನಂದಕ್ಕೂ ಹೇತುವಾದ ಭಗವಂತನೂ ಈ ಅಪೂರ್ವ ಪ್ರಪನ್ನ ವೇಷದಿಂದ
ಆನಂದಿತನಾಗುತ್ತಾನೆ. ಅದ್ಭುತ ನವನಾಟಕಗಳಲ್ಲಿ ಜನರಿಗೆ ವಿಶೇಷ ಪ್ರೀತಿ, ಅದ್ಭು
ತತ್ವ-ನೂತನತ್ವಗಳೇ ಇದಕ್ಕೆ ನಿಮಿತ್ತಗಳು. ಪ್ರಪನ್ನವೇಷವು ಚೇತನನಿಗೆ ನೂತನ;
ಭಗವಂತನಿಗೆ ಅದ್ಭುತವೂ ನೂತನವೂ ಆಗಿದೆ. "ನ ನಮೇಯಂ ಹಿ ಕಂಚನ,"
"ಕೋಽನ್ಯೋಽಸ್ತಿ ಸದೃಶೋ ಮಯಾ", "ಈಶ್ವರೋಽಹಂ"–ಇತ್ಯಾದಿಯಾಗಿ ಅಹಂ
ಭಾವ ಮದಮತ್ತರಾದ ಸ್ತಬ್ಧ ಜನರೊಳಗೆ ಪ್ರಪತ್ತ್ಯಗಳು ಸುದುರ್ಲಭ. ಅಪೂರ್ವವೂ
ಅದ್ಭುತವೂ ಆದ ಆ ವೇಷಪರಿಗ್ರಹಿಸಿದ ಕ್ಷಣವೇ ಮಹಿಷಿಯೊಡನೆ ಭಗವಂತನು
ಸಂತೋಷಿಸುವನು. ಮತ್ತು ಅತ್ಯಾಶ್ಚರ್ಯಗೊಳ್ಳುವನು. ನಾವು ಕೈಮುಗಿಯುವು
ದೊಂದೇ ಮಾತೆಯ ಸಂತೋಷಕ್ಕೆ ಸಾಕು. ಗಾತ್ರಪ್ರಮಾಣವೂ ಅವಳಿಗೆ ಬೇಕಿಲ್ಲ.
ಅವಳು ಪ್ರೀಣಿತಳಾದರೆ ಅವಳ ಇಂಗಿತಕ್ಕೆ ಪರಾಧೀನನಾದ ಪತಿಯೂ ಒಡನೆ ಪ್ರೀತ
ನಾಗುವನು. ನಟನ ವಿಚಿತ್ರ ಭೂಮಿಕೆಯಿಂದ ಸಂತೋಷಗೊಂಡ ಲೌಕಿಕ ಪ್ರಭುವು
ಅವನಿಗೆ ಆಭರಣಾದಿಗಳನ್ನು ಪಾರಿತೋಷಕವನ್ನಾಗಿ ಕೊಟ್ಟು ಬಹುಮಾನಿಸುವನು.
ಅವನು ಅದನ್ನು ವಕ್ಷಸ್ಸಿನಲ್ಲಿ ಧರಿಸಿ ಪ್ರಭುವಿನ ಪ್ರಸಾದವನ್ನು ಪ್ರಕಟಪಡಿಸುವನು.
ವಿಲಕ್ಷಣನಾದ ಈ ಜಗದೀಶ್ವರನಾದರೋ ನಟನನ್ನೇ ಅತಿಹೃದ್ಯವಾದ ಆಭರಣದಂತೆ
ಸದಾ ತನ್ನ ಹೃದಯದಲ್ಲಿ ಧರಿಸುವನು; ಆದರಿಂದ ಮತ್ತಷ್ಟು ಔಜ್ಜ್ವಲ್ಯವುಂಟಾ
ದಂತೆಯೂ ಭಾವಿಸುವನು. ನಟನಾದ ಭಗವಂತನು ನಟರಾದ ನಮ್ಮ ನಟನಗಳಿಂದ

ಆರಾಧಿತನಾಗುತ್ತಾನೆ. ಸಗಂಧರಲ್ಲಿ ಪ್ರೀತಿ ಸಹಜ. ನಟನ ಕ್ಲೇಶವನ್ನು ನಟನೇ ಬಲ್ಲ. ಇದನ್ನೇ ಆಚಾರ್ಯರು "ಸ್ವಾಧೀನಸಂಸರಣ ನಾಟ್ಯನಿರೂಢವೃತ್ತೇಃ ಸಂತೋಷಿತಃ ಪ್ರಣತಭೂಮಿಕಯಾಸ್ಯ ಪುಂಸಃ ! ಸ್ಥಾನೇ ವಿಧಾಸ್ಯತಿವಿಭುಃ ಸ್ಥಿರಚಿತ್ತ ಭೇದಂ ಕ್ರೀಡಾನಟಸ್ಸ ಭಗವಾನ್ ಕೃಪಯಾಸ್ವಸಾಮ್ಯಂ ॥" ಎಂದು ಅನ್ಯತ್ರ ಹೇಳಿದ್ದಾರೆ.

ಯಜ್ಞಾದಿ ಭಗವದುತ್ಸವಗಳಲ್ಲಿ ಭಗವಂತನನ್ನೂ ಯಾತ್ರಿಕರನ್ನೂ ನಾಟಕ ನಾಟನದಿಂದಲೂ ನೃತ್ತ ಗೀತಾದಿಗಳಿಂದಲೂ ಆರಾಧಿಸುತ್ತೇವೆ. "ದೇವಾನಾಮಿದಮಾಮನನ್ತಿ ಮುನಯಃ ಕಾನ್ತಂ ಕ್ರತುಂ- ಚಾಕ್ಷುಷಂ"—ಎಂದು ನಾಟ್ಯೋಪಾಧ್ಯಾಯ ಹೇಳಿದ್ದಾನೆ "ನಾಟ್ಯಂ ಭಿನ್ನರುಚೇರ್ಜನಸ್ಯ ಬಹುಧಾ- ಪ್ಯೇಕಂ ಸಮಾರಾಧನಂ"—ಎಂದು ಅವನೇ ಹೇಳಿರುವಂತೆ ಇದು ಎಲ್ಲರಿಗೂ ಪ್ರೀಣನವಾದದು. ನಾವು ನಡೆಸುವ ವಿವಿಧ ನಾಟಕಗಳಿಂದ ಆರಾಧಿತನಾಗಿ ಕೃತಜ್ಞ ಸಾರ್ವಭೌಮನಾದ ದೇವನು ಶ್ರೀ ದೇವಿಯೊಡನೆ ವಿವಿಧ ಭೂಮಿಕೆಗಳನ್ನು ಪರಿಗ್ರಹಿಸಿ ನಾಟಕಗಳನ್ನು ನಡೆಸುವನು. ಈ ಸ್ತೋತ್ರಾರಂಭದಲ್ಲಿರುವ ದೇವ ಶಬ್ದಕ್ಕೆ ಕ್ರೀಡಾನಟನೆಂದು,

"ನಟವದ್ಭೂಮಿಕಾಭೇದೈಃ ನಾಥ ದೀವ್ಯನ್ ಪ್ರಥಗ್ವಿಧೈಃ।

ಪುಂಸಾಮನನ್ಯಭಾವಾನಾಂ ಪುಷ್ಣಾಸಿರಸಮದ್ಭುತಂ।—ಎಂಬ ಶ್ರೀಯಾದವಾಭ್ಯುದಯದಲ್ಲಿಯ ಶ್ಲೋಕವು ಈ ಸ್ತೋತ್ರದ ಪ್ರಥಮ ಶ್ಲೋಕಕ್ಕೆ ಅತ್ಯಂತ ಸದೃಶ. ಇಲ್ಲಿಯ ನಿರ್ಭರ ಶಬ್ದಕ್ಕೆ ಸಂಪೂರ್ಣ ಮತ್ತು ಪ್ರಪತ್ತಿ ಎಂದು ಎರಡರ್ಥ. ನಿರ್ಭರತ್ವರೂಪ ಪ್ರಪತ್ತಿರಸಾವಿಷ್ಟರಾದ ನಮಗೆ ನಿರ್ಭರ(ಸಂಪೂರ್ಣ) ರಸವನ್ನು ದೊರಕಿಸುವುದಕ್ಕಾಗಿ ಭಗವಂತನು ರಾಮಕೃಷ್ಣಾದಿ ಭೂಮಿಕೆಗಳನ್ನು ಪರಿಗ್ರಹಿಸುವನು. ನಿರ್ಭರನಿಗೆ ಕೊಡಬೇಕಾದುದು ನಿರ್ಭರರಸವೇ ಅಲ್ಲವೇ! ನಿರ್ಭರರಾದ ಪ್ರಪನ್ನರಿಗೆ ನಿರ್ಭರ ರಸವೇ ಪ್ರಾಪ್ತವಾಗುವುದೆಂದು 'ಲಬ್ಧ ನಿರ್ಭರರಸೈಃ' ಎಂಬುದರಿಂದ ಆಚಾರ್ಯರು ಸುಂದರವಾಗಿ ವ್ಯಕ್ತಪಡಿಸಿದ್ದಾರೆ. ಭಗವಂತನ ದಶಭೂಮಿಕೆಗಳಿಗೂ ಭೂಮಿಕೆಯಾದುದು ಈ ಪ್ರಥಮ ಶ್ಲೋಕ. "ಪ್ರಪಂಚಂ ನಿಷ್ಪ್ರಪಂಚೋಽಪಿ ವಿಡಂಬಯಸಿ ಭೂತಲೇ

ಪ್ರಪನ್ನ ಜನತಾನನ್ದಸನ್ದೋಹಂ ಪ್ರಥಿತುಂ ಪ್ರಭೋ॥-"ಎಂದು ಬ್ರಹ್ಮನು ಶ್ರೀಕೃಷ್ಣನಿಗೆ ಹೇಳಿದ್ದಾನೆ. ಇದರಿಂದ ಅವತಾರಪ್ರಯೋಜನ ದರ್ಶಿತವಾಗಿದೆ. "ನಃ ಶುಭಮಾತನೋತು," -ಎಂಬಲ್ಲಿ ಶುಭವೆಂಬುದು ಆನಂದಸಂದೋಹ. ಅದ್ಭುತ ಪ್ರಪನ್ನ ವೇಷ ಪರಿಗ್ರಹಿಸುವ ನಮಗೆ ತನ್ಮಾತ್ರಪ್ರೀತನಾದ ದೇವನು ತನ್ನ ಅದ್ಭುತ ಭೂಮಿಕೆಗಳಿಂದ ಅದ್ಭುತರಸವನ್ನು ಪೋಷಿಸುತ್ತಾನೆ "ಧರ್ಮಸಂಸ್ಥಾಪನಾರ್ಥಾಯ" "ಪರಿತ್ರಾಣಾಯ ಸಾಧೂನಾಂ"- ಎಂದು ಸಾಮಾನ್ಯವಾಗಿ ಹೇಳಿದ ಅವತಾರ ಪ್ರಯೋಜನ ಇದರಲ್ಲಿ ಪರ್ಯವಸಿತವಾಗುತ್ತದೆ. ಲಾವಣ್ಯ ಧಾಮವಾದ ತನ್ನ ಅದ್ಭುತ ವಿಗ್ರಹವನ್ನು ಸಕಲರಿಗೂ ಗೋಚರಪಡಿಸದಿದ್ದಲ್ಲಿ ವಿಶ್ವವು ಅಮೃತ ಪ್ಲಾವನದಿಂದ ಆಪ್ಯಾಯಿತವಾಗುವುದು ಹೇಗೆ? ಅಕ್ರೂರಮಾಲಾಕಾರಾದಿ ಪರಮ- ಭಾಗವತರ

ದೃಷ್ಟಿ ಚಿತ್ತಾಪಹರಣದ ಮೂಲಕ ಅವರಿಗೆ ಅವನಲ್ಲಿ ಭಕ್ತಿವಿವೃದ್ಧಿಯಾಗುವುದು ಹೇಗೆ?

ಅವತಾರಗಳಲ್ಲಿ ಸಕಲರಿಗೂ ಕಾಣಿಸುವುದಕ್ಕಾಗಿ ಭೂಮಿಕೆಯನ್ನು ಪರಿಗ್ರಹಿಸಿದ್ದರೂ ನಿರತಿಶಯ ಬೃಹತ್ಸ್ವರೂಪವಾದ ತನ್ನ ಮಹಿಮೆಯನ್ನೂ ಬಿಟ್ಟಿರುವುದಿಲ್ಲವೆಂದು "ಅಜಹದ್ರೂಪಮಾ ಸ್ವಯಂ ಭೂಮಿಕಾಂ,–" ಎಂಬುದರಿಂದ ಬೋಧಿತವಾಗುತ್ತದೆ.

"ವರಯೇ ವೈಷ್ಣವ ವೈಭವಾವತಾರಂ,"–ಎಂದು ಅತಿಮಾನುಷಸ್ತವ ಪ್ರಥಮ ಶ್ಲೋಕದಲ್ಲಿ ಹೇಳಿರುವಂತೆ ವಿಷ್ಣುವಿನ ಅವತಾರದಲ್ಲಿ ಅವನ ವೈಭವವೂ ಅವತರಿಸುತ್ತದೆ.

"ಅನಾಸೀದದ್ದೋಷೋ ಜಹದವಧಿ ಷಾಡ್ಗುಣ್ಯಮಹಿಮಾ
ವಿಹಾರಸ್ವಾಚ್ಛಂದ್ಯಾದ್ವಿಭುರಿಹ ದಧಾನೋ ವಿಭವತಾಂ।
ತಿರಶ್ಚಾಮುಷ್ಮೈತ್ಯೈಃ ಕಮಠ ಕಿಟಿಮೀನಪತಗ—
ಪ್ರಕಾರೈರಾಕಾರೈಃ ಪರಿಬೃಢತಮತ್ವಂ ದೃಢಯತಿ ॥"

—ಎಂದು ಶ್ರೀಸಂಕಲ್ಪಸೂರ್ಯೋದಯದಲ್ಲಿಯೂ ಆಚಾರ್ಯರು ಹೇಳಿದ್ದಾರೆ. ಸರ್ವಶರಣ್ಯನಾದರೂ ದೋಷವೊಂದಕ್ಕೆ ಮಾತ್ರ ಶರಣ್ಯನಲ್ಲವೆಂದು— "ಅನಾಸೀದದ್ದೋಷಃ"–ಎಂಬುದರಿಂದ ವ್ಯಂಜಿತ ದೋಷಗಳು ಅವನಲ್ಲಿ ಶರಣಹೊಂದುವುದಿಲ್ಲ. "ದೋಷೋ ಯದ್ಯಪಿ ಕಸ್ಯಸ್ಯಾತ್,"— ಎಂಬಂತೆ ಆಸನ್ನರಲ್ಲಿ ದೋಷವನ್ನೂ ಮರ್ಷಿಸುತ್ತಾನೆ. ದೋಷ ಆಸನ್ನವಾದರೆ ಮಾತ್ರ ಸಹಿಸನು. "ಬ್ರಹ್ಮ ಪರಿಬೃಢಂ ಸರ್ವತಃ," "ಬ್ರಹ್ಮಕಕಂ,"— ಇತ್ಯಾದಿಗಳಲ್ಲಿ ಶ್ರುತವಾಗಿರುವ ಬ್ರಹ್ಮಲಕ್ಷಣ ಸಮನ್ವಯವಾಗುವುದಕ್ಕಾಗಿ ತಿರ್ಯಗ್ಭೂತಸರ್ವಪ್ರಾಣಿ ಪ್ರಕಾರಾಕಾರಗಳನ್ನು ಭಗವಂತನು ಪರಿಗ್ರಹಿಸುತ್ತಾನೆ. ಸರ್ವತ್ವವಿಲ್ಲದಲ್ಲಿ ಬ್ರಹ್ಮತ್ವಸಂಭವಿಸುವುದು ಹೇಗೆ? ಸರ್ವತ್ವನಿರ್ವಾಹಕ್ಕಾಗಿ ಬ್ರಹ್ಮಕ್ಕೆ ದಾಶ-ದಾಸ-ಕಿತವಾದಿಪದಸಾಮಾನಾಧಿಕರಣ್ಯವನ್ನು ಶ್ರುತಿ ಕೀರ್ತಿಸಿದೆ. "ಬ್ರಹ್ಮದಾಶಾ, 'ಬ್ರಹ್ಮದಾಸಾ, ಬ್ರಹ್ಮೇಮೇ ಕಿತವಾ...."ಎಂದು. ಅಲ್ಲದೆ ಬ್ರಹ್ಮ ಈ ದಾಶಾದಿಗಳಿಗೆ ಸಮನಾಗಿರುವುದನ್ನು ನೋಡಿ ಶ್ರುತಿ ಆಶ್ಚರ್ಯಪಡುತ್ತದೆ. ಇದನ್ನು ಕಂಡು ಬ್ರಹ್ಮವು, ಇದೇನು ಮಹಾ ಆಶ್ಚರ್ಯ! ದಾಶರಿಂದ ಜಾಲಗಳಿಂದ ಹಿಡಿಯಲ್ಪಟ್ಟ ಅವರಿಗಿಂತ ನಿಹೀನವಾದ ಮತ್ಸ್ಯವೇ ತಾನಾಗುವೆನೆಂದು ಮೊದಲು ಮತ್ಸ್ಯರೂಪದಿಂದ ಅವತರಿಸಿದೆಯೋಎಂದು ತೋರುತ್ತದೆ. ಬ್ರಹ್ಮತಾನೇ ಮುಖ್ಯ 'ಕಿತವ'ವೂ ಆಗಿದೆಯೆಂದು 'ಗೋಪಿಸ್ತ್ರೀಣಾಂ ಜಯತಿ ಕಿತವಃ ಕೋಟಿ ಕೌಮಾರಹಾರೀ," ಎಂಬಲ್ಲಿ ಆಚಾರ್ಯರು ತೋರಿಸಿದ್ದಾರೆ. 'ಬ್ರಹ್ಮದಾಸಾಃ' —ಎಂದು ಶ್ರುತವಾಗಿರುವಂತೆ ದಾಸ್ಯವನ್ನು ಸರ್ವ ಪ್ರಾಣೋಚಂ ಸರ್ವವಿಧದಲ್ಲಿಯೂ ತಾನು ಮಾಡುವುದಾಗಿ ಶ್ರೀ ಗೀತೆಯಲ್ಲಿ ‹‹ಅಹಂ ವೈಶ್ವಾನರೋ ಭೂತ್ವಾ ಪ್ರಾಣಿನಾಂ ದೇಹಮಾಶ್ರಿತಃ। ಪ್ರಾಣಾಪಾನ ಸಮಾಯುಕ್ತಃ ಪಚಾಮ್ಯನ್ನಂ ಚತುರ್ವಿಧಂ ॥

ಎಂದು ಬ್ರಹ್ಮರೂಪಿಯಾದ ಶ್ರೀಕೃಷ್ಣನೇಹೇಳಿಕೊಂಡಿದ್ದಾನೆ.

ನಾವು ನಿದ್ರಿಸುವಾಗ ನಮ್ಮ ಅನ್ತರವಯವಗಳಲ್ಲಿದ್ದುಕೊಂಡು ವೈಶ್ವಾನರರೂಪಿಯಾದ ಭಗವಂತ ಭುಕ್ತವಾದ ಅನ್ನವನ್ನು ಪಚನಮಾಡುತ್ತಾನೆ. ಬಾಹ್ಯಪಾಚಕರಿಗೆ ಅಧಿಕಾಧಿಕ ವೇತನವನ್ನು ಕೊಟ್ಟು ಕೆಲಸಮಾಡಿಸುತ್ತಾರೆ. ಇವನು ಎಲ್ಲ ಪ್ರಾಣಿಗಳಿಗೂ ಸ್ವಯಂ ದಾಸನಾದ ಅನ್ತಃಪಾಚಕ. ತಿರ್ಯಕ್ಕಾಗಿ ಹುಟ್ಟುವುದು ಅತಿನಿಹೀನವೂ ದುರ್ಘಟವೂ ಆದುದರಿಂದ ಮೊದಲು ಮೂರು ಅವತಾರಗಳಲ್ಲಿ ಅದು ಘಟಿಕವಾಗಿದೆ. ಈ ವಿಹಾರಸ್ವಾಚ್ಛನ್ದ್ಯದಿಂದ ಅವನು 'ದೇವಃ' ಎಂದು ಈ ಸ್ತೋತ್ರಾರಂಭದಲ್ಲಿಯೇ ಕೀರ್ತಿಸಿದ್ದಾರೆ. ಅತಿ ನಿಹೀನಯೋನಿಗಳಲ್ಲಿ ಅವತರಿಸುವುದು ಅಧೋಗಮನ ರೂಪವಾದ ಅವತಾರದ ಕಾಷ್ಠೆಗೆ ನಿರ್ವಾಹಕವಾಗಿದೆ. ಪ್ರತ್ಯವತಾರದಲ್ಲಿಯೂ ಅಜಹದ್ಭಾವತ್ವ ಮತ್ತು ನಿರತಿಶಯ ವೈಭವಗಳು ಈ ಸ್ತೋತ್ರದಲ್ಲಿ ಪ್ರದರ್ಶಿತವಾಗಿದೆ.

ಮತ್ಸ್ಯಃ ಕೂರ್ಮೋ ವರಾಹೋ ನರಹರಿಣಪತಿರ್ವಾಮನೋ ಜಾಮದಗ್ನ್ಯಃ
ಕಾಕುತ್ಸ್ಥಃ ಕಂಸಘಾತೀ ಮನಸಿಜವಿಜಯೀ ಯಶ್ಚ ಕಲ್ಕೀ ಭವಿಷ್ಯನ್ ।
ವಿಷ್ಣೋರಂಶಾವತಾರಾಃ ಭುವನಹಿತಕರಾ ಧರ್ಮಸಂಸ್ಥಾಪನಾರ್ಥಾಃ
ಪಾಯಾಸುರ್ಮಾಂ ತ ಏತೇ ಗುರುತರ ಕರುಣಾಭಾರ ಖಿನ್ನಾಶಯಾಸ್ತೇ ॥"

—ಎಂಬಲ್ಲಿ ಮೋಘಭೂತನಾದ ಭಗವಂತನು ನಿರವಧಿ ಕರುಣಾಭಾರ ಖಿನ್ನನಾದುದರಿಂದ ಅವತರಿಸುವುದಾಗಿ ಶ್ರೀ ಶಂಕರಾಚಾರ್ಯರು ಸುಂದರವಾಗಿ ಪ್ರದರ್ಶಿಸಿದ್ದಾರೆ. ಕರುಣೈಕ ಜೀವಿತನಾದ ಭಗವಂತ ಆರ್ತರ ಆರ್ತಿ ಪರಿಹರಣಮಾಡದೆ ಜೀವಿಸುವಾಗ ಆಶ್ರಿತರ ಅಪರಾಧಗಳೇ ಅವನ ದಯೆಗೆ ಪ್ರಿಯವಾದ ಅನ್ನಪಾನ. ಆರ್ತಿಪರಿಹರಣವೇ ಅದಕ್ಕೆ ಜೀವನ. ಭಗವಂತನ ದಯೆ ಸದಾ ಕ್ಷುಧಿತವೂ ಬುಭುಕ್ಷಿತವೂ ಆಗಿದೆ. ಪರಮಪದದಲ್ಲಿ ಆರ್ತ, ಅಪರಾಧಿ ಯಾವನೂ ಇಲ್ಲ. ಅಲ್ಲಿ ಆರ್ತ್ಯಪರಾಧಿಗಳಿಗೆ ಅತ್ಯಂತ ಅಭಾವವಿರುವುದರಿಂದ ಕ್ಷಮಾದಯಾದಿ ಜೀವಿತನಾದ ಭಗವಂತ ಹೇಗೆ ಜೀವಿಸಬೇಕು? ಅದಕ್ಕಾಗಿ ಕ್ಷುಧಾರ್ತನಾದ ಅವನು ಆರ್ತಿಭೂಯಿಷ್ಠವೂ ಅಪರಾಧಭೂಯಿಷ್ಠವೂ ಅದ್ದರಿಂದಲೇ ಬಹ್ವನ್ನವುಳ್ಳದ್ದೂ ಆದ ಭೂಮಿಗೆ ಇಳಿದು ಬರುತ್ತಾನೆ. ತತ್ಸಂಪನ್ನರೂ ಆಢ್ಯರೂ ಆದ ನಮ್ಮಲ್ಲಿ ಕ್ಷುನ್ನಿವೃತ್ತಿಗಾಗಿ ಆರ್ತಿ ಅಪರಾಧಗಳೆಂಬ ಆ ಅನ್ನವನ್ನು ಕ್ಷುಧಿತರಂತೆ ಯಾಚಿಸುತ್ತಾನೆ.

"ಕಾಮೀ ಕಶ್ಚಿತ್ಕರಕಮಲಯೋರಂಜಲಿಂ ಯಾಚಮಾನಃ"— ಎಂಬಂತೆ ಅಂಜಲಿಯನ್ನು ಯಾಚಿಸುವ ವಿಚಿತ್ರ ಕಾಮಿಯಲ್ಲವೇ ಅವನು! ಆ ಅಭ್ಯಾಗತನಲ್ಲಿ ನಮ್ಮ ಆರ್ತಿಗಳನ್ನು ನಿವೇದನಮಾಡಿ 'ಕ್ಷಮಸ್ವ'— ಎಂದು ನಮ್ಮ ಅಪರಾಧಸಹಸ್ರಗಳನ್ನು ಉಪಹಾರವಾಗಿ ಸಮರ್ಪಿಸಿ ಅವನನ್ನು ಚೆನ್ನಾಗಿ ಆರಾಧಿಸಲು ನಾವು ಅರ್ಹರು.

ದೇವನು ಅವತರಿಸುವಾಗಲೆಲ್ಲ ದೇವಿಯೂ ಛಾಯೆಯಂತೆ ಅವನೊಡನೆ ತಾನೂ ಅವತರಿಸುತ್ತಾಳೆ. ಅವನು ನಟನಾಗುವಂತೆ ಇವಳು ನಟೀ. ಛಾಯೆಗೆ ನಮ್ಮೊಡನೆ ಬರಲು ಅನುಜ್ಞೆಬೇಕಲ್ಲ. ನಮ್ಮ ನಿಷೇಧವನ್ನು ಅದು ಕೇಳುವುದಿಲ್ಲ. ತಾನಾಗಿಯೇ ನಮ್ಮನ್ನು ಬಿಡದೆ ಜೊತೆಯಲ್ಲಿ ಬರುತ್ತದೆ. ಹಾಗೆಯೇ ಭಗವಂತನಿಗೆ ಈ ದೇವೀ ಎನ್ನಲು 'ಭಾವಾನ್ ಸ್ವಯಂ ಬಿಭ್ರತೀ'-ಎಂಬಲ್ಲಿ 'ಸ್ವಯಂ' —ಶಬ್ದ ಪ್ರಯೋಗವಿದೆ. "ಛಾಯಾಸ್ಸಜೀವಾ ಇವ ಧರ್ಮದಾರಾಃ,"—ಎಂಬಂತೆ ಭಗವಂತನ ಸಜೀವವಾದ ಛಾಯೆ ಇವಳು. ಕರುಣೆಯೇ ಅವತಾರಕ್ಕೆ ನಿಮಿತ್ತ. ಅವತಾರ ಕಾರ್ಯವೆಲ್ಲ ಕರುಣಾಕಾರ್ಯ. ಕರುಣಾರೂಪಿಣಿಯಾದ ಇವಳಿಲ್ಲದೆ ಅದು ಹೇಗೆ ಘಟಿಸಬೇಕು?

ಅವತಾರಗಳು ಭೂಮಿಕೆಗಳೆಂದು ರೂಪಿಸಿದ ಮೇಲೆ ಆ ಭೂಮಿಕೆಗಳನ್ನು ರಂಗದಲ್ಲಿ ಪರಿಗ್ರಹಿಸುವುದೇ ಉಚಿತ. ಶ್ರೀರಂಗದಲ್ಲಿ ದಶಾವತಾರ ಮೂರ್ತಿಗಳನ್ನು ನೋಡುತ್ತೇವೆ. ಆದ್ದರಿಂದ, 'ನಿರ್ವರ್ತಯನ್ ಭೂಮಿಕಾಂ ರಂಗೇ ಧಾಮನಿ, —' ಎಂದಿದೆ. ನಟನಿಗೆ ನಾಟ್ಯಕುಲ ವಿದ್ಯೆ ಹೇಗೋ ಹಾಗೆ ರಂಗ ಕುಲಧನ. "ರಾಮಾದೀನಾಂ ಕುಲಧನಮಿದಂ ರಂಗತಾಂ ಯಾತಿ ರಂಗಂ||" —ಎಂದಿದೆ. ಸರ್ವಾಶ್ಚರ್ಯಮಯನಾದ ದೇವನ ಇಂತಹ ಅದ್ಭುತ ಪ್ರದರ್ಶನವನ್ನು ಮತ್ತೆಲ್ಲಿ ನೋಡಲು ಸಾಧ್ಯ? ಇದನ್ನು ಆಚಾರ್ಯರು ತಾವು ಅನುಭವಿಸಿ, 'ಏಕಃ ಸ್ವಾದು ನ ಭುಂಜೀತ' ಎಂಬ ಔದಾರ್ಯದಿಂದ ನಮಗೂ ಅನುಭವಮಾಡಿಸಿದ್ದಾರೆ.

ದೇವ್ಯೋನಶ್ಶುಭಮಾತನೋತು ದಶಧಾನಿರ್ವರ್ತಯನ್ ಭೂಮಿಕಾಂ
ರಂಗೇಧಾಮಿನಿ ಲಬ್ಧನಿರ್ಭರರಸೈರಧ್ಯಕ್ಷಿತೋ ಭಾವುಕೈಃ ।
ಯಾದ್ಭಾವೇಷು ಪೃಥಗ್ವಿಧೇಷ್ವನುಗುಣಾನ್ ಭಾವಾನ್ ಸ್ವಯಂ ಬಿಭ್ರತೀ
ಯದ್ಧರ್ಮ್ಯೈರಿಹ ಧರ್ಮಿಣೀ ವಿಹರತೇ ನಾನಾಕೃತಿರ್ನಾಯಿಕಾ
॥ ೧ ॥

ಅರ್ಥ:—[ಪೃಥಗ್ವಿಧೇಷು]=ಬೇರೆ ಬೇರೆ ಅಥವಾ ಹೀನ ಪ್ರಕಾರಗಳಾದ [ಯದ್ಭಾವೇಷು]=ಯಾವನ ಅವತಾರ ಅಥವಾ ಮನೋಭಾವಗಳಲ್ಲಿ [ಅನುಗುಣಾನ್]=ಅನುರೂಪಗಳಾದ [ಭಾವಾನ್]=ಅವತಾರ ಅಥವಾ ಮನೋಭಾವಗಳನ್ನು [ಸ್ವಯಂ]=ತಾನಾಗಿಯೇ [ಬಿಭ್ರತೀ]=ವಹಿಸುವವಳಾಗಿಯೂ [ಯದ್ಧರ್ಮ್ಯೈಃ]=ಯಾವನ ಶರಣ್ಯತ್ವರೂಪಧರ್ಮಗಳೊಡನೆ [ಧರ್ಮಿಣೀ]=ಸಮಾನ ಧರ್ಮವುಳ್ಳವಳಾಗಿಯೂ [ನಾಯಿಕಾ]=ದಿವ್ಯಮಹಿಷಿ ಅಥವಾ ನಟಿಯು [ನಾನಾಕೃತಿಃ]=ವಿವಿಧ ಕೃತಿಗಳುಳ್ಳವಳಾಗಿ [ಇಹ]=ಇಲ್ಲಿ [ವಿಹರತೇ]=ಕ್ರೀಡಿಸುತ್ತಾಳೆಯೋ, ಅಂಥ, [ರಂಗೇ]=ಶ್ರೀರಂಗವೆಂಬ [ಧಾಮನಿ]=ಗೃಹದಲ್ಲಿ [ದಶಧಾ]=ಹತ್ತು ವಿಧವಾಗಿ [ಭೂಮಿಕಾಂ]=ವೇಷವನ್ನೂ [ನಿರ್ವರ್ತಯನ್]=ಪರಿಗ್ರಹಿಸುವವ

ನಾಗಿ [ಲಬ್ಧನಿರ್ಭರರಸೈಃ]=ದೊರಕಿದ ಪೂರ್ಣ ಅಥವಾ ಪ್ರಶಸ್ತಿರೂಪ ಆನಂದ ವುಳ್ಳ [ಭಾವುಕೈಃ]=ಭಕ್ತರಿಂದ ಅಥವಾ ಅಭಿನವದಶಾವತಾರರಾದ ಆಳ್ವಾರ್‌ಗಳಿಂದ [ಅಧ್ಯಕ್ಷಿತಃ]=ದೃಷ್ಟನಾದ [ದೇವಃ]=ಕ್ರೀಡಾನಟ ಅಥವಾ ಶೋಭಾಯಮಾನ ನಾದ ಶ್ರೀರಂಗನಾಥನು [ನಃ] = ನಮಗೆ [ಶುಭಂ]= ತನ್ನ ದಿವ್ಯ ವಿಗ್ರಹವನ್ನು ಅಥವಾ ಸ್ವಸಾಕ್ಷಾತ್ಕಾರದಿಂದುಂಟಾದ ಆನಂದ ಸಂದೋಹವನ್ನು [ಆತನೋತು]= ವಿಸ್ತರಿಸಲಿ.

ಭಾವ. **ದಶಾವತಾರ ಭೂಮಿಕೆ:** ಕ್ರೀಡೆ ಮತ್ತು ಕಾನ್ತ್ಯರ್ಥಗಳಲ್ಲಿ ಇಲ್ಲಿಯ ದೇವ ಶಬ್ದ ಪ್ರಯುಕ್ತವಾಗಿದೆ. ರಂಗಸ್ಥಳದಲ್ಲಿ ನಟನಿರಬೇಕು. ನಟರನ್ನೂ ರಂಗ ಶಾಲೆಯನ್ನೂ ಪ್ರಕಾಶಗೊಳಿಸಲು ಅತ್ಯೂರ್ಜಿತ ತೇಜೋವತ್ತಾದ ದೀಪವಿರಬೇಕು. ಈ ದೇವನೇ ಎರಡೂ ಆಗಿದ್ದಾನೆಂದು 'ದೇವ' ಶಬ್ದದಿಂದ ಬೋಧಿತವಾಗುತ್ತದೆ. ನಾಟಕವಾಡುವುದು ನಿಶೆಯಲ್ಲಿ; ಪ್ರಕೃತ ನಾಟಕಗಳು ಸಂಸಾರ ನಿಶೆಯಲ್ಲಿ ನಡೆಯು ತಕ್ಕವು. ಸ್ವಯಂಪ್ರಕಾಶನೂ ಅನನ್ಯಾಧೀನಪ್ರಕಾಶನೂ ಆದ ಈ ದೇವನ ಮುಂದೆ ಇವನನ್ನು ಬಿಟ್ಟು ಮತ್ತೆ ಯಾವ ದೀಪ ಪ್ರಕಾಶಿಸುವುದು? ತಾನೇ ನಿರತಿಶಯ ದೀಪ್ತಿಯುಕ್ತ ದೀಪವಾಗಿದ್ದು ತನ್ನನ್ನೂ ಸಭ್ಯರನ್ನೂ ರಂಗವನ್ನೂ ಪ್ರಕಾಶಪಡಿಸು ತ್ತಾನೆಂದು ಭಾವ. ನಿಷ್ಕಳನೂ ನಿಷ್ಕ್ರಿಯನೂ ಶಾನ್ತನೂ ಆಗಿದ್ದರೂ 'ದೇವಃ'— ಎಂದರೆ ಕ್ರೀಡನಶೀಲನಾದುದರಿಂದ ಇವನಿಗೆ ನಟನಸಂಭವವೂ ಉಂಟು. 'ಸರ್ಗ ಸ್ಥಿತಿ ಪ್ರಳಯ ವಿಭ್ರಮನಾಟಿಕಾಯಾಂ ಶೈಲೂಷವದ್ವಿವಿಧವೇಶಪರಿಗ್ರಹಂ ತ್ವಾಂ" ಎಂದಿದ್ದಾರೆ ಶ್ರೀ ವರದರಾಜ ಪಂಚಾಶತ್ತಿನಲ್ಲಿ ಆಚಾರ್ಯರು. ಪ್ರಾಕೃತ ನಟ ನಂತೆ ಈ ನಟನು ಸಭ್ಯರಿಂದ ಏನನ್ನೂ ತೆಗೆದುಕೊಳ್ಳುವುದಿಲ್ಲ. ತನ್ನ ನಾಟಕ ನೋಡುವವರಿಗೆ ಸರ್ವಸ್ವವನ್ನೂ ಮತ್ತು ತನ್ನನ್ನೂ ತಾನೇ ದಾನಮಾಡುತ್ತಾನೆ. ಪ್ರಾಕೃತ ನಟನು ವರ್ಣಧಾರಣಾದಿಗಳಿಂದ ತನಗೆ ಕಾನ್ತಿಯುಂಟು ಮಾಡಿಕೊಳ್ಳು ತ್ತಾನೆ. ಅತ್ಯೂರ್ಜಿತ ತೇಜೋರಾಶಿಯಾದ ಈ ದೇವನಟನು ಯೋಗಮಾಯೆ ಯಿಂದ ಇರುವ ತೇಜಸ್ಸನ್ನೇ ಮರೆಸಿಕೊಳ್ಳುತ್ತಾನೆ.

'ದಶಧಾ'—ಎಂಬ ಪದವು ಮಧ್ಯಮಣಿನ್ಯಾಯದಿಂದ ಇಲ್ಲಿ ಅನೇಕತ್ರ ಅನ್ವ ಯಿಸುತ್ತದೆ. 'ದಶಧಾ ಶುಭಮಾತನೋತು'—'ಕೃತಂ ದಶಗುಣಂ ಮಯಾ' ಎಂಬಂತೆ ಶುಭ ಗುಣನ ಇವನಿಗೆ ಸಹಜ. ಇದೊಂದುದಶಾಂಕನಾಟಕ. ಶುಭ ವಿಗ್ರಹ ವನ್ನು ದಶ ಪ್ರಕಾರವಾಗಿ ವಿಸ್ತರಿಸಲಿ. ಅಥವಾ ನಮ್ಮ ಒಂದು ಪ್ರಪನ್ನವೇಷಕ್ಕೆ ಫಲವಾಗಿ ಹತ್ತು ವೇಷಗಳನ್ನು ಪ್ರದರ್ಶಿಸಲಿ. 'ದಶಧಾಭೂಮಿಕಾಂ ನಿರ್ವರ್ತ ಯನ್' ಎಂಬ ಯೋಜನೆಯಿಂದ ಈ ಅರ್ಥ ಸಿದ್ಧಿಸುವುದು. "ದಶಧಾಲಬ್ಧ ನಿರ್ಭ ರರಸೈಃ ಭಾವುಕೈಃ ಅಧ್ಯಕ್ಷಿತಃ" ಎಂದೂ ಯೋಚಿಸಬಹುದು. ಶೃಂಗಾರಾದಿ ಸರ್ವರಸ

ಚಿದಂಬರಮೂರ್ತಿಯಾದ ಭಗವಂತನು ರಂಗಸ್ಥಳದಲ್ಲಿ ಮಲ್ಲಾದಿ ದಶವಿಧ ದ್ರಷ್ಟೃಗಳಿಗೆ ಅವರವರ ಅಭಿಪ್ರಾಯಾನುಸಾರ ದಶವಿಧವಾಗಿ ಗೋಚರಿಸಿದನೆಂದು—

‘ಮಲ್ಲಾನಾಮಶನಿಃ ನೃಣಾಂ ನರವರಃ ಸ್ತ್ರೀಣಾಂ ಸ್ಮರೋ ಮೂರ್ತಿಮಾನ್
ಗೋಪಾನಾಂ ಸ್ವಜನೋಽಸತಾಂ ಕ್ಷಿತಿಭೃತಾಂ ಶಾಸ್ತಾ ಸ್ವಪಿತ್ರೋಶ್ಶಿಶುಃ ।
ಮೃತ್ಯುರ್ಭೋಜಪತೇಃ ವಿರಾಡವಿದುಷಾಂ ತತ್ತ್ವಂ ಪರಂ ಯೋಗಿನಾಂ
ವೃಷ್ಣೀನಾಂ ಪರದೇವತೇತಿ ವಿದಿತೋ ರಂಗಂ ಗತಸ್ಸಾಗ್ರಜಃ॥

ಎಂಬ ಶ್ಲೋಕದಲ್ಲಿ ಪ್ರಸಿದ್ಧವಾಗಿದೆ.

ಆ ಮಲ್ಲಾದಿಗಳಲ್ಲಿ ಅಭಿವ್ಯಕ್ತವಾದ ದಶವಿಧ ರಸಗಳೂ ಕ್ರಮವಾಗಿ,

‘‘ರೌದ್ರೋಽದ್ಭುತಶ್ಚ ಶೃಂಗಾರೋ ಹಾಸ್ಯಂ ವೀರೋ ದಯಾ ತಥಾ ।
ಭಯಾನಕಶ್ಚ ಬೀಭತ್ಸಶ್ಶಾನ್ತ ಪ್ರೇಮ ಭಕ್ತಿಕಃ॥

ಎಂಬ ಶ್ಲೋಕದಿಂದ ನಿಬದ್ಧವಾಗಿದೆ. ನಿರ್ಭರರಸ, ಪೂರ್ಣ ರಸ, ಬ್ರಹ್ಮಪೂರ್ಣ, ಬ್ರಹ್ಮರಸ, ಆದರ ವಿಷಯವಾದ ರಸವೂ ಪೂರ್ಣವಾಗಿರುವುದು ಉಚಿತ. ನಿರ್ಭರತ್ವ ರೂಪಪ್ರಪತ್ತಿ ರಸಾವಿಷ್ಟರಾದರೆ ಈ ನಿರ್ಭರ (ಪೂರ್ಣ)ರಸ ಅನಾಯಾಸದಿಂದ ಲಭ್ಯ. ಅದಲ್ಲದೆ ನಮ್ಮ ಪ್ರಯತ್ನದಿಂದ ಲಭ್ಯವಲ್ಲ. ದೇವಪುರುಷನಾದುದರಿಂದ ನಟನಾಗಬಹುದು. ಸ್ತ್ರೀವೇಷವನ್ನೂ ಪ್ರಾಯಿಕವಾಗಿ ಪುರುಷರೇ ಧರಿಸುತ್ತಾರೆ. ನಟನ ಪತ್ನೀ ನಟಿಯಾಗಳು. ಆದರೆ ಇಲ್ಲಿ ಅಸೂರ್ಯಂಪಶ್ಯಳಾದ ಅನ್ತಃಪುರ ದಿವ್ಯಮಹಿಷೀ ನಟಿಯಾಗಿಎಲ್ಲರಿಗೂ ದೃಶ್ಯಳಾಗುವಳು. ನಾಯಕನ ಸಂಗಡ ಛಾಯೆಯಂತೆ ನಿಹೀನ ಯೋನಿಗಳಲ್ಲಿಯೂ ಅವತರಿಸುವಳು.

“ಡೋಲಾಯಮಾನಂ ಗೋವಿನ್ದಂ”

ನಿರ್ಮಗ್ನಶ್ರುತಿ ಜಾಲಮಾರ್ಗಣದಶಾದತ್ತಕ್ಷಣೈರ್ವೀಕ್ಷಣೈ-
ರನ್ತಸ್ಸ್ವನ್ತದಿಪಾರವಿನ್ದಗಹನಾನ್ಯೌದನ್ವತೀನಾಮಪಾಂ ।
ನಿಷ್ಪ್ರತ್ಯೂಹ ತರಂಗ ರಿಂಖಣಮಿಥಃ ಪ್ರತ್ಯೂಢಪಾಥಶ್ಛಟಾ
ಡೋಲಾರೋಹಸದೋಹಳಂ ಭಗವತೋ ಮಾತ್ಸ್ಯಂ ವಪುಃ
ಪಾತು ನಃ ॥ ೧ ॥

ಅರ್ಥ:— [ನಿರ್ಮಗ್ನ, ಶ್ರುತಿ, ಜಾಲ, ಮಾರ್ಗಣ, ದಶಾ, ದತ್ತಕ್ಷಣೈಃ]= ಮುಳುಗಿದ್ದ ವೇದಗಳ ಸಮೂಹ ಅಥವಾ ವೇದಗಳೆಂಬ ಬಲೆಯನ್ನು ಹುಡುಕುವ ಸ್ಥಿತಿಯಲ್ಲಿ, ಇಷ್ಟ ಹರ್ಷ ಅಥವಾ ಅವಧಾನವುಳ್ಳ [ವೀಕ್ಷಣೈಃ]= ನೋಟಗಳಿಂದ [ಔದನ್ವತೀನಾಂ]= ಸಮುದ್ರ ಸಂಬಂಧವಾದ [ಅಪಾಂ]= ನೀರಿನ [ಅನ್ತಃ]=

ಒಳಗೆ [ಅರವಿನ್ದಗಹನಾನಿ]=ಪುಂಡರೀಕವನಗಳನ್ನು [ತನ್ವತ್ ಇವ]=ವಿಸ್ತರಿಸುವಂತಿರುವ [ನಿಷ್ಪ್ರತ್ಯೂಹ, ತರಂಗ, ರಿಂಖಣ, ಮಿಥಃ, ಪ್ರತ್ಯೂಢ, ಪಾಥ, ಶ್ಚಟಾ, ಡೋಲಾ, ರೋಹ, ಸಂದೋಹಳಂ]=ತಡೆಯಿಲ್ಲದ ಅಲೆಗಳ ಚಲನಗಳಿಂದ ಒಂದಕ್ಕೊಂದು ಹೊಡೆಯಲ್ಪಟ್ಟ ನೀರುಗಳ ಸಮೂಹವೆಂಬ ಉಯ್ಯಾಲೆಯನ್ನು ಹತ್ತುವುದರಲ್ಲಿ ಅಭಿಲಾಷೆಯುಳ್ಳ [ಭಗವತಃ]= ಶ್ರೀ ಪುಂಡರೀಕಾಕ್ಷನ [ಮಾತ್ಸ್ಯಂ]=ಮೀನಿನ ರೂಪವಾದ [ವಪುಃ]=ವಿಗ್ರಹವು [ನಃ]=ನಮ್ಮನ್ನು [ಪಾತು]=ಪೊರೆಯಲಿ.

ಭಾವ-ಶ್ರೀಮತ್ಸ್ಯಾವತಾರ ವರ್ಣನೆ:-ಈ ಅಂಕದಲ್ಲಿ ಮತ್ಸ್ಯಮೂರ್ತಿಯ ಡೋಲೋತ್ಸವ ವೈಭವವು ಭಕ್ತರಿಗೆ ದೃಶ್ಯವಾಗುವುದು. ಇದರಲ್ಲಿ ಮತ್ಸ್ಯ ಮೂರ್ತಿಯ ನೋಟಗಳ ಸೊಬಗಿಗೆ ಆಚಾರ್ಯರು ಸೋತಿದ್ದಾರೆ. ಭಗವದರ್ಚಾ ಪ್ರತಿಮೆಗೆ ಡೋಲೋತ್ಸವ ನಡೆಸಿ ನೋಡಲು ಇಚ್ಛಿಸುತ್ತೇವೆ. ಅದಕ್ಕಾಗಿ ಡೋಲೆಯನ್ನು ರಚಿಸುತ್ತೇವೆ. ಅತಿ ಬೃಹತ್ತಾದ ಈ ಮತ್ಸ್ಯಮೂರ್ತಿಗೆ ಡೋಲೆಯನ್ನು ಹೇಗೆ ರಚಿಸುವುದು? ಡೋಲೋತ್ಸವದ ದಿದೃಕ್ಷೆ ತೀವ್ರವಾಗಿದೆ. ಭಕ್ತಚ್ಛನ್ದಾನುವರ್ತಿಯಾದ ಈ ಮಹಾಗಿಲವು ತಾನೇ ಈ ಮಹೋತ್ಸವವನ್ನು ನಡೆಸಿಕೊಳ್ಳುತ್ತದೆ. ಹೇಗೆಂದರೆ, ಇದರ ವಿಹಾರಜನಿತಹರ್ಷದಿಂದ ಪ್ರಳಯಾರ್ಣವದಲ್ಲಿ ಆನಂದ ಕ್ಷೋಭೆಯಾಗಿ ಅತ್ಯುಚ್ಚವೂ, ದೀರ್ಘವೂ ಆದ ಅಲೆಗಳು ಏಳುತ್ತವೆ. ಇವು ಒಂದಕ್ಕೊಂದು ವೇಗವಾಗಿ ತಗುಲಿ ಮತ್ಸ್ಯನಿಗೆ ಡೋಲೆಯಂತೆ ಆಗಿವೆ. ಸಮುದ್ರದ ಅಲೆಗಳ ಮೇಲೆ ವೇಗವಾಗಿ ಓಡಾಡುವ ಜಹಜುಗಳು ಸದಾ ಡೋಲಾಯಮಾನವಾಗಿರುವುದು ಅನುಭವಸಿದ್ಧ. ಉತ್ಸವ ಡೋಲೆಯನ್ನು ಪದ್ಮಗಳಿಂದ ಅಲಂಕರಿಸುತ್ತಾರೆ. ಇದಕ್ಕೂ ಪುಂಡರೀಕಾಕ್ಷನಾದ ಮತ್ಸ್ಯನ ಕಟಾಕ್ಷಗಳೇ ಗತಿ. ಇವನ ವೀಕ್ಷಣಗಳು ಶ್ರುತಿಜಾಲ ಮಾರ್ಗಣದಲ್ಲಿ ದತ್ತಕ್ಷಣಗಳಾಗಿ ಅನ್ತರ್ಜಲದಲ್ಲಿ ಎಲ್ಲೆಲ್ಲಿಯೂ ಪ್ರಸರಿಸಿವೆ. ಇದರಿಂದ ಡೋಲೆಯನ್ನು ಪದ್ಮಗಳಿಂದ ಅಲಂಕರಿಸಿದಂತಾಗಿದೆ. ಹೀಗೆ ಮತ್ಸ್ಯನು ತಾನೇ ಪ್ರಸನ್ನಜನತಾನಂದಸಂದೋಹಕ್ಕಾಗಿ ಡೋಲೋತ್ಸವ ಸಾಮಗ್ರಿಗಳನ್ನು ಏರ್ಪಡಿಸಿ ಉತ್ಸವ ನಡೆಸಿಕೊಂಡಿದ್ದಾನೆ. "ವೇದಾ ಮೇ ಪರಮಂ ಚಕ್ಷುಃ"—ಎಂಬಂತೆ ಬ್ರಹ್ಮನಿಗೂ ಸರ್ವಲೋಕಗಳಿಗೂ ವೇದವೇ ಚಕ್ಷುಸ್ಸು. ನಮ್ಮ ಚಕ್ಷುಸ್ಸನ್ನು ಹುಡುಕುವುದರಲ್ಲಿ ಅವನ ಚಕ್ಷುಸ್ಸು ದತ್ತಕ್ಷಣಗಳಾಗಿವೆ. ಜಾಲವೆಂದರೆ ಬಲೆಯೆಂದೂ ಅರ್ಥ. ಮೂಢವಾದ ಮತ್ಸ್ಯಗಳು ಭ್ರಾನ್ತಿಯಿಂದ ಜಾಲದ ಬಳಿ ಹೋಗಿ ಅದರಲ್ಲಿ ಸಿಕ್ಕಿ ಸಾಯುತ್ತವೆ. ಪರಮ ಕಾರುಣಿಕವಾದ ಈ ಸರ್ವಜ್ಞ ಮತ್ಸ್ಯವಾದರೋ ತಾನೇ ಶ್ರುತಿಜಾಲಗಳನ್ನು ಹುಡುಕಿ ಬಂಧಿತವಾಗಿ ಜನರ ಶ್ರುತಿ [ಕಿವಿ]ಗಳಲ್ಲಿ ಹೊಕ್ಕು ಅವರನ್ನು ಉಜ್ಜೀವನಗೊಳಿಸುತ್ತದೆ. ನಮ್ಮ ಶ್ರುತಿ [ಕಿವಿ] ನೀರಿನಲ್ಲಿ ಮುಳುಗಿದಾಗ ನಿಶ್ಶಬ್ದತೆ ಅನುಭವಕ್ಕೆ ಬರುವುದು. ಹಾಗೆಯೇ

ಈ ಶ್ರುತಿ [ವೇದ] ಅನ್ತರ್ಜಲದಲ್ಲಿ ಮುಳುಗಿದಾಗಲೂ ಸಶಬ್ದತೆ ಅತ್ಯಂತ ವ್ಯಗ್ಯ ವೆಂಬ ಸ್ವಾರಸ್ಯ 'ನಿರ್ಮಗ್ನ'ವೆಂಬ ಪದದಿಂದ ತೋರುವುದು. 'ಡೋಲಾಯಮಾನಂ ಗೋವಿಂದಂ'—ಎಂಬಂತೆ ವಿಭವ ರೂಪ ಪ್ರದರ್ಶನ ಮತ್ತು ವಿಚಿತ್ರ ಡೋಲೋತ್ಸವ ಪ್ರದರ್ಶನಗಳಿಂದ ನಮ್ಮ ಪರಿತ್ರಾಣವಾಗಬೇಕೆಂದು ಪ್ರಾರ್ಥಿಸಿದ್ದಾರೆ.

"ಈಕ್ಷಣಧ್ಯಾನಸಂಸ್ಪರ್ಶಪ್ರಮುಖ್ಯೈಃ ಪೋಷಯನ್ ಪ್ರಜಾಃ।

ಮತ್ಸ್ಯಕೂರ್ಮವಿಹಂಗಾದಿ ವಿಗ್ರಹಃ ಪ್ರೇಕ್ಷ್ಯತೇ ಪ್ರಭುಃ॥" ಎಂಬಂತೆ ಮತ್ಸ್ಯಗಳು ವೀಕ್ಷಣಗಳಿಂದಲೇ ತಮ್ಮ ಪ್ರಜೆಗಳನ್ನು ಪೋಷಿಸುವುದು ಪ್ರಸಿದ್ಧವಾಗಿದೆ. ಇಲ್ಲಿ "ಮಾತ್ಸ್ಯಂ ವಪುಃ ವೀಕ್ಷಣೈಃ ಪಾತುನಃ" ಎಂದು ಯೋಜಿಸಿದರೆ ಆ ಪನೂಥಿಯೂ ನಿರೂಢವಾಗುತ್ತದೆ.

"ಮಂಚಸ್ಥಂ ಮಧುಸೂದನಂ"

ಅವ್ಯಾಸುರ್ಭುವನತ್ರಯೀಮನಿಭೃತಂ ಕಣ್ಡೂಯನೈರದ್ರಿಣಾ
ನಿದ್ರಾಣಸ್ಯ ಪರಸ್ಯ ಕೂರ್ಮವಪುಷೋ ನಿಶ್ವಾಸವಾತೋರ್ಮಯಃ।
ಯದ್ವಿಕ್ಷೇಪಣ ಸಂಸ್ಕೃತೋದಧಿಪಯಃ ಪ್ರೇಙ್ಖೋಳಪರ್ಯಂಕಿಕಾ—
ನಿತ್ಯಾರೋಹಣ ನಿರ್ವೃತೋ ವಿಹರತೇ ದೇವಸ್ಸಹೈವಶ್ರಿಯಾ॥

ಅರ್ಥ:— [ಅದ್ರಿಣಾ]=(ಮಂದರ) ಪರ್ವತದಿಂದ [ಕಣ್ಡೂಯನೈಃ]= ಕೆರೆಯುವಿಕೆಗಳಿಂದ [ಅನಿಭೃತಂ]= ನಿಶ್ಚಲವಾಗಿ [ನಿದ್ರಾಣಸ್ಯ]= ನಿದ್ರಿಸುತ್ತಿರುವ [ಕೂರ್ಮವಪುಷಃ] = ಆಮೆಯ ದೇಹವುಳ್ಳ [ಪರಸ್ಯ] = ಪರಮಪುರುಷನ, [ಯದ್ವಿಕ್ಷೇಪಣಸಂಸ್ಕೃತೋದಧಿಪಯಃ ಪ್ರೇಂಖೋಳಪರ್ಯಂಕಿಕಾ ನಿತ್ಯಾರೋಹಣ ನಿರ್ವೃತಃ]= ಯಾವ ನಿಶ್ವಾಸವಾತವೆಂಬ ಅಲೆಗಳ ಹೊಡೆತಗಳಿಂದ ಕ್ಷೋಭೆಗೊಂಡ ಕ್ಷೀರಸಮುದ್ರದ ಹಾಲೆಂಬ ಚಲಿಸುವ ಮಂಚವನ್ನು ಸದಾ ಏರಿರುವುದರಿಂದ ಸುಖಿತನಾದ [ದೇವಃ]= ಕ್ರೀಡಾನಟನು [ಶ್ರಿಯಾ.ಸಹ,ಏವ]= ಲಕ್ಷ್ಮೀಸಹಿತನಾಗಿಯೇ [ವಿಹರತೇ]= ವಿಹರಿಸುತ್ತಾನೆಯೋ (ಅಂಥ) [ನಿಶ್ವಾಸವಾತೋರ್ಮಯಃ]= ನಿಟ್ಟುಸಿರಿನ ಅಲೆಗಳು [ಭುವನತ್ರಯೀಂ]= ಲೋಕತ್ರಯವನ್ನೂ [ಅವ್ಯಾಸುಃ]= ರಕ್ಷಿಸಲಿ.

ಭಾವ:— ವಿಹಾರಕಚ್ಛಪನ ವರ್ಣನೆ: —ಅಂಕ—3—ಡೋಲೋತ್ಸವದ ಸೇವೆಯಾದ ಮೇಲೆ ಭಕ್ತರಿಗೆ ಇಲ್ಲಿ ಪರ್ಯಂಕಸೇವೆ ಲಭಿಸುತ್ತದೆ. ವೇದತ್ರಯಗಳ

ರಕ್ಷಣೆಯಾದ ಮೇಲೆ ಭುವನತ್ರಯಗಳ ರಕ್ಷಣೆಯನ್ನು ಕೋರಿದ್ದಾರೆ. ಕೂರ್ಮದ ನಿಶ್ವಾಸಗಳಾದ ವೇದಗಳು ಭುವನತ್ರಯವನ್ನೂ ಧರ್ಮೋಪದೇಶದ ಮೂಲಕ ರಕ್ಷಿಸುತ್ತವೆ. "ಅಸ್ಯ ಮಹತೋ ಭೂತಸ್ಯ ನಿಶ್ವಸಿತಮೇತದೃಗ್ವೇದ........"ಇತ್ಯಾದಿ ಶ್ರುತಿ ಕೂರ್ಮ ವಿಷಯವೆಂಬಂತಿದೆ. ನಿಶ್ವಾಸವಾತಗಳಿಂದ ಹಿಂದೆ ಉದ್ಧೃತವಾದ ವೇದಗಳ ಪ್ರಚಾರ ಸೂಚಿತವಾಗಿದೆ. ಪರಮಾತ್ಮನಿಗೆ ಪ್ರಾಣನೆಂದೂ ಹೆಸರು. ಪ್ರಾಣನಾದ ಪರಮಾತ್ಮನು ಪ್ರಾಣವಾಯುಗಳಿಂದ ಲೋಕಗಳ ಪ್ರಾಣಗಳನ್ನು ಪ್ರಾಣನಗೊಳಿಸಲಿ ಎಂದು ಪ್ರಾರ್ಥಿಸಿದ್ದಾರೆ. ಪ್ರಾಣನಿಗೆ ಪ್ರಾಣದಿಂದ ಪ್ರಾಣನ ಸುಕರ. ಸನಾತನ ಧರ್ಮಸ್ವರೂಪರಾದ ದಂಪತಿಗಳಿಗೆ ಪ್ರಾಣವಾಯುರೂಪವಾದ ವೇದಮಂತ್ರಗಳಿಂದ ಸಂಸ್ಕಾರ ಪಡೆದ ಪರ್ಯಂಕ ಉಚಿತ. ಶ್ವಶುರಗೃಹವಾದ ಕ್ಷೀರಾಬ್ಧಿಯಲ್ಲಿಯೇ ಈ ಅವತಾರ; ಚಿರವಿರಹಿತಳಾಗಿದ್ದ ಶ್ರೀದೇವಿ "ಪಶ್ಯತಾಂ ಸರ್ವದೇವಾನಾಂ ಯಯೌ ವಕ್ಷಸ್ಥಲಂ ಹರೇಃ."ಎಂಬಂತೆ ವಕ್ಷಸ್ಥಲಾರೂಢಳಾಗಿದ್ದಾಳೆ. ಆಗ ತಾನೆ ಚಂದ್ರ ಹುಟ್ಟಿದ್ದಾನೆ; ನೂತನವಾಗಿ ಅಮೃತ ಉದ್ಭವಿಸಿದೆ; ಸ್ವಚ್ಛವಾದ ಕ್ಷೀರವು ಪರ್ಯಂಕದ ಮೇಲೆ ಆಸ್ತರಣದಂತಿದೆ; ಲಕ್ಷಯೋಜನ ವಿಸ್ತಾರವುಳ್ಳ ಇವನ ಬೆನ್ನಿನ ಮೇಲೆ ಅಸಂಖ್ಯ ದೇವಾಸುರರ ಸ್ಪರ್ಧೆಯಿಂದ ಅತಿ ವೇಗವಾಗಿ ಅತ್ತಿತ್ತ ಮನ್ಥಾಚಲತಿರುಗುತ್ತಿರುವುದು. ಈ ಅಪ್ರಮೇಯನಿಗೆ ಅಂಗ ಕಂಡೂಯನದಷ್ಟು ಸುಖಕರವಾಗಿದೆ.ಇತರ ಅವತಾರಗಳಿಗಿರುವಂತೆ ಈ ಕೂರ್ಮಾವತಾರಕ್ಕೆ ಕಾಲದ ಮಿತಿಯೂ ಇಲ್ಲ. ಇಷ್ಟೆಲ್ಲ ಸಹಕಾರಿಗಳೊದಗಿರುವಾಗ ಸದ್ಯಃ ಪ್ರಾದುರ್ಭೂತಗಳೂ ಅನುರಕ್ತಳೂ ಆದ ನವವಧುವಿನೊಡನೆ, ಸಂಸ್ಕೃತವಾದ ಪ್ರೇಂಖೋಳ ಪರ್ಯಂಕದ ಮೇಲೆ ನಿತ್ಯಾರೋಹಣದಿಂದ ಸುಖಿಸುವುದು ಪರಮ ಭೋಗ್ಯ. ಶ್ರೀದೇವಿಗೆ ವಕ್ಷಸ್ಥಲಾರೋಹ ಹೇಗೋ ಹಾಗೆ ಇವನೊಡನೆ ಪರ್ಯಂಕಾರೋಹಣವೂ ನಿತ್ಯ. ಬೆನ್ನಿನ ಮೇಲೆ ಮಂಥಾಚಲದಿಂದ ಮಥನ; ಅನ್ಯೋನ್ಯ ಶತ್ರುಗಳಾದ 33 ಕೋಟಿ ದೇವತೆಗಳು ಮತ್ತು ಅಸುರರು ಪರಸ್ಪರ ಹೋರಾಟದಿಂದ ಅತಿ ವೇಗವಾಗಿ ಪರ್ವತವನ್ನು ತಿರುಗಿಸುತ್ತಿದ್ದಾರೆ. ಇದರಿಂದ ಅಬ್ಧಿ ಅತಿ ಕ್ಷುಬ್ಧವಾಗಿದೆ; ಆಗಾಗ ಉದ್ಭವಿಸಿದ ಉಚ್ಚೈಶ್ರವಸ್ಸು, ಐರಾವತ, ಅಮೃತ ಮುಂತಾದುವುಗಳಿಗಾಗಿ ದೇವಾಸುರರು ಮಾಡುತ್ತಿರುವ ಗದ್ದಲ ಅತಿ ತುಮುಲವಾಗಿದೆ; ಇಷ್ಟಾದರೂ ಅಕುಂಠನಾದ ಈ ವೈಕುಂಠ ಕಮಠನು ಪರ್ಯಂಕದ ಮೇಲೆ ನಿಶ್ಚಲವಾಗಿ ನಿದ್ರಿಸುತ್ತಿದ್ದಾನೆ. ಇದನ್ನೆಲ್ಲ ಆಚಾರ್ಯರು ಈ ಕೆಳಗಿನ ಶ್ಲೋಕದಲ್ಲಿ ಅತಿವಿಚಿತ್ರವಾಗಿ ಚಿತ್ರಿಸಿದ್ದಾರೆ:—

ಕ್ವಚಿದಾಹಾಧೀಶಃ ಕ್ವಚಿದಮರದನ್ತಾವಳಪತಿಃ
ಕ್ವಚಿತ್ಪ್ರಾಲೇಯಾಂಶುಃ ಕ್ವಚಿದಮೃತವಿಸ್ಫೂರ್ಜಿತಮಿತಿ।
ಅತಿ ಕ್ಷೋಭೇ ಸಿನ್ಧೋರಯಮನಘನಿದ್ರೋ ಧೃತಗಿರಿಃ
ವಿಷಾದಂ ದೇವಾನಾಂ ವಿಘಟಯತಿ ವೈಕುಂಠಕಮಠಃ॥"

—ಈ ಕಮಠ ಬ್ರಹ್ಮಕಮಠವೆಂಬುದರಲ್ಲಿ ಸಂಶಯವೇನು? ಇದರೊಡನೆ ಇವನ ಬೃಹತ್ತ್ವ-ಆಧಾರತ್ವ-ಅಮೃತ ಹೇತುತ್ವಾದಿಗಳೂ ವ್ಯಕ್ತವಾಗುತ್ತವೆ.

"ಶಿರಸ್ಥದಾರೋ ನ ತು ದೃಷ್ಟಪೂರ್ವಃ"

ಗೋಪಾಯೇದನಿಶಂ ಜಗನ್ತಿ ಕುಹನಾ ಪೋತ್ರೀಪವಿತ್ರೀಕೃತ-
ಬ್ರಹ್ಮಾಣ್ಡಃ ಪ್ರಳಯೋರ್ಮಿಘೋಷಗುರುಭಿರ್ಘೋಣಾರವೈ-
ರ್ಘುರ್ಘುರೈಃ।
ಯದ್ದಂಷ್ಟ್ರಾಂಕುರಕೋಟಿಗಾಢಘಟನಾ ನಿಷ್ಕಮ್ಪ ನಿತ್ಯಸ್ಥಿತಿಃ
ಬ್ರಹ್ಮಸ್ತಮ್ಬಮಸೌದಸೌ ಭಗವತೀ ಮುಸ್ತೇವ ವಿಶ್ವಂಭರಾ॥ ೪ ॥

ಅರ್ಥ:— [ಭಗವತೀ]=ಪೂಜ್ಯಳಾದ [ಅಸೌ]=ಈ [ವಿಶ್ವಮ್ಭರಾ]=ಭೂದೇವಿಯು [ಮುಸ್ತಾ ಇವ] = ಕೋರನಾರಿಗಡ್ಡೆಯಂತೆ [ಯದ್ದಂಷ್ಟ್ರಾಂಕುರಕೋಟಿಗಾಢಘಟನಾನಿಷ್ಕಮ್ಪನಿತ್ಯಸ್ಥಿತಿಃ] ಯಾವ ವರಾಹನ ಚೂಪಾದ ಕೋರೆ ಹಲ್ಲಿನ ತುದಿಯಲ್ಲಿ ದೃಢವಾಗಿ ಸೇರುವುದರಿಂದ ನಿಶ್ಚಲವೂ, ಸ್ಥಿರವೂ ಆದ ಸ್ಥಿತಿಯುಳ್ಳವಳಾಗಿ [ಬ್ರಹ್ಮಸ್ತಂಬಂ] = ಬ್ರಹ್ಮಾದಿ ಸ್ತಂಬಪರ್ಯಂತ ಜಗತ್ತನ್ನು [ಅಸೌತ್]= ಹಡೆದಳೋ (ಅಂತಹ) [ಪ್ರಳಯೋರ್ಮಿ ಘೋಷಗುರುಭಿಃ]= ಪ್ರಳಯಕಾಲ ಸಮುದ್ರದ ಅಲೆಗಳ ಗರ್ಜನೆಗಿಂತ ದೊಡ್ಡದಾದ [ಘುರ್ಘುರೈಃ]= 'ಘುರ್ ಘುರ್'-ಎಂಬ [ಘೋಣಾರವೈಃ]=ಮೂಗಿನ ಶಬ್ದಗಳಿಂದ [ಪವಿತ್ರೀಕೃತಬ್ರಹ್ಮಾಂಡಃ]=ಪರಿಶುದ್ಧವಾದ ಬ್ರಹ್ಮಾಂಡವುಳ್ಳ [ಕುಹನಾ ಪೋತ್ರೀ]= ಮಾಯಾ ವರಾಹನು [ಜಗನ್ತಿ]=ಲೋಕಗಳನ್ನು [ಅನಿಶಂ]= ಯಾವಾಗಲೂ [ಗೋಪಾಯೇತ್]=ರಕ್ಷಿಸಲಿ.

ಭಾವ:-ಭೂವರಾಹನ ವರ್ಣನೆ. ಅಂಕ 3-ಭೂಮ್ಯುದ್ಧರಣ-ಶ್ರೀಪ್ರಾಪ್ತಿಯಾದನಂತರ ಭೂಪ್ರಾಪ್ತಿ ಉಕ್ತವಾಗಿದೆ. ಭೂದೇವಿಯಲ್ಲಿ ದೇವನಿಗೆ ಬಹು ಗೌರವ. ಶ್ರೀದೇವಿಯನ್ನು ವಕ್ಷಸ್ಸಿನಲ್ಲಿಟ್ಟು ಗೌರವಿಸುತ್ತಾನೆ. ಭೂದೇವಿಯನ್ನು ಶೇಷನಾಗಿ ಸಾವಿರ ತಲೆಗಳ ಮೇಲಿಟ್ಟುಕೊಂಡು ಗೌರವಿಸುತ್ತಾನೆ. ಭೂಭಾರ ಇಳಿಸುವುದಕ್ಕಾಗಿ ಮತ್ತೆ ಮತ್ತೆ ಅವತರಿಸುತ್ತಾನೆ. ಶ್ರೀ ಭಾಗವತದಲ್ಲಿ ವರಾಹನ ನಿರತಿಶಯ ಬೃಹತ್ತ್ವ, 'ಯಸ್ಯಾಯುತಶತೈಕಾಂಶೇ ವಿಶ್ವಶಕ್ತಿರಿಯಂ ಸ್ಥಿತಾ॥"—ಎಂದು ಸ್ಫುಟವಾಗಿ ವರ್ಣಿತವಾಗಿದೆ. ಇದನ್ನು ಯದ್ದಂಷ್ಟ್ರಾಂಕುರ ಕೋಟಿ....ಇತ್ಯಾದಿಯಾಗಿ. ಆಚಾರ್ಯರೂ ವರ್ಣಿಸಿದ್ದಾರೆ. ಖುರದಘ್ನ ಅಥವಾ ಜಾನುದಘ್ನವಾದ ಕೊಳಕು ಕೊಳಗಳಲ್ಲಿ ವಿಹರಿಸುವುದು ವರಾಹದ ಸ್ವಭಾವ. "ವಿಸ್ರಬ್ಧಂಕ್ರಿಯತಾಂ ವರಾಹ ತತಿಭಿಃ ಮುಸ್ತಾಕ್ಷತಿಃ ಪಲ್ವಲೇ"-ಎಂದು ಕವಿಸಾರ್ವಭೌಮ ಹೇಳಿದ್ದಾನೆ.

ಮಹೋದಧಿಯೇ ಈ ಬ್ರಹ್ಮವರಾಹಕ್ಕೆ ಖುರದಘ್ನವೆಂದು

ಕ್ವಾಪಿ ಕಲ್ಪಾನ್ತವೇಶನ್ತೇ ಖುರದಘ್ನೇ ಸಮುದ್ರ್ಯಂತಾ।
ವಹತೇ ಮೇದಿನೀ ಮುಸ್ತಾಂ ಮಹತೇ ಪೋತ್ರಿಣೇ ನಮಃ ॥

ಎಂಬಲ್ಲಿ ಆಚಾರ್ಯರು ಹೇಳಿದ್ದಾರೆ.

“ಅಸ್ನಾವಿರಂ ಶುದ್ಧಮಪಾಪವಿದ್ಧಂ”—ಎಂಬಂತೆ ಜಗತ್ಪವಿತ್ರಭೂತನಾದ ಯಜ್ಞಮೂರ್ತಿ ವರಾಹವಾಗಿ ಅವತರಿಸುವುದು ಹೇಗೆ?—ಎಂದರೆ “ಕುಹನಾ ಪೋತ್ರೀ” ಎಂದಿದ್ದಾರೆ. ಇವನು ವಾಸ್ತವಪೋತ್ರಿಯಲ್ಲ, ಮಿಥ್ಯಾ ಪೋತ್ರೀ, ಪವಿತ್ರತಮನಾದ ಪೋತ್ರಿಯೆಂದು ಭಾವ. “ತ್ರಯೀಮಯಂ ರೂಪಮಿದಂ ಚ ಸೌಕರಂ” “ಕ್ರೋಡಾಪದೇಶಃ ಸ್ವಯಮಧ್ವರಾಂಗಃ” “ಯದ್ರೋಮಗತೇಷು ನಿಲಿಲ್ಯುರಧ್ವರಾಃ”- ಇತ್ಯಾದಿ ವಚನಗಳು ಇವನಲ್ಲಿ ಮುಖ್ಯ ವೃತ್ತಗಳು. ಈ ಕಥಾ ಶ್ರವಣ ಫಲವನ್ನು “ಶೃಣೋತಿ ಗಾಯತ್ಯನುಮೋದತೇಂಜಸಾ ವಿಮುಚ್ಯತೇ ಬ್ರಹ್ಮವಧಾದಪಿ ದ್ವಿಜಾಃ। ಏತನ್ಮಹಾಪುಣ್ಯಮಲಂ ಪವಿತ್ರಂ......॥ ಇತ್ಯಾದಿಯಾಗಿ ಶ್ರೀ ಶುಕರು ಕೀರ್ತಿಸಿದ್ದಾರೆ. ವರಾಹಾವತಾರ ಕಾಲದಲ್ಲಿ ಅವನ ಘುರ್ಘುರಿತವನ್ನು ಕೇಳಿ ಸತ್ಯ ಲೋಕಾದಿ ನಿವಾಸಿಗಳು, ಪವಿತ್ರಂ ಪವಿತ್ರಂ ಪವಿತ್ರಂ—ಎಂದು ಶಾನ್ತಿಮನ್ತ್ರಪಠನದಂತೆ ಮೂರಾವರ್ತಿ ಪಠಿಸಿದರೆಂದೂ, “ಜನಸ್ತಪಸ್ಸತ್ಯನಿವಾಸಿನಸ್ತೇ ತ್ರಿಭಿಃ ಪವಿತ್ರೈರ್ಮುನಯೋಽಗೃಣನ್ಸ್ಮ”॥—ಎಂಬಲ್ಲಿ ಹೇಳಿದೆ. ಪ್ರಕೃತ ಪವಿತ್ರ ಶಬ್ದವು ಇದನ್ನು ಜ್ಞಾಪಕಕ್ಕೆ ತರುತ್ತದೆ. ಅನ್ತಸ್ಸಮುದ್ರದಲ್ಲಿ ಈ ಹಿರಣ್ಯಕೇಶನಿಗೆ ಹಿರಣ್ಯಾಕ್ಷನೊಡನೆ ನಡೆದ ಯುದ್ಧಕ್ಷೋಭಸಂರಂಭ ಸಮಯದಲ್ಲಿಯ ಪ್ರಳಯೋರ್ಮಿ ಘೋಷಕ್ಕಿಂತ ಗುರುವಾಗಿದ್ದಿತು. ಇವನ ಘೋಣಾರವ, ಇವನು ಪ್ರಥಮ ಗುರು. ಇವನ ಘೋಣಾರವವು ಗುರುವಾಗಿರುವುದು ನ್ಯಾಯ್ಯ. ಮತ್ಸ್ಯನಿಂದ ಲಬ್ಧವಾದ ವೇದವನ್ನು ಶೈಥಿಲ್ಯಹೊಂದದಂತೆ ಯೋಗದಿಂದಕೂರ್ಮನು ಅಭ್ಯಾಸ ಮಾಡಿದ.ಅದನ್ನು ವರಾಹವು ಬ್ರಹ್ಮಾಂಡವ್ಯಾಪಿಗಳಾದ ಅತ್ಯುಚ್ಚ ಘೋಣಾರವಗಳಿಂದ ಉದ್ಘೋಷಿಸಿ, ಅಸುರಾಪಹಾರದಿಂದ ಅಪವಿತ್ರವಾಗಿದ್ದ ಭೂಮಿಯನ್ನು ಪವಿತ್ರಗೊಳಿಸುತ್ತಾನೆ. “ಸ್ಥೂಲನಾಸಿಕಾ ಘ್ರೋರ್ವಸುಂದರಾಂ॥”—ಎಂದು ಮಾಘ ಹೇಳಿರುವಂತೆ ಘೋಣೆಯೇ ವರಾಹಕ್ಕೆ ಮುಖ್ಯ ಬಲ.ಅಪಹೃತವಾದ ಭೂಮಿಯನ್ನು ಘ್ರಾಣದಿಂದ ಹುಡುಕುವುದು ಸೂಕರಕ್ಕೆ ಸುಕರ. “ನಿಶಮ್ಯತೇ ಘುರ್ಘುರಿತಂ॥”—ಎಂಬ ಶುಕಾನುಭವವೂ ಇಲ್ಲಿ ಸ್ಮಾರಿತವಾಗಿದೆ. ಸ್ತೋತ್ರ ಕಾಲದಲ್ಲಿ ಈ ಅವತಾರ ವೃತ್ತಾನ್ತವೆಲ್ಲ ಆಚಾರ್ಯರಿಗೆ ಗೋಚರಿಸಿರಬೇಕು. ಆದ್ದರಿಂದ ‘ಅಸಾ ವಿಶ್ವಂಭರಾ’ ಎಂದು ಪ್ರಯೋಗಿಸಿದ್ದಾರೆ.

—"ಸಪದಿ ಜೃಮ್ಭಿತಃ ಸ್ತಮ್ಭಕಃ"—

ಪ್ರತ್ಯಾದಿಷ್ಟ ಪುರಾತನಪ್ರಹರಣಗ್ರಾಮಃ ಕ್ಷಣಂ ಪಾಣಿಜೈ-
ರವ್ಯಾತ್ತ್ರೀಣಿ ಜಗನ್ತ್ಯಕುಂಠಮಹಿಮಾ ವೈಕುಂಠಕಂಠೀರವಃ ।
ಯತ್ಪ್ರಾದುರ್ಭವನಾದವನ್ಧ್ಯ ಜಠರಾ ಯಾದೃಚ್ಛಿಕಾದ್ವೇಧಸಾಂ
ಯಾಕಾಚಿತ್ಸಹಸಾ ಮಹಾಸುರಗೃಹಸ್ಥೂಣಾಪಿತಾಮಹ್ಯಭೂತ್
॥ ೫ ॥

ಅರ್ಥ:—[ಸಹಸಾ]=ಥಟ್ಟನೆ [ಯಾದೃಚ್ಛಿಕಾತ್] = ಸ್ವೇಚ್ಛೆ ಅಥವಾ ಅಸುರನ ಇಚ್ಛೆಯಿಂದ ಆದ [ಯತ್ಪ್ರಾದುರ್ಭವನಾತ್]=ಯಾವ ನೃಸಿಂಹನ ಅವತಾರದಿಂದ [ಯಾ, ಕಾಚಿತ್]=ಯಾವುದೋ ಒಂದು[ಮಹಾಸುರಗೃಹಸ್ಥೂಣಾ]= ಹಿರಣ್ಯಕಶಿಪುವಿನ, ಅರಮನೆಯ ಕಂಬವು [ಅವನ್ಧ್ಯಜಠರಾ] = ಬಂಜೆಯಲ್ಲದ ಹೊಟ್ಟೆಯುಳ್ಳದ್ದಾಗಿ [ವೇಧಸಾಂ]=ಬ್ರಹ್ಮರಿಗೆಲ್ಲ [ಪಿತಾಮಹೀ]=ತಂದೆಯನ್ನು ಹಿಡಿದ ತಾಯಿಯಾಗಿ [ಅಭೂತ್]=ಆಯಿತೋ, (ಅಂತಹ)[ಅಕುಣ್ಠಮಹಿಮಾ]= ಅಡ್ಡಿಯಿಲ್ಲದ ವ್ಯಾಪ್ತಿಯುಳ್ಳವನೂ [ಪಾಣಿಜೈಃ]=ನಖಗಳಿಂದ [ಕ್ಷಣಂ]=ಕ್ಷಣ ಕಾಲ [ಪ್ರತ್ಯಾದಿಷ್ಟಪುರಾತನಪ್ರಹರಣಗ್ರಾಮಃ] = ನಿರಾಕರಿಸಲ್ಪಟ್ಟ ಹಳೆಯ ಆಯುಧಗಳ ಸಮೂಹವುಳ್ಳವನೂ ಆದ [ವೈಕುಣ್ಠಕಣ್ಠೀರವಃ] = ಸಿಂಹರೂಪಿಯಾದ ಭಗವಂತನು [ತ್ರೀಣಿ, ಜಗನ್ತಿ]=ಮೂರುಲೋಕಗಳನ್ನೂ [ಅವ್ಯಾತ್]= ಕಾಪಾಡಲಿ.

ಭಾವ:—ನೃಸಿಂಹಾವತಾರವರ್ಣನೆ:—ಅಂಕ 4— "ಅದೃಶ್ಯತಾತ್ಯದ್ಭುತ ರೂಪಮುದ್ವಹನ್ ಸ್ತಂಭೇಸಭಾಯಾಂ ನಮೃಗಂ ನ ಮಾನುಷಂ" ಎಂಬ ದೃಶ್ಯವು ಈ ಅಂಕದಲ್ಲಿ ಅದ್ಭುತವಾಗಿ ಅನುಭೂತವಾಗಿದೆ. ಹಿಂದೆ ವಿಶ್ವಮ್ಭರೆಯಿಂದ ಬ್ರಹ್ಮಸ್ತಂಬದ ಜನನವಾಯಿತು. ಇಲ್ಲಿ ಬ್ರಹ್ಮಸ್ತಂಭದಿಂದ ಬ್ರಹ್ಮಪಿತೃವಿನ ಜನನವಾಗುತ್ತೆ "ದಿವಿಸ್ಪೃಶತ್ಕಾಯಂ", "ಸಟಾವಧೂತಾ ಜಲದಾಃ ಪರಾಪತನ್" "ಅಂಭೋಧಯಶ್ಶ್ವಾಸಹತಾ ವಿಚುಕ್ಷುಭುಃ ನಿಹ್ರಾದಭೀತಾ ದಿಗಿಭಾ ವಿಚುಕ್ರುಶುಃ। ದ್ಯೌಸ್ತತ್ಸಟೋತ್ಕ್ಷಿಪ್ತವಿಮಾನಸಂಕುಲಾ ಪ್ರೋತ್ಸರ್ಪತಕ್ಷ್ಮಾ ಚ ಪದಾತಿ "ಪೀಡಿತಾ", ಶೈಲಾಸ್ಸಮುತ್ಪೇತುರಮುಷ್ಯ ರಂಹಸಾ ತತ್ತೇಜಸಾ ಸ್ವಂ ಕಕುಭೋ ನ ರೇಜಿರೇ॥"—ಇತ್ಯಾದಿಯಾದ ಶ್ರೀ ನೃಸಿಂಹ ಮೂರ್ತಿಯ ನಿರತಿಶಯ ಬೃಹತ್ತ್ವವಿಲಿ ಅದ್ಭುತವಾಗಿ ದೃಷ್ಟವಾಗುವುದು. "ಸಟಾಚ್ಛಟಾಭಿನ್ನಘನೇನ ಬಿಭ್ರತಾ ನೃಸಿಂಹ ಸೈಂಹೀಮತನುಂ ತನುಂ ತ್ವಯಾ॥"—ಎಂದು ಮಾಘನ ಅನುಭವ "ಹಿರಣ್ಯಕರ ಘಟ್ಟಕಾತ್ ಸಪದಿ ಜೃಮ್ಭಿತಃ ಸ್ತಮ್ಭತಃ । ಪುರಃಸ್ಫುರತಿ ಸಂಭ್ರಮಸ್ಫುಟಸಟಾಚ್ಛೋಟನಕ್ರುಟದ್ಘನಘನಾರವದ್ವಿಗುಣಬೃಂಹಿತಸ್ಸಿಂಹರಾಟ್" — "ಸಟಾ

ವಿಘೂತಿಸಂಭ್ರಮಭ್ರಮಿತಸಪ್ತಲೋಕಸ್ಥಿತಿಃ", — "ಪ್ರತ್ಯೂಢಸ್ಥೇಮಭೀಮ ಪ್ರಳಯಘನಘಟಾಘೋಷಕಾಡಂಬರಾಣೀಕ್ಷುಭ್ಯತ್ಸಪ್ತಾಂಬುಧೀನಿ.. ಅಸ್ಮದ್ಭೀತಿವ್ಯಪೋಹಂವಿದಧತು ನೃಹರೇರಟ್ಟಹಾಸಾದ್ಭುತಾನಿ॥"—ಇತ್ಯಾದಿಯಾಗಿ ಶ್ರೀ ನೃಸಿಂಹ ಬ್ರಹ್ಮದ ದೃಶ್ಯ ಅತಿ ವಿಚಿತ್ರವಾಗಿ ಆಚಾರ್ಯರಿಂದ ಅನುಭೂತವಾಗಿದೆ. ಈ ವರ್ಣನೆಗಳಿಂದ ನಮಗೂ ಶ್ರೀ ನೃಸಿಂಹನು ಕಣ್ಣೆದುರಿನಲ್ಲಿರುವಂತಾಗಿದೆ.

ವಿಷ್ಣುವಿನ ಸರ್ವವ್ಯಾಪ್ತಿಯನ್ನು ಶತ್ರು ಆಕ್ಷೇಪಿಸಿದ. ಆ ವ್ಯಾಪ್ತಿಸ್ಥಾಪನೆಗಾಗಿ ಅವತಾರ. ಭಕ್ತರ ಮಾತನ್ನು ಸತ್ಯ ಮಾಡುವುದೂ ದೇವನ ಸ್ವಭಾವ. ಅತ್ಯಸಾಮ್ಯಾವಹತ್ವ ಅವನ ಪ್ರಕೃತಿಯಷ್ಟೇ. "ಸತ್ಯಂ ವಿಧಾತುಂ ನಿಜಭೃತ್ಯಭಾಷಿತಂ ವ್ಯಾಪ್ತಿಂ ಚ ಭೂತೇಷ್ವಖಿಲೇಷು ಚಾತ್ಮನಃ॥" –ಎಂದು ವ್ಯಾಪ್ತಿಸತ್ಯಾಪನಗಳೆರಡೂ ಸಹಪಠಿತವಾಗಿವೆ. ವರಾಹಕ್ಕೆ ನಾಸೆ ಹೇಗೋ ಹಾಗೆ ಸಿಂಹಕ್ಕೆ ನಖವೇ ಬಲ.

"ಪೂರ್ವಜಸ್ಯಾನುಯಾತ್ರಾರ್ಥೇ ದ್ರುಮಚೀರೈರಲಂಕೃತಃ॥" — ಎಂಬಂತೆ ಅಣ್ಣನಿಗೆ ಮುಂಚೆ ಲಕ್ಷ್ಮಣ ಕಾಡಿಗೆ ಹೊರಟ. ತ್ರೈಲೋಕ್ಯವನ್ನು ತನ್ನ ಕಾಲಡಿಯಲ್ಲಿಟ್ಟುಕೊಳ್ಳುವ ಅಭಿಸಂಧಿಯಿಂದ ವಾಮನನು ತ್ರಿವಿಕ್ರಮನಾಗಿ ವೃದ್ಧಿ ಹೊಂದಿದಾಗ, ಸ್ನೇಹದಿಂದ ಅಸ್ಥಾನರಕ್ಷಾವ್ಯಸನಿಗಳಾದ ಸುದರ್ಶನಾದ್ಯಾಯುಧಗಳು ಮಹಾಬಲಿಯಭಟರು ಎಲ್ಲಿ ಅವನ ಮೇಲೆ ಬೀಳುವರೋ ಎಂದು ಹೆದರಿ ಸುಸಂಭ್ರಮವಾಗಿ ತ್ರಿವಿಕ್ರಮನಿಗಿಂತ ಮುಂದೆ ಹೊರಟು ಬಂದವರೆಂದು ಶ್ರೀ ಪರಾಂಕುಶ ಮುನಿಗಳು ಕೆಳಗಿನ ಪಾಶುರದಲ್ಲಿ ಸುಂದರವಾಗಿ ಅನುಭವಿಸಿದ್ದಾರೆ.—

" ಆಳ್ವಾಯೊಳ್ಳ ಚ್ಚಙ್ಗವರ್ ವಿಲ್ಲುಮೇಳ್ಳ, ತಿಕ್ಕೈ
ವಾಳ್ವಾಯೊಳ್ಳ ಕ್ತಣ್ಡಂ ವಾಳುಮೊಳ್ಳ, ಅಣ್ಣವರ್
ಮೋಳ್ವಾಯೊಳ್ಳ ಮುಡಿ ಪೋರಮೊಳ್ಳ, ಅಪ್ಪನ್
ಊಳ್ವಾಯೊಳ್ಳ ಉಲಗಙ್ಗೊಣ್ಡವಾರೇ "—

ಅದರಂತೆಯೇ, ಬ್ರಹ್ಮನು ಹಿರಣ್ಯಕಶಿಪುವಿಗೆ ಕೊಟ್ಟಿದ್ದ ವರವನ್ನು ಸತ್ಯಮಾಡುವುದಕ್ಕಾಗಿ ಆಯುಧಗಳೆಲ್ಲವನ್ನೂ ಬಿಟ್ಟು ನೃಸಿಂಹ ತಾನೊಬ್ಬನೇ ಶತ್ರುವಧೆಗಾಗಿ ಥಟ್ಟನೆ ಹೊರಟ. ಅದನ್ನು ಕಂಡು ಸಹಾಯಕ್ಕಾಗಿ ಸಸಂಭ್ರಮವಾಗಿ ದಿವ್ಯಾಯುಧಗಳು ತಾವೇ ಓಡಿ ಬಂದುವು. ಅವನ್ನು ಕೈಸಂಜ್ಞೆಯಿಂದ ನೃಸಿಂಹನು ಬರದಂತೆ ಕಡೆಯುವುದು 'ಪಾಣಿಜ್ಯೈಃ ಪ್ರತ್ಯಾದಿಷ್ಟ' – ಎಂಬುದರಿಂದ ವ್ಯಂಜಿತವಾಗಿದೆ. ಆದರೂ 'ಅತಿಸ್ನೇಹಃ ಪಾಪಶಂಕೀ'–ಎಂಬ ನ್ಯಾಯದಿಂದ ಪ್ರಭುವಿಗೆ ಅಸ್ಥಾನದಲ್ಲಿ ಭಯವನ್ನು ಶಂಕಿಸಿ ಅನುಗಮನವನ್ನು ನಿರ್ಬಂಧದಿಂದ ಯಾಚಿಸುತ್ತವೆ. ಅವುಗಳ ಅಸ್ಥಾನ ರಕ್ಷಾವ್ಯಸನವನ್ನು ಕಂಡು ಅವುಗಳ ಆಶ್ವಾಸನಕ್ಕಾಗಿ 'ಪಾಣಿಜ್ಯೈಃ ಪ್ರತ್ಯಾದಿಷ್ಟ'–ಎಂದರೆ ನಖಗಳನ್ನು ತೋರಿ ತಡೆಯುತ್ತಾನೆ. 'ನಿಮ್ಮ ಸ್ಥಾನದಲ್ಲಿ ಈ ಅದ್ಭುತ ನಖಗಳಿವೆ ನನಗೇನೂ ಅಪಾಯವಿಲ್ಲ, ಹೆದರಬೇಡಿ, ನಿಲ್ಲಿ'—ಎಂದು ಇದರ

ಭಾವ. ಆದರೂ ಬಿಟ್ಟಿರಲೊಲ್ಲದೆ ಅವು ಮತ್ತೆ, "ನಾವು 'ಪುರಾತನ'—ಎಂದರೆ ಬಹು
ಕಾಲದಿಂದಿರುವ ಭೃತ್ಯರು, ನಾವು ಇರುವುದು ಸುಮ್ಮನೆ ಅಲಂಕಾರಕ್ಕಲ್ಲ; ನಾವು
ಅಸ್ತ್ರಗಳು, ಶತ್ರುಗಳನ್ನು ಪ್ರಹರಿಸುವುದಕ್ಕಾಗಿಯೇ ಇರುವೆವು- ಹಿಂದೆ ಎಷ್ಟೋ
ಸಲ ಸಹಾಯ ಮಾಡಿದ್ದೇವೆ. ಒಬ್ಬಿಬ್ಬರಲ್ಲ. ಬಹುಮಂದಿ ('ಗ್ರಾಮ')
ಇದ್ದೇವೆ. ಇಂತಹ ಸಂಗ್ರಾಮೋತ್ಸವ ದುರ್ಲಭ. ನಮ್ಮ ಸ್ಥಾನದಲ್ಲಿ
'ಪಾಣಿಜ' ಗಳ ನಿವೇಶನ ಯುಕ್ತವಲ್ಲ. ನಾವೇ ಸಹಾಯಕ್ಕೆ ಬರುವೆವು"–ಎಂದು
ಮುಂದೆ ಬರುತ್ತವೆ. ಆಗ ಭಗವಂತನು, "ನಿಮ್ಮ ಸ್ಥಾನದಲ್ಲಿ ಈ ಪಾಣಿಜಗಳ ನಿವೇ
ಶನ ಒಂದು 'ಕ್ಷಣ'—ಮಾತ್ರ. ನೀವೇ ನನ್ನ ಸ್ಥಿರವಾದ ಆಯುಧಗಳು. ವಿಧಿಯಿ
ಲ್ಲದೆ ಒಂದು ಕ್ಷಣಕಾಲ ಮಾತ್ರ ನಿಮ್ಮ ಅಧಿಕಾರವನ್ನು ಈ ನಖಗಳಿಗೆ ಕೊಟ್ಟಿ
ದ್ದೇನೆ. ಇವಕ್ಕೆ ಈ ಅಧಿಕಾರ ಒಂದು ಕ್ಷಣಕ್ಕಿಂತ ಹೆಚ್ಚುಕಾಲವಿರುವುದಿಲ್ಲ; ಒಂದು
ಕ್ಷಣ ನನ್ನ ವಿರಹ ಸಹಿಸಿರಿ, ಅಷ್ಟರಲ್ಲಿಯೇ ಬಂದು ನಿಮ್ಮನ್ನು ಕೂಡುವೆನು"—
ಎಂದು ಅಭಯಹಸ್ತ ತೋರಿ ತಡೆಯುತ್ತ ಅವುಗಳನ್ನು ಒಡಂಬಡಿಸುವನು—ಈ
ಪ್ರಕ್ರಿಯೆಗಳೆಲ್ಲವೂ ಈ ಶ್ಲೋಕದ ಪ್ರಥಮ ಪಾದದಿಂದ ಸ್ವಾರಸ್ಯವಾಗಿ ವ್ಯಂಜಿತ
ವಾಗುವುವು. ನೃಸಿಂಹನ ನಖಬಲವನ್ನು ಕವಿಗಳು ಬಹು ವಿಧವಾಗಿ ವರ್ಣಿಸಿದ್ದಾರೆ;
— "ದಂಭೋಳಿಶ್ರೇಣಿದೀಪ್ಯತ್ಖರನಖರಮುಖಕ್ಷುಣ್ಣ — ದೈತೇಯ ವಕ್ಷೋ
ನಿಷ್ಠ್ಯೂತಾಸೃಕ್ಸ್ರವನ್ತೀಭರಿತದಶದಿಶಾದರ್ಶಿತಾ ಪೂರ್ವಸನ್ಧ್ಯಃ।" — ಎಂದು
ಅನ್ಯತ್ರ ಆಚಾರ್ಯರು ಅನುಭವಿಸಿದ್ದಾರೆ

"ಮಾದ್ಯನ್ಮೋಹಮಹೇಭಕುಂಭದಳನಪ್ರೋದ್ಭೂತಸನ್ಮೌಕ್ತಿಕ—
ದ್ಯೋತಾಲಂಕೃತಚಿತ್ಸುಖಾದ್ವಯವಪುಃ ಶ್ರೀಮಾನ್ ನೃಕಂಠೀರವಃ।
ಪ್ರಹ್ಲಾದಸ್ಯ ಗಿರಃ ಪ್ರಮಾಣನವಿಧೌ ದಿವ್ಯಾಕೃತಿಃ ಸ್ತಂಭತೋ
ನಿರ್ಯಾತಃ ಪ್ರಕಟೀಭವೇತ್ಸಹೃದಯಾಂಭೋಜೇ ಮಮಾ ಖಂಡಿತಂ॥ ಎಂದು.

ಶ್ರೀ ಕಲ್ಪತರುಕಾರರ ಅನುಭವ—ಶ್ರೀ ನೃಸಿಂಹನ ವಿಷಯದಲ್ಲಿ ಅದ್ಭುತವಾಗಿದೆ.
"ನೃಹರಿದಶಯೋಃ ಕೌತ್ಸ್ಯಕ್ತಿಕಂ ಘಟನಾದ್ಭುತಂ ನರಮೃಗಹರಿಂ ದೃಷ್ಟ್ವೈವೈಕಂ
ಸಮುದ್ವಿಜತೇ ಜನಃ॥" — ಎಂದು ಶ್ರೀ ರಂಗರಾಜಸ್ತವದಲ್ಲಿ ಹೇಳಿರುವಂತೆ, ಆ
ನೃಸಿಂಹರೂಪ ನೋಡಿದ ಮೇಲೆ ಪ್ರತ್ಯೇಕವಾಗಿ ಲೋಕೋತ್ತರ ಸುನ್ದರನಾದ ನರ
ನನ್ನಾಗಲೀ ಸಿಂಹವನ್ನಾಗಲೀ ನೋಡಲು ಜನರು ಜುಗುಪ್ಸೆ ಪಡುವ ಹಾಗಿದೆ. ಈ
ಅವತಾರ ಕ್ಷಣಿಕ, ಶತ್ರು ಹತನಾದ. ಪ್ರಹ್ಲಾದನೂ ಹೋದ. ನೃಸಿಂಹನ ಪ್ರಾದು
ರ್ಭಾವದಿಂದ 'ಅವ್ಯಾತ್ ತ್ರೀಣಿ ಜಗನ್ತಿ'— ಎಂದು ತ್ರಿಜಗತ್ತುಗಳ ಪರಿತ್ರಾಣವನ್ನು
ಪ್ರಾರ್ಥಿಸಿರುವುದು ಹೇಗೆ ಸಂಗತ?–ಎಂದರೆ, ಅವನು 'ಆಕುಂಠಮಹಿಮಾ' 'ಹರಿ
ಸ್ಸರ್ವತ್ರ' ಎಂಬ ಭಕ್ತ ಪ್ರಹ್ಲಾದನ ಮಾತು ಸುಳ್ಳಾಗದಿರುವುದಕ್ಕಾಗಿ, ಇವನ
ವ್ಯಾಪ್ತಿಗೆ ಎಲ್ಲಿಯೂ ತಡೆಯಿಲ್ಲ. ಹಿರಣ್ಯಕಶಿಪುವಿಗಾದಂತೆ ಮುಂದೆ ಯಾರಿಗಾ
ದರೂ ಎಲ್ಲಿಯಾದರೂ ಏನಾದರೂ ಆ ನೃಸಿಂಹನನ್ನು ನೋಡುವ ಇಚ್ಛೆ ಉದಿಸ

ಬಹುದು. ಅದಕ್ಕಾಗಿ ಆ ಸ್ತಂಭಮಾತ್ರವಲ್ಲದೆ, ತ್ರೈಲೋಕ್ಯದಲ್ಲಿಎಲ್ಲ ವಸ್ತುಗಳೊಳಗೂ ನೃಸಿಂಹನಿದ್ದಾನೆಂದು "ಸ್ತಂಭೈಕವರ್ಜಮಧುನಾಪಿಕರೀಶನೂನಂ ತ್ರೈಲೋಕ್ಯಮೇತದಖಿಲಂ ನರಸಿಂಹಗರ್ಭಂ॥" ಎಂಬುದಾಗಿ ಆಚಾರ್ಯರು ಶ್ರೀ ವರದರಾಜ ಪಂಚಾಶತ್ತಿನಲ್ಲಿ ಅನುಭವಿಸಿದ್ದಾರೆ. ಭಕ್ತರ ಮನೋರಥಾನುಸಾರ ಅವರಿಚ್ಛಿಸಿದೆಡೆಯಲ್ಲಿ ಅತಿಸುಂದರವೂ, ಅತ್ಯಂತ ಸುಘಟಿತವೂ ಆದ ವೈಕುಂಠಕಂಠೀರವರೂಪ ಪ್ರದರ್ಶನದಿಂದ ಪ್ರಹ್ಲಾದನಿಗೆ ಹೇಗೋ ಹಾಗೆ ಮೂರು ಲೋಕಗಳಿಗೂ ಪ್ರಕೃಷ್ಟಹ್ಲಾದವನ್ನುಂಟುಮಾಡಿ ರಕ್ಷಿಸಲಿ ಎಂದು ಔದಾರ್ಯದಿಂದ ಪ್ರಾರ್ಥಿಸಿದ್ದಾರೆ. ಈ ವೈಕುಂಠಕಂಠೀರವ ಅಕುಂಠಕಂಠೀರವ; ಆದುದರಿಂದ ಅಕುಂಠಮಹಿಮೆ: ಇವನ ರೂಪದಂತೆಯೇ ಹೆಸರೂ ಗಂಭೀರ.

ತ್ರೈಲೋಕ್ಯವೆಲ್ಲ ನರಸಿಂಹ ಗರ್ಭವಾಗಿದ್ದರೂ ಒಂದು ಸ್ತಂಭದಲ್ಲಿ ಮಾತ್ರ ಅವನು ಕಾಣಿಸಿಕೊಂಡುದಕ್ಕೆ ಸ್ವೇಚ್ಛೆ ಅಥವಾ ಅಸುರನ ಇಚ್ಛೆ ನಿಯಾಮಕ. ಅನ್ಯತ್ರ ಅಸುರನಿಗೆ ದಿದೃಕ್ಷೆಯಿರಲಿಲ್ಲ. ಆದುದರಿಂದ 'ಯಾದೃಚ್ಛಿಕಾತ್'— ಎಂದಿದೆ. ನರನಿಗೂ ಸಿಂಹಕ್ಕೂ ಏಕತ್ರ ಸುಶ್ಲಿಷ್ಟ ಘಟನೆ; ಮಹಾಸುರನೂ ಅಘಟನೀಯವೆಂದು ನಿಶ್ಚೈಸಿ ಬಿಟ್ಟಿದ್ದ ಪರಸ್ಪರ ದ್ವಿಕ ಘಟನೆ; ಅಚೇತನವಾದ ಸ್ಥೂಣೆ ಚೇತನರಿಗೂ ಚೇತನನಾದವನನ್ನು ಹಡೆದದ್ದು; ಪಿತಾಮಹರಿಗೂ ಪಿತಾಮಹಿಯಾದ ಸ್ಥೂಣೆ ಗರ್ಭವತಿಯಾಗಿ ಸರ್ವಲೋಕ ಪಿತಾಮಹನನ್ನು ಹಡೆದುದ್ದು— ಇವೆಲ್ಲ ಏನು ಅಘಟಿತ ಘಟನೆಗಳು! ವರವನ್ನು ವರಿಸುವಾಗ ಬ್ರಹ್ಮ ಸಕಲ ತರ್ಕಗಳಿಗೂ ಅತೀತನೆಂಬುದನ್ನು ಮಹಾಸುರ ಮರೆತಿದ್ದ. "ನೈಷಾ ತರ್ಕೇಣ ಮತಿರಾಪನೇಯಾ,"—ಎಂಬ ಉಪನಿಷತ್ತಿನ ಅರ್ಥವು, "ನೈವಾಸುರ ಪ್ರಕೃತಯಃ ಪ್ರಭವನ್ತಿ ಬೋದ್ಧುಂ,"—ಎಂಬಂತೆ ಅಸುರನಿಗೆ ಹೊಳೆಯಲಿಲ್ಲ. "ಸುತಂ ಮಹಾಭಾಗವತಂ ಮಹಾಸುರಃ," ಎಂದು ಶ್ರೀ ಶಂಕರ ಮುಖದಿಂದ ಚ್ಯುತವಾದ 'ಮಹಾಸುರ' ಶಬ್ದವನ್ನೇ ಇಲ್ಲಿಯೂ ಆಚಾರ್ಯರು ಪ್ರಯೋಗಿಸಿದ್ದಾರೆ. ಇವನು ಮಹಾಸುರನಾದರೂ ಇವನ ಗರ್ಭದಲ್ಲಿ ಭಾಗವತೋತ್ತಮ, ಇವನ ಗೃಹಸ್ಥೂಣೆಯಲ್ಲಿ ಭಗವಂತ—ಇವೆರಡೂ ಇವನ ಮಹಾಭಾಗ್ಯ. ಆದ್ದರಿಂದಲೇ ಇವನು ಮಹಾಸುರ! ಪೂರ್ವಸಂಧ್ಯೆಯಲ್ಲಿ "ಕೌಸಲ್ಯಾ ಸುಪ್ರಜಾ ರಾಮ" ಎಂಬಂತೆ ಪಶ್ಚಿಮ ಸಂಧ್ಯೆಯಲ್ಲಿ, "ಮಹಾಸುರಗೃಹಸ್ಥೂಣಾ ಸುಪ್ರಜಾ ನರಸಿಂಹ"-ಎಂದು ಹಾಡಬಹುದು. ಗರ್ಭವಾಸಕಾಲದಲ್ಲಿ ತಾರತಮ್ಯವುಂಟು. ಆದರೆ ಏಕ ಕ್ಷಣ ಮಾತ್ರ. ಗರ್ಭವಾಸವೆಂಬುದು ಇನ್ನೆಲ್ಲಿಯೂ ಕಂಡಿಲ್ಲ.

— "ಹ್ರಿಯಾದೇಯಂ" —

ವ್ರೀಡಾವಿದ್ಧ ವದಾನ್ಯದಾನವಯಶೋನಾಸೀರಧಾಟೀಭಟ—
ಸ್ತ್ರೈಯಕ್ಷಂ ಮಕುಟಂ ಪುನನ್ನವತು ನಸ್ತ್ರೈವಿಕ್ರಮೋ ವಿಕ್ರಮಃ।

ಯತ್ರಸ್ತ್ರಾವಸಮುಚ್ಛ್ರಿತಧ್ವಜಪಟೀ ವೃತ್ತಾನ್ತಸಿದ್ಧಾನ್ತಿಭಿಃ
ಸ್ರೋತೋಭಿಸ್ಸುರಸಿನ್ಧುರಷ್ಟಸುದಿಶಾಸೌಧೇಷು ದೋಧೂಯತೇ ||೬||

ಅರ್ಥ:—[ಯತ್ರಸ್ತ್ರಾವ, ಸುಮುಚ್ಛ್ರಿತ, ಧ್ವಜಪಟೀವೃತ್ತಾನ್ತ ಸಿದ್ಧಾನ್ತಿಭಿಃ] = (ತ್ರೈಲೋಕ್ಯವನ್ನೂ ಪಾದದಡಿಯಲ್ಲಿಟ್ಟುಕೊಳ್ಳಲು) ಯಾವ ಅಡಿಯಿಟ್ಟ ಪ್ರಸಂಗದಲ್ಲಿ ಮೇಲೇರಿಸಿದ ಧ್ವಜಪಟದ ವೃತ್ತಾನ್ತಕ್ಕೆ ಸದೃಶಗಳಾದ[ಸ್ರೋತೋಭಿಃ] =ಪ್ರವಾಹಗಳಿಂದ [ಸುರಸಿನ್ಧುಃ]= 'ದೇವ' ಗಂಗೆಯು [ಅಷ್ಟಸು, ದಿಶಾಸೌಧೇಷು] =ಎಂಟು ದಿಕ್ಕುಗಳೆಂಬ ಪ್ರಾಸಾದಗಳ ಮೇಲೆ [ದೋಧೂಯತೇ] =ಅತಿಶಯವಾಗಿ ಹರಿಯುತ್ತಿದೆಯೋ, (ಅಂತಹ) [ವ್ರೀಡಾ, ವಿದ್ಧ, ವದಾನ್ಯ, ದಾನವ, ಯಶೋನಾಸೀರ, ಧಾಟಿ, ಘಟಿಃ] = ನಾಚಿಕೆಯಿಂದ ಹೊಡೆಯಲ್ಪಟ್ಟ ದಾನಶೂರನಾದ ಅಸುರನ ಕೀರ್ತಿಯ ಮುಂದುಗಡೆ ಬಹು ವೇಗದಿಂದ ನಡೆಯುವ ಸೇವಕನಾದ [ತ್ರ್ಯಕ್ಷಂ]=ತ್ರಿಣೇತ್ರನ ಸಂಬಂಧವಾದ [ಮಕುಟಂ]=ಕಿರೀಟವನ್ನು [ಪುನನ್] =ಪವಿತ್ರಗೊಳಿಸುವ [ತ್ರೈವಿಕ್ರಮಃ]=ತ್ರಿವಿಕ್ರಮನ ಸಂಬಂಧವಾದ [ವಿಕ್ರಮಃ]= ಅಡಿಯು [ನಃ]= ನಮ್ಮನ್ನು [ಅವತು] =ಪೊರೆಯಲಿ.

ಭಾವ:- ತ್ರಿವಿಕ್ರಮಾವತಾರ ವರ್ಣನೆ:— ಅಂಕ—5— ಭಗವದಭಿಮಾನ ಪಾತ್ರನ ಯಶೋಬೃಂಹಣದ ದೃಶ್ಯ 'ತ್ರೀಣಿ ಜಗನ್ತಿ ಅವ್ಯಾತ್'—ಎಂದು ಹಿಂದಿನ ಅವತಾರದಲ್ಲಿ ಮಾಡಿದ್ದ ಪ್ರಾರ್ಥನೆ ಈ ಅವತಾರದಲ್ಲಿ ತ್ರಿಜಗತ್ತುಗಳ ಮೇಲೆಯೂ ಪಾದಾಂಭೋಜವಿಟ್ಟು ಸ್ಪರ್ಶಿಸುವುದರಿಂದ ಪೂರಣವಾಗುತ್ತದೆ. ಭಗವತ್ಪಾದಾಂಭೋಜ ಸಂಯೋಗವೇ ಪುರಷಾರ್ಥ. ಹಿಂದೆ ವಿಗ್ರಹವಿಶಿಷ್ಟನಾದ ನೃಸಿಂಹನಿಗೆ ಸರ್ವವ್ಯಾಪ್ತಿ ನಿರೂಪಿತವಾಯಿತು. ಈಗ ವಿಗ್ರಹೈಕದೇಶವಾದ ಪಾದಮಾತ್ರಕ್ಕೆ ತ್ರಿಜಗದ್ವ್ಯಾಪ್ತಿ ನಿರೂಪಿತವಾಗಿದೆ. ಹಿಂದೆ ಅನ್ತರ್ವ್ಯಾಪ್ತಿ—ಈಗ ಬಹಿರ್ವ್ಯಾಪ್ತಿ. ಈ ಎರಡು ಅವತಾರಗಳಿಂದ ತಿರುಮಂತ್ರಸ್ಥ ನಾರಾಯಣ ಶಬ್ದಾರ್ಥ ವ್ಯಾಖ್ಯಾತವಾಗಿದೆ. "ಅಣೋರಣೀಯಾನ್ ಮಹತೋ ಮಹೀಯಾನ್"—ಎಂಬ ಶ್ರುತಿಗೆ ಈ ಅವತಾರ ನಿದರ್ಶನ. ವಾಮನ ವೇಷದಿಂದ ವೈರೋಚನನ ಸದಸ್ಸಿಗೆ ಬಂದ; ಕೈಯಲ್ಲಿ ನೀರು ಬಿದ್ದ ಕ್ಷಣವೇ ವಾಮನ ತ್ರಿವಿಕ್ರಮನಾದ! "ಭೂಃ ಪಾದೌ"-ಎಂದು ಶ್ರುತಿಯಿದೆ. "ಭೂರೇಕಃ ಪಾದಃ"-ಎಂದು ಅದಕ್ಕಿಂತ ಅತಿಶಯವಾದ ಬೃಹತ್ತ್ವವಿಲ್ಲಿ ಪ್ರದರ್ಶಿತವಾಗಿದೆ. "ಪಾದೋಽಸ್ಯ ವಿಶ್ವಾಭೂತಾನಿ"- ಎಂಬ ಶ್ರುತಿ ಈ ಅವತಾರದಿಂದ ಅನ್ವರ್ಥವಾಗಿದೆ. "ಯಃ ಪಾರ್ಥಿವಾನಿ ವಿಮಮೇ ರಜಾಗ್ಂಸಿ, ಯೋಽಸ್ಕಭಾಯದುತ್ತರಂಸಧಸ್ಥಂ ವಿಚಕ್ರಮಾಣಸ್ತ್ರೇಧೋರುಗಾಯಃ",—ಎಂಬಶ್ರುತಿ ತ್ರಿವಿಕ್ರಮನ ಯಶಸ್ಸನ್ನು ಸಾರಲು ಗಂಭೀರ ನಿಹ್ರಾದವುಳ್ಳ ಡಿಂಡಿಮವಾಗಿದೆ.

ದೇವರುಔದಾರ್ಯಜಲಧಿ. ಬಲಿವ ದಾನ್ಯದಾನವ. ದಾನವರಲ್ಲಿ ವದಾನ್ಯ ದುರ್ಲಭ. ಆದುದರಿಂದ ಇವನಿಗೆ ಅಧಿಕಯಶಸ್ಸು. 'ವದಾನ್ಯ' ಪದಕ್ಕೆ 'ವದ ಅನ್ಯತ್' ಅನ್ಯದ್ವದ ಎಂಬ ವ್ಯುತ್ಪತ್ತಿಯೂ ತೋರುತ್ತದೆ. ಎಷ್ಟು ದಾನಮಾಡಿದರೂ ಇವನಿಗೆ ತೃಪ್ತಿ

ಯಿಲ್ಲ. ಆದುದರಿಂದ 'ವದಾನ್ಯ'—ಶಬ್ದ ಈ ದಾನವನಿಗೆ ಅನ್ವರ್ಥ. ಇಂಥ ಯಾಚಕನಿಗೆ ಅಂತಹ ದಾತೃವಿನ ಬಳಿ ಯಾಚಿಸಲು ಬರುವಾಗ ಅತಿಲಜ್ಜೆಯಾಗುತ್ತದೆ. ನವೀನ ಯಾಚ್ಞಾಲಾಘವದಿಂದ ಆವನು ಬಲಿಯ ಸದಸ್ಸಿನಲ್ಲಿ ವಾಮನನಾಗಿ ಕಾಣಿಸಿಕೊಳ್ಳುತ್ತಾನೆ. ಇಂತಹ ದುರ್ಲಭ ಪಾತ್ರದ ಅತ್ಯಲ್ಪ ಯಾಚನೆಯಿಂದ ತನ್ನ ವದಾನ್ಯತೆಯ ಯಶಸ್ಸಿಗೆ ಹ್ರಾಸವೊದಗಿತೆಂದು ದಾತೃವೂ ಇವನಿಗಿಂತ ಅತಿಶಯವಾದ ಲಜ್ಜೆಯಿಂದ ವಿದ್ಧನಾಗುತ್ತಾನೆ. ಆ ಸಮಯದಲ್ಲಿ ಅತಿಮುಗ್ಧವೂ ಭಾವಗರ್ಭವೂ ಅನನ್ವಿತವೂ ಅಪರಿಸಮಾಪ್ತವೂ ಆದ ಈ ಅಭ್ಯಾಗತನ ಮಾತುಗಳು ಬಲಿಗೆ ಅತಿ ವ್ಯಾಮೋಹವುಂಟುಮಾಡುತ್ತವೆ. ಆದುದರಿಂದ ಗುರುವಿನ ಪ್ರತಿಷೇಧವನ್ನೂ ಲಕ್ಷಿಸದೆ ಕೊಡುತ್ತಾನೆ. ಇದರ ಸೊಬಗಿಗೆ ಮಾರುಹೋಗಿ ಶ್ರೀ ಪರಾಂಕುಶ ಮುನಿಗಳು,

"ಅರಿಯಾಮೈಕ್ಕರ ಲಾಯ್ ನಿಲಂ ಮಾವಲಿ ಮೂವಡಿ ಯೆನ್ರು, ಅರಿಯಾಮೈವಂಚಿತ್ತಾಯ್ ಎನದಾವಿಯುಳ್ ಕಲನ್ದೇ,"—ಎಂಬ ಪಾಶುರದಲ್ಲಿ ಇದರ ವಿಷಯವಾಗಿ ಹಾಡಿದ್ದಾರೆ. ಸಭೆಗೆ ಬಂದ ವಾಮನನಿಗೂ ಇವನ ಅಪೂರ್ವ ತೇಜಸ್ಸಿನಿಂದ ವಿದ್ಧನಾದ ಬಲಿಗೂ ನಡೆದ ಉಕ್ತಿಪ್ರತ್ಯುಕ್ತಿಗಳು ಕೆಳಗಿನ ಶ್ಲೋಕದಲ್ಲಿ ಸ್ವಾರಸ್ಯವಾಗಿ ವ್ಯಂಜಿತವಾಗಿದೆ;—

"ಕಸ್ತ್ವಂ ಬ್ರಹ್ಮನ್?" "ಅಪೂರ್ವಃ," "ಕ್ವಚತರಽವಸತಿ?" "ಯಾಽಖಿಲಾ ವಿಶ್ವಸೃಷ್ಟಿಃ," "ಕಸ್ತೇ ತ್ರಾತಾ?" "ಹ್ಯನಾಥೋ," "ಕ್ವಚತವ ಜನಕಃ," "ನೈವ ತಾತಂಸ್ಮರಾಮಿ!" "ಕಿನ್ತೇಽಭೀಷ್ಟಂದದಾನಿ?", "ತ್ರಿಪದಪರಿಮಿತಾಭೂಮಿಃ", "ಅತ್ಯಲ್ಪಂ?" "ಏತತ್ತ್ರೈಲೋಕ್ಯಂ",-ಭಾವಗರ್ಭಂ ಬಲಿಮಿತಿ ಚ ವದನ್ ವಾಮನೋ ನಸ್ಸಪಾಯಾತ್||"—ಇಂಥ ಅಪೂರ್ವ ಪಾತ್ರದ ಅತ್ಯಲ್ಪಯಾಚನೆಯಿಂದ ವದಾನ್ಯ ದಾನವನಿಗೆ ಸಹಿಸಲಾರದಷ್ಟು ವ್ರೀಡೆಯುಂಟಾಯಿತು. ಇವನಲ್ಲಿ 'ಹ್ರಿಯಾದೇಯಂ' ಎಂಬ ಶಾಸ್ತ್ರೀಯ ಧರ್ಮಾನುಷ್ಠಾನದಿಂದ, ಜಯಿಸಲು ಬಂದ ದೇವನು ಜಿತನಾದ ದಾತೃವಿನಲ್ಲಿ ಹ್ರೀರೂಪಶ್ರೀಯಿಂದುಂಟಾಗಿದ್ದ ಶೋಭೆ ಈ ಪರಮೋದಾರನಿಗೇ ಗೊತ್ತು. ಇದರಿಂದ ಪರಮ ಪ್ರೀತನೂ ಔದಾರ್ಯರಸಜ್ಞನೂ ಆದ ದೇವನು ಅವನ ಯಶಸ್ಸನ್ನು ಉದ್ಧತವಾಗಿ ಉದ್ಘೋಷಿಸಲು ಬೃಹದ್ರೂಪ ಪರಿಗ್ರಹಿಸಿ ಪಾದಾಚಾರದಿಂದಲೇ ದಿಗಂತಗಳಿಗೆ ಇವನ ಯಶಸ್ಸಿಗಿಂತ ಮುಂಚೆ ಓಡುತ್ತಿರುವಂತಿದೆ. "ನಹಿ ಕಸ್ತೂರಿಕಾಮೋದಃ ಶಪಥೇನ ವಿಭಾವ್ಯತೇ,"—ಎಂಬಂತೆ ಸ್ವಯಂ ಪ್ರಥನವು ಯಶಸ್ಸಿಗೆ ಸ್ವಭಾವ. ಅದಕ್ಕೂ ಅಗ್ರಭಟನಾಗಿ ಲೋಕವಿಕ್ರಾಂತ ಭಟನಾದ ಈ ಶತ್ರುಭಟನು ಹೋಗುತ್ತಿದ್ದಾನೆಂದು, "ಯಶೋ ನಾಸೀರಧಾಟೀ ಭಟಃ"—ಎಂಬುದರಿಂದ ವ್ಯಂಜಿತವಾಗುತ್ತೆ. ತ್ರಿವಿಕ್ರಮಾವತಾರ ಜಗತ್ತುಗಳನ್ನು ಅಳೆಯುವುದಕ್ಕೋಸ್ಕರವಲ್ಲ. ಪರಿಗ್ರಹಿಸುವುದಕ್ಕೂ ಅಲ್ಲ, ಇಂದ್ರನಿಗೆ ಕೊಡುವುದಕ್ಕೂ ಅಲ್ಲ;

ಇಂತಹ ದಾತೃವಿನ ಔದಾರ್ಯರೂಪ ಯಶಸ್ಸನ್ನು ಕ್ಷಣಕಾಲದಲ್ಲಿ ದಿಗಂತ ವಿಶ್ರಾಂತವಾಗಿ ಪ್ರಸಿದ್ಧಿಪಡಿಸುವುದಕ್ಕಾಗಿಯೋ ಎಂಬಂತಿದೆ. ಅವತಾರಕ್ಕೆ ಮೊದಲು ಬೇರೆ ಉದ್ದೇಶವಿದ್ದಿರಬಹುದು. ಈಗ ಅದನ್ನು ಮರೆತು ಅವನ ಗುಣದಿಂದ ವಿದ್ಧನಾಗಿ ಅವನ ಯಶಸ್ಸನ್ನು ಸದ್ಯಃ ಪ್ರಥನ ಮಾಡುವುದನ್ನೇ ಉದ್ದೇಶಿಸಿರುವಂತಿದೆ. ಬಲಿ ದಾನವನಾದರೂ ವದಾನ್ಯ. ಅಪಹೃತವಾದ ತ್ರೈಲೋಕ್ಯವನ್ನೇ ಹಿಂದಕ್ಕೆ ಕೊಡಬೇಕೆಂದು ಇಂದ್ರ ಹೋಗಿ ಯಾಚಿಸಿದ್ದರೆ ನಿಶ್ಚಯವಾಗಿಯೂ ಅವನಿಗೆ ಕೊಟ್ಟುಬಿಡುತ್ತಿದ್ದ. ಸುರನಾಯಕನಿಗಾದರೋ ತಾನು ಹೋಗಿ ಯಾಚಿಸಲು ನಾಚಿಕೆ. ಸ್ವಾಶ್ರಿತನಾದ ಅವನ ಯಾಚ್ಞಾದೈನ್ಯವನ್ನು ತಪ್ಪಿಸಲು ಸರ್ವಲೋಕನಾಯಕ ತಾನೇ ಬಂದು ಯಾಚಿಸುತ್ತಾನೆ. ಇದೀಗ ನಾಥನ ಗುಣ! "ಲೋಕನಾಥಃ ಪುರಾಭೂತ್ವಾ ಸುಗ್ರೀವಂ ನಾಥಮಿಚ್ಛತಿ।—ಎನ್ನುವಂತೆ, ನಾಥನೆ, ನಾಥಕಾಮನೆಗಳೆರಡೂ ಈ ನಾಥನ ಸ್ವಭಾವ. ಇಂಥಹ ನಾಥನಿರುವುದರಿಂದಲೇ,

"ತ್ರೈಲೋಕ್ಯಮಪಿ ನಾಥೇನ ಯೇನ ಸ್ಯಾನ್ನಾಥವತ್ತರಂ॥"—ಎಂಬಂತೆ ಜಗತ್ತು ಸನಾಥಕರ. ಈ ಸಂಬಂಧದಲ್ಲಿ ಶ್ರೀ ಭಟ್ಟಾರ್ಯರ ಕೆಳಗಿನ ಶ್ಲೋಕವು ಅತ್ಯಂತ ಭಾವ್ಯವಾಗಿದೆ:—

"ದೈತ್ಯೌದಾರ್ಯೇಣ ಯಾಚ್ಞಾ ವಿಹತಿಮಪನಯನ್ ವಾಮನೋಽರ್ಥೀತ್ವ ಮಾಸೀಃ

ವಿಕ್ರಾಂತೇ ಪಾದಪದ್ಮೇ ತ್ರಿಜಗದಣುಸಮಂ ಪಾಂಸುಲೀಕೃತ್ಯಲಿಲ್ಯೇ।
ನಾಭೀಪದ್ಮಶ್ಚಮಾನಕ್ಷಮಮಿದ ಭುವನಗ್ರಾಮ ಮನ್ಯಂ ಸಿಸೃಕ್ಷೋಃ
ಕಸ್ಥಾ ರಂಗೇಂದ್ರವೃತ್ತೇ ತವ ಜಯ ಮುಖರೋ ಡಿಂಡಿಮಸ್ತತ್ರ ವೇದಃ॥"—

ಪಾದೋದಕದಿಂದ ಮೊದಲು ಶಿವನನ್ನು ಶಿವನನ್ನಾಗಿ ಮಾಡಿ ಅನಂತರ ಪಾದದಿಂದ ವಿನ್ಯಾಸ ತ್ರಿಜಗತ್ತುಗಳ ಪವಿತ್ರೀಕರಣವೆಂದು, "ತ್ರ್ಯಯಕ್ಷಂ ಮಕುಟಂ ಪುನನ್ನಸತು ನಸ್ತ್ರೈವಿಕ್ರಮೋವಿಕ್ರಮಃ॥"ಎಂಬುದರಿಂದ ಭಾಸವಾಗುತ್ತದೆ. ಮಕುಟದ ಮೇಲೆ ಭಗವಂತ ಪಾದಪದ್ಮವಿಟ್ಟಾಗ ಅದನ್ನು ಶಿವನು ಮೂರು ಕಣ್ಣುಗಳಿಂದಲೂ ಆತ್ಯಾದರದಿಂದ ನೋಡಿದನೆಂಬ ಸ್ವಾರಸ್ಯ 'ತ್ರ್ಯಯಕ್ಷ'-ಪದಪ್ರಯೋಗದಲ್ಲಿದೆ ಶಿವನ ಶಿರಸ್ಸಿನ ಮೇಲೆ ಪರಿಭ್ರಾಂತಳಾದ ಗಂಗೆಯ ಮೇಲೆ ಬಹು ವ್ಯಾಮೋಹ ಆಚಾರ್ಯರಿಗಿದೆಯೆಂದು ಅವರ ಈ ವಿಚಿತ್ರವರ್ಣನೆಯಿಂದ ವ್ಯಕ್ತವಾಗುತ್ತೆ;—

"ವಿನ್ಧ್ಯಾಚಲವಿಕಟಸನ್ಧಿ ನಟಜಟಾಪರಿಭ್ರಾಂತಾ ಗಂಗಾ"—
"ಜಡ ಕಿರಣ ಶಕಲಧರ ಜಟಿಲನಟಪತಿಮಕುಟ ತಟನಟನಪಟುವಿಬುಧ ಸರಿದರೆ ಬಹುಳಮಧುಗಳನಲಲಿತಪದನಳಿನರಜಉಪಮೃದಿತನಿಜವೃಜಿನಜಹದುಪಲಕನುಚಿರಪರಪುಮಾಂಸವರಯುವರೆನುತ,"—

ವಿಷ್ಣುರ್ವಾಮನ ರೂಪೇಣ ಚಚಾರ ವಸುಧಾತಲೇ"—ಎಂದು ಪುರುಷರಿಗೂ ದೃಷ್ಟಿ ಚಿತ್ತಾಪಹಾರಿ ವಿಗ್ರಹವುಳ್ಳ ಶ್ರೀರಾಮ ಎದುರಿನಲ್ಲಿ ವಾಮನನ ಸರ್ವಾಂಗಶಾಯಿಲಾವಣ್ಯವನ್ನು ವಿಶ್ವಾಮಿತ್ರರು ಪ್ರಶಂಸಿಸಿದ್ದಾರೆ.

ಮೊದಲು ವಾಮನ ಈ ಆಶ್ರಮದಲ್ಲಿ ಸಂಚರಿಸಿದ; ಈಗ ಆ ಸಂಚರಣಾನನ್ದವನ್ನು ಅನುಭವಿಸಲು ತದಭಿನ್ನನಾದ ನಿನ್ನನ್ನು ಕರೆತಂದಿದ್ದೇನೆಯೇ ಹೊರತು ಕ್ರತು ರಕ್ಷಣೆಗಾಗಿಯಲ್ಲವೆಂದೂ ಇಲ್ಲಿವ್ಯಂಗ್ಯವಿದೆ. ತಮ್ಮ ಕೂಟಸ್ಥರ ಅಭಿಪ್ರಾಯವನ್ನು ಬಹುಮಾನಿಸುವುದಕ್ಕಾಗಿಆಚಾರ್ಯರು ಆಎರಡು ಅವತಾರಗಳ ವೃತ್ತಾನ್ತಗಳನ್ನು ಮೇಲೆ ಉದಾಹರಿಸಿರುವಒಂದೇ ಗದ್ಯದಲ್ಲಿ ಒಟ್ಟಿಗೆ ಅತಿಹೃದ್ಯವಾಗಿ ಚಿತ್ರಿಸಿದ್ದಾರೆ. ಲಾಘವ ಭಯದಿಂದ ದೇವತೆಗಳು ನೆಲದ ಮೇಲೆ ಕಾಲಿಡರು. ಈ ದೇವದೇವನಾದರೋ ತ್ರಿಜಗತ್ತುಗಳನ್ನೂ ಪಾದದಿಂದ ನಿಬಿಡವಾಗಿಯೂ, ನಿರನ್ತರವಾಗಿಯೂ, ಸ್ಪರ್ಶಿಸಿದನೆಂದು ಅತಿ ಚಮತ್ಕಾರವಾಗಿ ಆಚಾರ್ಯರು ದಯಾಶತಕದ ಕೆಳಗಿನ ಶ್ಲೋಕದಲ್ಲಿ ಅನುಭವಿಸಿದ್ದಾರೆ-

"ಅಶೇಷಮವಿಶೇಷತಸ್ತ್ರಿಜಗದಂಜನಾದ್ರೀಶಿತುಃ ।
ಚರಾಚರಮಚೀಕರಚ್ಚರಣ ಪಂಕಜೇನಾಙ್ಕಿತಮ್ ॥"—

ತ್ರಿವಿಕ್ರಮನ ಪಾದದಿಂದ ಆಕಾಶದಲ್ಲಿ ಬೀಳುವ ಗಂಗೆ ಎಲ್ಲ ದಿಕ್ಕುಗಳಲ್ಲಿಯೂ ಶುಭ್ರವಾದ ನೊರೆಗಳೊಡನೆ ಹರಿಯುತ್ತಾಳೆ. ಗಿರಿನಿರ್ಝರಪಾತವನ್ನು ನೋಡಿರುವವರಿಗೆ ಇದು ಸುವಿದಿತ. ಅವಳ ಜಲಪಾತವು ಯಶಸ್ತರೆಗಳಂತೆಯೂ ಶ್ವೇತಧ್ವಜಪಟಗಳಂತೆಯೂ ಇವೆ. 'ಸಿದ್ಧಾನ್ತಿಭಿಃ' ಎಂಬಲ್ಲಿ 'ಸಿದ್ಧಾನ್ತ' ಶಬ್ದದಿಂದ ಸ್ವಸಿದ್ಧಾನ್ತ ಗುರುಪಂಕ್ತಿ ವಿಷಯವಾದ—"ದಿಕ್ಸೌಧಾಬದ್ಧ ಜೈತ್ರಧ್ವಜಪಟವನಸ್ಫಾತಿ ನಿರ್ಧೂತ ತತ್ತತ್ಸಿದ್ಧಾನ್ತಸ್ತೋಮತೂಲಸ್ತಬಕನಿಗಮನವ್ಯಕ್ತ ಸದ್ವರ್ತನೀತಾ॥" —ಎಂಬ ಶ್ಲೋಕವೂ ಸ್ಮಾರಿತವಾಗಿದೆ.ಅಲ್ಲದೆ,

"ಏಕಃ ಪ್ರಾಸೀಸರತ್ಪಾದಂ ಅನ್ಯಃ ಪ್ರಾಕ್ಷಾಳಯನ್ಮುದಾ ।
ಅಪರೋಽದೀಧರತ್ತೀರ್ಥಂ ಕೋಽಧಿಕಸ್ತತ್ರಗಣ್ಯತಾಂ॥"

—ಎಂದು ಪಾದಪ್ರದರ್ಶಿತವಾದ ಭಗವತ್ಪರತ್ವ ಸಿದ್ಧಾನ್ತವೂ ಇಲ್ಲಿ ವಿವಕ್ಷಿತವಾಗಿರಬಹುದು.

ತ್ರಿವಿಕ್ರಮನ ಪಾದವು ಧ್ವಜವಾಹಿಯಾದ ಭಟ. ದಿಕ್ಸೌಧಗಳು ಧ್ವಜ ಸ್ಥಾಪನಾ ಸ್ಥಾನಗಳು. ಭಗವದಭಿಮಾನಕ್ಕೆ ಪಾತ್ರನಾದವನ ಯಶಸ್ಸು ಹೀಗೆ ಭಗವಂತನಿಂದಲೇ ಬೃಂಹಿತವಾಗುತ್ತದೆ. ಈ ತ್ರಿವಿಕ್ರಮಾಪದಾನಕ್ಕೆ ಪೂರ್ವಿಕರಾದ ಭಾವುಕರು ಬಹುವಾಗಿ ಮಾರು ಹೋಗಿದ್ದಾರೆ.

—"ಕ್ರೋಧಾಗ್ನೌ ರುಧಿರಮೇವ ಹೋತವ್ಯಂ"—

ಕ್ರೋಧಾಗ್ನಿಂ ಜಮದಗ್ನಿಪೀಡನಭವಂ ಸನ್ತರ್ಪಯಿಷ್ಯನ್ ಕ್ರಮಾತ್
ಅಕ್ಷತ್ರಾಮಭಿಸನ್ತತಕ್ಷ ಯ ಇಮಾಂ ತ್ರಿಸ್ಸಪ್ತಕೃತ್ವಃ ಕ್ಷಿತಿಂ।

ದತ್ವಾ ಕರ್ಮಣಿ ದಕ್ಷಿಣಾಂ ಕ್ವಚನ ತಾಮಾಸ್ಕಂದ್ಯ ಸಿಂಧುಂ ವಸನ್

ಅಬ್ರಹ್ಮಣ್ಯಮಪಾಕರೋತು ಭಗವಾನಾಬ್ರಹ್ಮಕೀಟಂ ಮುನಿಃ॥

ಅರ್ಥ:— [ಯಃ]=ಯಾವನು [ಜಮದಗ್ನಿಪೀಡನಭವಂ] = ಜಮದಗ್ನಿಯ ವಧೆದಿಂದುಂಟಾದ[ಕ್ರೋಧಾಗ್ನಿಂ]=ಕೋಪವೆಂಬ ಅಗ್ನಿಯನ್ನು[ಸನ್ತರ್ಪಯಿಷ್ಯನ್] =ತೃಪ್ತಿಗೊಳಿಸುವವನಾಗಿ [ಇಮಾಂ]=ಈ [ಕ್ಷಿತಿಂ] =ಭೂಮಿಯನ್ನು [ಕ್ರಮಾತ್] =ಕ್ರಮವಾಗಿ [ಅಕ್ಷತ್ರಾಂ]=ಕ್ಷತ್ರಿಯರಿಲ್ಲದಂತೆ [ತ್ರಿಸ್ಸಪ್ತಕೃತ್ವಃ] ೨೧ಸಲ [ಅಭಿಸನ್ತತಕ್ಷ] =ಚೆನ್ನಾಗಿ ಕೆತ್ತಿದನೋ (ಮತ್ತು) [ತಾಂ] =ಆ ಭೂಮಿಯನ್ನು [ಕ್ವಚನ]= (ಸರ್ವ ದಕ್ಷಿಣೆಯೆಂಬ) ಒಂದಾನೊಂದು[ಕರ್ಮಣಿ]=ಯಾಗದಲ್ಲಿ [ದಕ್ಷಿಣಾಂ] = ದಕ್ಷಿಣೆಯನ್ನಾಗಿ [ದತ್ವಾ] =ಕೊಟ್ಟು [ಸಿನ್ಧುಂ] =ಸಮುದ್ರವನ್ನು [ಆಸ್ಕನ್ದ್ಯ]= ಆಕ್ರಮಿಸಿ [ವಸನ್] =ವಾಸಿಸುತ್ತಿರುವನೋ (ಅಂತಹ) [ಭಗವಾನ್] =ಷಡ್ಗುಣೈಶ್ವರ್ಯ ಸಂಪನ್ನನಾದ [ಮುನಿಃ] =ಪರಶುರಾಮನು [ಆಬ್ರಹ್ಮಕೀಟಂ] =ಬ್ರಹ್ಮನಿಂದ ಹಿಡಿದು ಕೀಟಪರ್ಯಂತವಾಗಿ [ಅಬ್ರಹ್ಮಣ್ಯಂ] =ಅಮಂಗಳವನ್ನು [ಅಪಾಕರೋತು] =ಹೋಗಲಾಡಿಸಲಿ.

ಭಾವ:- ಶ್ರೀ ಪರಶುರಾಮಾವತಾರ ವರ್ಣನೆ: —ಅಂಕ—6—ದೃಶ್ಯ— ರೋಷಬೀಭತ್ಸರಸಗಳು ಇದು ಅನುಪ್ರವೇಶಾವತಾರ. ಶೇಷನಲ್ಲಿ ನಿರತಿಶಯ ಶಕ್ತಿ ಪ್ರದರ್ಶನಕ್ಕಾಗಿ ವಿಪ್ರನಾದ ಪರಶುರಾಮನಲ್ಲಿ ಸರ್ವಕ್ಷತ್ರಿಯವಿನಾಶ ರೂಪವಾದ ಬಾಹು ಶಕ್ತಿಯನ್ನು ಭಗವಂತ ಇಟ್ಟಿದ್ದಾನೆ. ಕ್ಷತ್ರಿಯರು ಭಗವಂತನ ಬಾಹುಜರು. ಇವರಿಗೆ ವಿಪ್ರಬಾಹುವಿನಿಂದ ಘಾತ. ಕ್ಷತ್ರಿಯ ಜಾತಿ ಸಾಮಾನ್ಯವನ್ನೂ ಕ್ಷತ್ರಿಯನಿಂದ ಉನ್ಮೂಲನ ಮಾಡಿಸುವುದು ನ್ಯಾಯವಲ್ಲ. ಬ್ರಾಹ್ಮಣನಲ್ಲಿ ನಡೆಸಿದ ಅಪರಾಧಕ್ಕೆ ಬ್ರಾಹ್ಮಣಾವೇಶದಿಂದಲೇ ದೀರ್ಘವೈರ ಪರಿಹರಿಸುವುದು ಉಚಿತ. ಲೋಕರಕ್ಷಣೆಗಾಗಿ ಕ್ಷತ್ರಿಯರು ಸ್ಥಾಪಿತರಾಗಿರುವರು. ನಿರಾಯುಧರೂ, ದೀನರೂ, ಅನಾಥರೂ ಆದ ಬ್ರಾಹ್ಮಣರನ್ನು ಅವರು ಸಂರಕ್ಷಿಸಬೇಕು. "ಕ್ಷತ್ರಿಯೈರ್ಧಾರ್ಯತೇ ಶಸ್ತ್ರಂ ನಾರ್ತಶಬ್ದೋ ಭವೇದಿತಿ,"-ಅಂತಹ ಕ್ಷತ್ರಿಯರೇ ಅವರನ್ನು ಕೊಂದರೆ ಅವರನ್ನು ನಿರ್ಮೂಲ ಮಾಡುವುದು ನ್ಯಾಯ್ಯ. ಶಮಪ್ರಧಾನರಾದ ತಪೋಧನರನ್ನು ರಾಜನು ಸರ್ವಥಾ ರಕ್ಷಿಸಬೇಕು. ಅವರಿಗೆ ಸ್ವಲ್ಪ ಉಪಕರಿಸಿದರೂ ಅವರ ಸುಕೃತ ಇವನಿಗೆ ಬರುತ್ತದೆ. ಹಾಗೆಯೇ ಅಪಕರಿಸಿದರೆ ಅವರ ದುಷ್ಕೃತವೆಲ್ಲ ಅಪಕಾರಿಗೆ ಬರುವುದು. ಕಾರ್ತವೀರ್ಯ ಪ್ರಸಿದ್ಧ ರಾಜ ಅಕಾರ್ಯನಿವಾರಣೆಯಲ್ಲಿ,

"ಅನ್ತಶ್ಶರೀರೇಷ್ವಪಿ ಯಃ ಪ್ರಜಾನಾಂ ಪ್ರತ್ಯಾದಿದೇಶಾವಿನಯಂ ವಿನೇತಾ।
ಅಕಾರ್ಯಚಿನ್ತಾಸಮಕಾಲಮೇವ ಪ್ರಾದುರ್ಭವಂಶ್ಚಾಪಧರಃ ಪುರಸ್ತಾತ್ ॥"

—ಎಂದು ಪ್ರಸಿದ್ಧಿ ಪಡೆದವನು. ಇಂತಹ ಧರ್ಮಸೇತು ತಪಸ್ವಿ ಬ್ರಾಹ್ಮಣನಾದ ಜಮದಗ್ನಿಯನ್ನು ಪೀಡಿಸಿದುದರಿಂದ ಅವನ ಆಪ್ತಪುತ್ರನಾದ ಪರಶುರಾಮನಿಗೆ

ಕೋಪ ಬಂತು. ರೋಷ ಬೀಭತ್ಸರಸಗಳು ಈ ಅವತಾರದಲ್ಲಿ ಅಭಿವ್ಯಕ್ತವಾಗಿವೆ. ಕೋಪ ಭಗವಂತನಿಗೆ ಸಹಜವಲ್ಲ. 'ಕ್ರೋಧಮಾಹಾರಯಾಮಾಸ' ಎಂಬಂತೆ ಅದು ಆಹಾರ್ಯ. ಪರಶುರಾಮನಲ್ಲಿ ತನ್ನ ಶಕ್ತಿಯನ್ನು ಆವೇಶಗೊಳಿಸಿ ಇವನ ಮೂಲಕ ತನ್ನ ಇಷ್ಟವನ್ನು ದೇವನು ಸಾಧಿಸುತ್ತಾನೆ. ಹತ್ತು ಅವತಾರಗಳಲ್ಲಿಎರಡು ಶೇಷಾ-ವತಾರಗಳು. ಶೇಷಿ ಶೇಷನಾಗಿಯೂ ಹುಟ್ಟುತ್ತಾನೆ. ಶೇಷ-ಶೇಷಿಗಳಿಬ್ಬರೂ ಒಟ್ಟಿಗೂ ಇಲ್ಲಿ ಹುಟ್ಟುತ್ತಾರೆ. ಇಲ್ಲಿ ಶೇಷನನ್ನು ಸ್ವೇಚ್ಛೆಯಿಂದ ಗೌರವಿಸಿ ಲಾಲಿಸುವಂತೆ ಪರಮಪದದಲ್ಲಿಯೂ ನಡೆಸುತ್ತಾನೆಂಬ ರಹಸ್ಯವನ್ನು ಅವತಾರಗಳಲ್ಲಿಯೂ ಪ್ರಕಾಶಪಡಿಸುತ್ತಾನೆ. ಕ್ಷತ್ರಮಾತ್ರಕ್ಕೆ ಪ್ರಳಯಕಾರಿ ಪರಶುರಾಮ. ಭಗವದಾಹಿತ ಶಕ್ತಿಯಿಂದ ಇವನಿಗೆ ಅಂತಹ ಬೃಹತ್ತ್ವ.

"ಪರಶ್ವಥ ತಪೋಧನ ಪ್ರಥನ ಸತ್ಕ್ರತೂಪಾಕೃತ, ಕ್ಷಿತೀಶ್ವರ ಪಶುಕ್ಷರತ್ ಕ್ಷತಜ ಕುಂಕುಮಸ್ನಾಪಕೈಃ॥"-ಎಂಬಲ್ಲಿ ಈ ತಪೋಧನ ನಡೆಸಿದ ಕ್ಷತ್ರ ಹಿಂಸೆಯನ್ನು ಸತ್ಕ್ರತುವನ್ನಾಗಿ ಆಚಾರ್ಯರು ವರ್ಣಿಸಿದ್ದಾರೆ. ಯಜ್ಞೋಪಾಕೃತಪಶುಗಳಿಗೆ ಹೇಗೋ ಹಾಗೆ ಈ ಕ್ಷತ್ರಿಯರಿಗೂ ಹನನ ಹನನವಲ್ಲ. ಹಿತವೇ ಅದು "ತಸ್ಮಾದ್ಯಜ್ಞೇ ವಧೋಽವಧಃ,"-ಎಂದು ಶಾಸ್ತ್ರವಿದೆ. "ರಾಜಭಿರ್ಧೃತದಂಡಾಸ್ತು ಕೃತ್ವಾ ಪಾಪಾನಿ ಮಾನವಾಃ। ನಿರ್ಮಲಾಃ ಸ್ವರ್ಗಮಾಯಾನ್ತಿ ಸನ್ತಃ ಸುಕೃತಿನೋ ಯಥಾ"-ಎಂಬಂತೆ ಲೌಕಿಕ ರಾಜದಂಡವೂ ಶುದ್ಧಿ ಹೇತು. ಕ್ರೂರವನ್ನಿತವಾದ ಕರ್ಮವೂ ಶ್ರೀರಾಮನ ಪ್ರವ್ರಜನದಂತೆಯೂ ಶಸ್ತ್ರವೈದ್ಯನ ಕ್ರೂರ ಚ್ಛೇದನಾದಿ ಚಿಕಿತ್ಸೆಯಂತೆಯೂ ಹಿತವಾಗುವುದು. "ಅಬ್ರಹ್ಮಣ್ಯಮಪಾಕರೋತು"—ಎಂದು ಪ್ರಾರ್ಥಿಸಿರುವಂತೆ, ಅಬ್ರಹ್ಮಣ್ಯದ ಅಪಾಕರಣ್ಯಕ್ಕಾಗಿ ಅಂತಹ ಘೋರ ಕೃತ್ಯಗಳನ್ನೆಸಗಿದುದರಿಂದ ಪರಶುರಾಮನ ಕೃತ್ಯ ಜುಗುಪ್ಸಿತವಲ್ಲ. ಶುಭತ್ವನಿರ್ವಾಹವೇ ಅದಕ್ಕೆ ಯುಕ್ತ.

ಪಿತೃವಧನಿಮಿತ್ತವಾದುದರಿಂದ ಪರಶುರಾಮನ ಕೋಪ ದೋಷೈಕಾನ್ತವಲ್ಲವೆನ್ನುವುದಕ್ಕಾಗಿ, "ಕ್ರೋಧಾಗ್ನಿಂ ಜಮದಗ್ನಿಪೀಡನಭವಂ,"-ಎಂಬ ಕ್ರೋಧ ಹೇತುವನ್ನು ಪ್ರದರ್ಶಿಸಿದೆ. ಜಮದಗ್ನಿ—ಕ್ರೋಧಾಗ್ನಿ—ಇವೆರಡೂ ಅಗ್ನ್ಯನ್ತವಾದ ಪದಗಳು. ಜಮದಗ್ನಿ ಪೀಡೆಯಿಂದ ಪುತ್ರನಲ್ಲಿ ಕ್ರೋಧಾಗ್ನಿ ಜ್ವಲಿಸಿತು. ಪೀಡಿತವಾದ ಅಗ್ನಿಯಿಂದ ಪೀಡಿಸುವ ಅಗ್ನಿಯುದ್ಭವಿಸಿತು. ಪಿತೃ ವಧದಿಂದುಂಟಾದ ಕ್ರೋಧಾಗ್ನಿಯನ್ನೇ ಅಗ್ನ್ಯನ್ತವಾದ ತಂದೆಯನ್ನಾಗಿ ಈ ಪುತ್ರ ಭಾವಿಸಿದನು. ಶತ್ರು ಜಾತಿಯ ರಕ್ತಧಾರೆಗಳಿಂದ ಆ ಅಗ್ನಿಗೆ ಸನ್ತರ್ಪಣೆ ಮಾಡಿದ. ಪುತ್ರ ಚಿರಜೀವಿಯಾದುದರಿಂದ ಪಿತೃ ತರ್ಪಣವನ್ನು ಬಹುಕಾಲ ಮಾಡಬೇಕು. ಚಿರಜೀವಿಯ ಕ್ರೋಧವೂ ಚಿರಜೀವಿಯೇ. ಅದ್ದರಿಂದ ಕ್ರಮವಾಗಿ 21 ಸಲ ಹೊಸಹೊಸದಾಗಿ ಹುಟ್ಟಿದ ಕ್ಷತ್ರಿಯ ಪ್ರರೋಹಗಳನ್ನು ಪರಶುವಿಗೆ ಆಹುತಿ ಕೊಟ್ಟು, ಆ ರಕ್ತಧಾರೆಗಳಿಂದ ಪಿತೃ ತರ್ಪಣ ಮಾಡಿದ ಈ ರೋಷ ರಾಮನಿಗೆ ಕರುಣೆಯ ಗಂಧವೂ ಇಲ್ಲ. ಶತ್ರು ರುಧಿರ ಪ್ರದರ್ಶನ ಈ ಕ್ರುದ್ಧನಿಗೆ ಪರಮ ಪ್ರೀಣನ ದ್ರೌಪದಿ ಸ್ತ್ರೀಯಾದರೂ ದುಶ್ಶಾಸನನ

ರುಧಿರದಿಂದ ತನ್ನ ಕೇಶಪಾಶವನ್ನು ಸಂಸ್ಕರಿಸಿಕೊಂಡು ತೃಪ್ತಳಾದಳು. ಕ್ರೋಧಾಗ್ನಿಯಲ್ಲಿ ರುಧಿರವನ್ನೇ ಹೋಮ ಮಾಡಬೇಕು.

"ದೇವಃ ಸ್ವರ್ಗಗತೋಽಪಿ ಶಾತ್ರವವಧೇನಾರಾಧಿತಸ್ಸ್ಯಾತ್,"—ಎಂದು ರಾಕ್ಷಸ ಹೇಳಿದ್ದಾನೆ. ಪಿತೃವು ದಿವಂಗತನಾದರೂ ಶತ್ರು ರಕ್ತದಿಂದ ಅವನಿಗೆ ತೃಪ್ತಿ. ಅಲ್ಲಿಯ ಅಮೃತ ಸುಖಕ್ಕಿಂತ ಅಧಿಕ ಸುಖ. ಅವನಿಗೆ ಶತ್ರುವಧೆಯಿಂದ ಅಗ್ನಿಯಲ್ಲಿ ಆಜ್ಯಾದಿಯನ್ನು ಒಟ್ಟಿಗೆ ಒಂದೇ ಸಲ ಹೋಮ ಮಾಡ ಕೂಡದು. ಕ್ರಮವಾಗಿಯೇ ಹೋಮ ಮಾಡಬೇಕು. ಈ ಅಸಹನಮುನಿ ನೀರಸ, ನಿಷ್ಕರುಣ,ಶುಷ್ಕನಾದ ಶ್ರೋತ್ರಿಯ. "ದಶಪೂರ್ವಾನ್ ದಶಾಪರಾನ್ ಪುನಾತಿ"-ಎಂದು ಕೇಳಿದ ಆ ಸಂಖ್ಯೆಯನ್ನು ವಧ್ಯ ಸಂಖ್ಯೆಯಲ್ಲಿಯೂ ಆದರಿಸಿದ. ಹಿಂದೆ ಮುಂದೆ ಒಟ್ಟು 21 ತಲೆ ಮಾರಿನವರಿಗೆಲ್ಲ ತೃಪ್ತಿಯಾಗಲೆಂದು ಕ್ರಮವಾಗಿ 21 ಸಲ ಈ ರುಧಿರ ಧಾರೆಯಿಂದ ಹೋಮ ನಡೆಸಿದ. ಅಗ್ನಿ ಹುತಾಶನ-ಕ್ರೋಧಾಗ್ನಿ ಶತ್ರು ರಕ್ತಾಶನ, "ದ್ಯಾವಾಪೃಥಿವೀನಿಷ್ಟತಕ್ಷುಃ"-ಎಂಬ ಶ್ರುತಿ ಪ್ರತ್ಯಭಿಜ್ಞಾಪನೆಗಾಗಿ 'ಸನ್ತತಕ್ಷ'-ಎಂದುಇಲ್ಲಿ ಪ್ರಯೋಗವಿದೆ. 'ತಕ್ಷಣ' ಎಂದರೆ ಕೆತ್ತುವುದು. ಇದರ ಕೃತ್ಯನಿಷ್ಕಂಟಕೀಕರಣ ಮಾತ್ರ. ಕ್ಷತ್ರಸಾಮಾನ್ಯ ಕಂಟಕವಾಗಿದ್ದಿತು. ಚೆನ್ನಾಗಿ ಭೂಮಿಯನ್ನು ಕೆತ್ತಿದುದರಿಂದ ಅಷ್ಟು ಮಾತ್ರ ಹೋಗಲಾಡಿಸಿದ. ಛೇದ್ಯವಾದ ವೃಕ್ಷ ಗುಲ್ಮ ಲತಾದಿಗಳು ಛೇತ್ತೃವಿನೊಡನೆ ಪ್ರತಿಭಟಿಸವು. ಹಾಗೆಯೇ ಪರಶುವಿನಿಂದ ಛೇದಿಸಲ್ಪಟ್ಟಾಗ ಇವನ ಪ್ರತಿಭಟರೂ ಪ್ರತಿಭಟಿಸಲಿಲ್ಲವೆಂದು ಭಾವ. ಕ್ಷತ್ರಪುರೋಹಗಳ ನಿರ್ಮೂಲನಕ್ಕಾಗಿ ಮತ್ತೆ ಮತ್ತೆ ಕ್ಷಿತಿತಲವನ್ನು ಕೆತ್ತಿದ. "ಅಲಾವೀದ್ಬೂಪಾಲಾನ್ ಪಿತೃಗಣಮತಾಪ್ಸೀತ್ತದಸೃಜಾ,"-ಎಂದಿದ್ದಾರೆ ಶ್ರೀ ಭಟ್ಟಪಾದರು. ರಾಜ್ಯದ ಆಸೆಯಿಂದ ಇವನು ಕ್ಷತ್ರಿಯರನ್ನು ಕೊಲ್ಲಲಿಲ್ಲ; ಕ್ರೋಧಾಗ್ನಿ ಸಂತರ್ಪಣೆ. ಪಿತೃಸಂತರ್ಪಣೆಗಳಿಗಾಗಿಯೇ ಕೊಂದದ್ದು. ಈ ಮುನಿ ವಿಪ್ರನೂ ವಿರಕ್ತನೂ ಆದ ಬ್ರಹ್ಮಚಾರೀ. ರಾಜಗುಣಭೂತವಾದ ರಂಜನ ವ್ಯಾಪಾರ ಇವನಿಗೆ ಅತ್ಯಂತ ಅಶಕ್ಯ. ಇವನಿಗೆ ಕ್ರೋಧವೊಂದೇ ಗೊತ್ತು. ಅರ್ಥಕಾಮಗಳನ್ನರಿಯನು. ಧರ್ಮವನ್ನು ಮಾತ್ರ ಬಲ್ಲನೆಂದು ಮೂರನೇ ಪಾದದಿಂದ ತಿಳಿಯುತ್ತೆ. ಆದ್ದರಿಂದ ಗೆದ್ದ ಭೂಮಿಯನ್ನೆಲ್ಲ ಕಾಶ್ಯಪರಿಗೆ ಧಾರೆಯೆರೆದ. ತಾನಿರುವುದಕ್ಕೂ ಸ್ವಲ್ಪ ಸ್ಥಳವನ್ನೂ ಇಟ್ಟುಕೊಳ್ಳಲಿಲ್ಲ. ಎಲ್ಲವನ್ನೂ ದಾನಮಾಡಿ ಭೂಮಿಗೆ ಹೊರಗಾಗಿ ತನ್ನ ತೇಜಸ್ಸಿನಿಂದ ಸಮುದ್ರದಲ್ಲಿ ಸ್ವಲ್ಪ ಸ್ಥಳವನ್ನು ಕಲ್ಪಿಸಿ ಅಲ್ಲಿ ವಾಸಿಸಿದ. ಕ್ರೋಧೈಕರಸನಾದ ಇವನಿಂದ ಶುಭವೇನನ್ನು ಆಶಿಸಬಹುದು?—ಎಂದರೆ, ಬ್ರಹ್ಮಾದಿ ಕೀಟಪರ್ಯನ್ತ ಅಬ್ರಹ್ಮಣ್ಯವನ್ನು ಹೋಗಲಾಡಿಸಲಿ ಎಂದು ಆಚಾರ್ಯರು ಆಶಿಸಿದ್ದಾರೆ. ಬ್ರಹ್ಮಣ್ಯಕ್ಕೆ ವಿರೋಧ ಬಂದರೆ ಏನಾದೀತು?—ಎಂದರೆ, "ಬ್ರಾಹ್ಮಣೋ ಮಮ ದೇವತಾ", ಎಂಬಿರುವ ಭಗವದ್ದೈವತಕ್ಕೇ ಹಾನಿ. ಧರ್ಮ, ದೈವ, ವೇದ— ಇವುಗಳಿಂದ ಲೋಕ ನಿಂತಿದೆ. ಈ ಮೂರೂ ಬ್ರಾಹ್ಮಣನ ಅಧೀನ.

—: "ಶರಣಮುರಗತಾನ್ನಃ ತ್ರಾಯತೇ ಶಾರ್ಙ್ಗಧನ್ವಾ" :—

ಪಾರಾವಾರಪಯೋವಿಶೋಷಣ ಕಲಾಪಾರೀಣ ಕಾಲಾನಲ-
ಜ್ವಾಲಾಜಾಲ ವಿಹಾರಹಾರಿ ವಿಶಿಖ ವ್ಯಾಪಾರ ಘೋರಕ್ರಮಃ ।
ಸರ್ವಾವಸ್ಥಸಕೃತ್ಪ್ರಪನ್ನ ಜನತಾ ಸಂರಕ್ಷಣೈಕವ್ರತೀ
ಧರ್ಮೋ ವಿಗ್ರಹವಾನಧರ್ಮವಿರತಿಂ ಧನ್ವೀ ಸ ತನ್ವೀತನಃ

॥ ೮ ॥

ಅರ್ಥ: — [ಪಾರಾವಾರ, ಪಯೋ, ವಿಶೋಷಣ, ಕಲಾ, ಪಾರೀಣ, ಕಾಲಾನಲ, ಜ್ವಾಲಾ, ಜಾಲ, ವಿಹಾರ, ಹಾರಿ, ವಿಶಿಖ, ವ್ಯಾಪಾರ, ಘೋರಕ್ರಮಃ]= ಸಾಗರದ ನೀರನ್ನು ಒಣಗಿಸುವ ವಿದ್ಯೆಯಲ್ಲಿ ಸಮರ್ಥವಾದ ಪ್ರಳಯಾಗ್ನಿಯ ಶಿಖೆಗಳ ಸಮೂಹದ ಲೀಲೆಯನ್ನು ಅಪಹರಿಸುವ ಬಾಣದ ಕಾರ್ಯಾಚರಣೆಯ ಘೋರ ರೀತಿಯುಳ್ಳವನೂ, [ಸರ್ವಾವಸ್ಥಸಕೃತ್ಪ್ರಪನ್ನಜನತಾಸಂರಕ್ಷಣೈಕವ್ರತೀ] = ಎಂತಹ ಅವಸ್ಥೆಯಲ್ಲಿಯೂ ಒಮ್ಮೆ ಶರಣ ಹೊಂದುವ ಜನಸಮೂಹವನ್ನು ಚೆನ್ನಾಗಿ ಪೊರೆಯುವುದನ್ನೇ ಮುಖ್ಯ ವ್ರತವುಳ್ಳವನೂ [ವಿಗ್ರಹವಾನ್] = ಮೂರ್ತಿಮತ್ತಾದ [ಧರ್ಮಃ]=ಧರ್ಮಸ್ವರೂಪನೂ ಆದ [ಸಃ]=ಆ ಪ್ರಸಿದ್ಧ [ಧನ್ವೀ]=ಧಾನುಷ್ಕನಾದ ಶ್ರೀ ರಾಮನು [ನಃ]=ನಮಗೆ [ಅಧರ್ಮವಿರತಿಂ]=ಅಧರ್ಮಗಳ ನಾಶವನ್ನು [ತನ್ವೀತ]=ಮಾಡಲಿ.

ಭಾವ- ಅಂಕ7- ಶ್ರೀರಾಮಾವತಾರವರ್ಣನೆ-ದೃಶ್ಯ-ಪ್ರತಿಶಯನಭೂಮಿಕೆ-

ಕ್ಷಿತಿತಕ್ಷಣ ಪ್ರಸ್ತಾವವಾದ ಮೇಲೆ ಸಮುದ್ರದಹನವೃತ್ತಾಂತ ಬಂದಿದೆ. ಅಸುರಮೋಹನಕ್ಕಾಗಿ ಶ್ರೀರಾಮ ಮನುಷ್ಯ ಭಾವನೆಯನ್ನೇ ಗೌರವಿಸಿ ತಾನು ಬ್ರಹ್ಮವೆಂಬುದನ್ನೆ ಮರೆತಿದ್ದ. ಆದ್ದರಿಂದ ಉನ್ಮತ್ತನಂತೆಯೂ ಪಾಮರನಂತೆಯೂ ದಂಡಕಾರಣ್ಯದಲ್ಲಿ ಮುಕ್ತಕಂಠವಾಗಿ, "ಗ್ರಾವಾ ರೋದಿತ್ಯಪಿ ದಳತಿವಜ್ರಸ್ಯ ಹೃದಯಂ"— ಎಂಬಂತೆ ಬಹು ದೈನ್ಯದಿಂದ ರೋದಿಸಿದ. ಈ ಅವತಾರದಲ್ಲಿ ಇವನನ್ನು ಪರಬ್ರಹ್ಮನೆಂದು ತಿಳಿಯುವುದು ಹೇಗೆ ಸಾಧ್ಯ?-ಎಂದರೆ, ತಾನು ಪರಬ್ರಹ್ಮನೆಂಬುದನ್ನು ತಾನಾಗಿ ಪ್ರಕಾಶಪಡಿಸದಿದ್ದರೂ ಪ್ರಳಯಾಗ್ನಿಗಿಂತ ಘೋರವಾದ ಅವನ ಶರವು ಸಾಗರಶೋಷಣರೂಪ ಉಪಸಿಂಹರ್ತೃತ್ವಾದಿಗಳಿಂದ ಅದನ್ನು ಪ್ರದರ್ಶಿಸುತ್ತದೆ. ಅವನ ಒಂದು ಬಾಣವೇ ಅಷ್ಟು ಬೃಹತ್ತಾದ ಮೇಲೆ ಅವನ ಬೃಹತ್ತ್ವದಲ್ಲಿ ಸಂಶಯವೇನು? ಶೂರತಮನೂ ಶತ್ರುಪಕ್ಷದ ಪ್ರಧಾನಮಲ್ಲನೂ ಆದ ಇಂದ್ರಜಿತ್ತು ಇವನಲ್ಲಿ ಸಾಗರಶೋಷಣವಿಕ್ರಮವನ್ನು ಕಂಡು ಆಶ್ಚರ್ಯಗೊಂಡು ಶ್ರೀರಾಮನನ್ನು ಉತ್ತಮವೀರನೆಂದೂ ತನಗೆ ಸಮನಾದ ಪ್ರತಿಯೋದ್ಧೃವೆಂದೂ ನಿಶ್ಚಯಿಸಿ ಅವನೊಡನೆಯೇ ಯುದ್ಧಕ್ಕೆ ಬಂದನೆಂದು ಮಹಾನಾಟಕದಲ್ಲಿ ಕೆಳಗೆ ಕಂಡಂತೆ ಸುಂದರವಾಗಿ ಪ್ರದರ್ಶಿಸಿದೆ: —

"ಕ್ಷುದ್ರಾಸ್ಸನ್ತ್ರಸನ್ತೇ ವಿಜಹತಿ ಹರಯಃ ಕ್ಷುಣ್ಣಮುಕ್ತೇಭಕುಂಭಾಃ
ಯುಷ್ಮದ್ದೇಹೇಷು ಲಜ್ಜಾಂ ದಧತಿ ಪರಮಮೀ ಸಾಯಕಾ ನಿಷ್ಪತನ್ತಃ ।
ಸೌಮಿತ್ರೇ ತಿಷ್ಠ ಪಾತ್ರಂ ತ್ವಮಸಿ ನ ಹಿ ರುಷಾಂ ನನ್ವಹಂ ಮೇಘನಾದಃ
ಕಿಂಚಿದ್ಭ್ರೂಭಂಗಲೀಲಾನಿಯಮಿತಜಲಧಿಂ ರಾಮಮನ್ವೇಷಯಾಮಿ॥"

ಶರಣಾಗತಿಯೆಂಬ ಸೂಕ್ಷ್ಮ ಧರ್ಮಪ್ರಕಾಶನವು ಈ ಅವತಾರಕ್ಕೆ ಮುಖ್ಯ ಪ್ರಯೋಜನ. ಆ ಧರ್ಮಸಂಸ್ಥಾಪನೆಗಾಗಿಯೇ ಈ ಅವತಾರ. ಪ್ರಪನ್ನನಾದ ಸುಗ್ರೀವನ ಹಿಂಸಕನಾದುದರಿಂದ ವಾಲಿ ಇವನಿಗೆ ಪ್ರಥಮ ವಧ್ಯನಾದ. ಯಾವ ಧರ್ಮವನ್ನು ಸ್ಥಾಪಿಸಲು ಇವನು ಇಚ್ಛಿಸುತ್ತಾನೆಯೋ ಅದಕ್ಕೆ ವಿಘಾತಮಾಡುವವನು ಇವನಿಗೆ ಪ್ರಧಾನ ಶತ್ರು. ನೂತನಾಶ್ರಿತನಾದ ವಿಭೀಷಣನ ಇಚ್ಛೆಯಂತೆ ಸಮುದ್ರನಲ್ಲಿ ತಾನೇ ಶರಣಾಗತಿ ಮಾಡಿದ, ಅಂಜಲಿಬದ್ಧನಾಗಿ ಪ್ರತಿಶಯನಭೂಮಿಕೆಯಿಂದ ಸಾಗರದ ಮರಳನ್ನು ಭೂಷಿಸಿದ. ಅವತಾರ ಭೂಮಿಕೆಯ ನಡುವೆ ಪ್ರತಿಶಯನಭೂಮಿಕೆಯ ಪ್ರದರ್ಶನವಾಗುತ್ತೆ. ನೀಲವಾನ ಕಡಲಿನ ಮಗ್ಗುಲಲ್ಲಿ ಅದನ್ನು ಹೀರಿಬಿಡುವಮತ್ತೊಂದು ನೀಲ ಕಡಲಿನಂತೆ ಕಾಣಿಸಿದ "ಜಲಧಿಡಿಂಭ ಡಂಭಸ್ಪೃಶಃ" ಎಂದು ಇದನ್ನು ಅಭೀತಿಸ್ತವದಲ್ಲಿ ಆಚಾರ್ಯರು ಕೀರ್ತಿಸಿದ್ದಾರೆ. ಆಶ್ರಿತರ ಸಂಸಾರ ಸಾಗರವನ್ನೂ ಹೀಗೆಯೇ ಹೀರಿಬಿಡುತ್ತಾನೆಂಬುದೂ ಇದರಿಂದವ್ಯಂಜಿತವಾಗುತ್ತದೆ. ಸಾಗರವನ್ನು ದಾಟಲು ದಾರಿ ಕೊಡದುದಕ್ಕಾಗಿ ಅವನ ಮೇಲೆ ಕೋಪವಿಲ್ಲ; ಪ್ರಪತ್ತಿಮಾರ್ಗವಿಹನನದಿಂದ ರೇಗಿದ. ಆಗ ತಾನೇ ಮರಳಿನಲ್ಲಿ ಸಮುದ್ರರಾಜನಿಗೆ ಕೇಳಿಸುವಂತೆ ಪ್ರಪತ್ತಿ ಧರ್ಮವನ್ನು ಸಾರಿದ್ದ. ಆ ಧರ್ಮವನ್ನು ಭಂಗಪಡಿಸಿದುದರಿಂದ ಅವನ ಮೇಲೆ ಮಹತ್ತಾದ ಕೋಪ ಬಂದಿತು. ಆ ಸಂದರ್ಭದಲ್ಲಿ ಮಹತ್ಪ್ರಯತ್ನದಿಂದ ಮುಚ್ಚಿಕೊಂಡಿದ್ದ ತನ್ನ ಸರ್ವೇಶ್ವರತ್ವವನ್ನೂ, "ಸಾಗರಂ ಶೋಷಯಿಷ್ಯಾಮಿ" ಎಂದು ಉದ್ಘೋಷಿಸಿದ. "ಕುಶಲೀ ಯದಿ ಕಾಕುತ್ಸ್ಥಃ ಕಿಂ ನ ಸಾಗರಮೇಖಲಾಂ ಮಹೀಂದಹತಿ ಕೋಪೇನ ಯುಗಾನ್ತಾಗ್ನಿರಿವೋತ್ಥಿತಃ॥"--ಎಂದು ಸೀತೆಯ ಸಂದೇಶವನ್ನೂ ಹನುಮಂತನ ಮೂಲಕ ಶ್ರೀರಾಮ ಮೊದಲೇ ಕೇಳಿದ್ದ. ಮಹೀ ಸೀತಾಮಾತೆ. ಅವಳನ್ನು ದಹಿಸಬಾರದು. ಸಾಗರಮಹಾ ಅಪರಾಧಿ. ಅದರ ದಹನದಿಂದ ಸೀತೆಗೆ ಅಭಿನಂದನೆಯಾದೀತು; ಇಂದ್ರಜಿತ್ತು ಮೊದಲಾದ ಶತ್ರುಗಳಿಗೂ ಆಶ್ಚರ್ಯವಾಗುತ್ತೆ. ಅಪರಾಧಿಯಾದ ಸಮುದ್ರರಾಜನಿಗೂ ತಕ್ಕಶಿಕ್ಷೆ. ಆದುದರಿಂದ ಸಮುದ್ರದಹನವನ್ನಿಲ್ಲಿ ಅದ್ಭುತವಾಗಿ ಅಭಿನಯಿಸುತ್ತಾನೆ. ಇವನು ಪರಾವರ ಪರಾವರನ ವಿಶಿಖ ಪಾರಾವಾರವನ್ನು ದಹಿಸುತ್ತದೆ. ಪ್ರಪತ್ತಿಮಾರ್ಗ ಪ್ರದರ್ಶಕನು ದಯಾನಿಧಿಯಾಗಿರಬೇಕು. ಉತ್ತರಾರ್ಧದಲ್ಲಿ ಪ್ರಪತ್ತಿಯ ಪ್ರಸ್ತಾವವಿದೆ. ಪೂರ್ವಾರ್ಧದಲ್ಲಿ ಇಂತಹ ನಿಷ್ಕರುಣತ್ವ, ಘೋರತ್ವಾದಿ ಪ್ರದರ್ಶನವೇಕೆ?—ಎಂದರೆ ದಯಾಶತಕದ, ಕೆಳಗಿನ ಶ್ಲೋಕದಲ್ಲಿ ಇದಕ್ಕೆ ಉತ್ತರವಿದೆ—

"ಅಪಾಂಪತ್ಯುಃ ಶತ್ರೂನ್ ಅಸಹನಮುನೇರ್ಥಮರ್ನಿಗಳಂ
ಕೃಪೇ ಕಾಕಸ್ಯೈಕಂ ಹಿತಮಿತಿ ಹಿನಸ್ತಿಸ್ಮ ನಯನಂ
ವಿಲೀನಸ್ತ್ವಾತನ್ತ್ರೌ ನೃಪಗಿರಿಪತಿಸ್ತದ್ವಿಹೃತಿಭಿಃ
ದಿಶತ್ಯೇವಂ ದೇವೋ ಜನಿತಸುಗತಿಂ ದಂಡನವಿಧಿರ್॥"—

ಸಾಗರವನ್ನು ದಂಡಿಸಲುದ್ಯುಕ್ತವಾದ ಕೋಪ ಅವನಿಗೆ ಹಿತವಾಗಿ ಪರಿಣಮಿಸಿತು. ಆದ್ದರಿಂದ ಪೂರ್ವಾರ್ಧದಲ್ಲಿಯೂ, ದಯಾಪ್ರಭಾವವೇ ವರ್ಣಿತವಾಗಿದೆ. ಸಮುದ್ರ ಇವನಿಗೆ ಅಷ್ಟು ಕೋಪಬರುವಷ್ಟು ಅದ್ರಾರ್ಪರಾಧಮಾಡಿದ್ದರೂ ಅವನನ್ನು ಶರಣವರಣ ಕ್ಷಣದಲ್ಲಿಯೇ ರಕ್ಷಿಸಿದ. ಅದೇ ಕೋಪದಿಂದ ಅವನ ಶತ್ರುಗಳನ್ನು ಕೊಂದ. ಕೋಪವನ್ನು ಇಷ್ಟು ಬೃಹತ್ತಾಗಿ ಪ್ರದರ್ಶಿಸಿರುವುದು ಅದರ ಶಮನೋಪಾಯವಾದ ನಮಸ್ಕಾರದ ಬೃಹತ್ತ್ವ ಪ್ರದರ್ಶನಕ್ಕಾಗಿ. ಪ್ರತ್ಯಸ್ತ್ರಮಂಜಲಿರಸೌ ತವ ನಿಗ್ರಹಾಸ್ತ್ರೇ"—ಎಂದು ಶ್ರೀವರದರಾಜಪಂಚಾಶತ್ತಿನಲ್ಲಿದೆ. ಇಲ್ಲಿಯ ಪೂರ್ವೋತ್ತರಾರ್ಧಗಳನ್ನು ಗತ್ಯಂತರದಿಂದಲೂ ಏಕೀಕರಿಸಬಹುದು. ಸೀತಾಪ್ರಾಪ್ತಿಗೆ ಸಾಗರ ಅಡ್ಡವಾಗಿದ್ದಾನೆ, ಅವನು ಅವಳ ಪ್ರಾಪ್ತಿಗೆ ಪರಿಪನ್ಥಿ. ಸೀತೆಯೆಂಬುವಳು ಶೋಕದಿಂದ ಬಿಡಿಸಲ್ಪಡಲಿರುವ ಚೇತನ. ಚೇತನ ಪಾಪದಿಂದ ಭವಸಾಗರವನ್ನು ನಿರ್ಮಿಸಿಕೊಂಡಿದ್ದಾನೆ. ಹನುಮತ್ಸಮನಾದ ಗುರುವು ಈ ಚೇತನನಿಗೆ ಭಗವತ್ಪ್ರಾಪ್ತಿಯಲ್ಲಿ ಉತ್ಕಂಠೆಯನ್ನುಂಟುಮಾಡಿ ಅದನ್ನು ಭಗವಂತನಿಗೆ ನಿವೇದಿಸಿದರೆ ಆಗ ಆ ಪ್ರಾಪ್ತಿಗೆ ತಡೆಯಾಗಿರುವ ಪಾಪವೆಂಬ ಸಂಸಾರ ಸಾಗರವನ್ನು ಭಗವಂತನು ಬಾಣವೆಂಬ ಕಾಡ್ಗಿಚ್ಚಿನಿಂದ ಒಣಗಿಸಿಬಿಡುವನು. ಚೇತನನ ಜ್ಞಾನಾಗ್ನಿಯಿಂದುಂಟಾದ ಭಗವತ್ಕ್ರೋಧಾಗ್ನಿಯು ಸರ್ವಕರ್ಮಗಳನ್ನೂ ಸುಟ್ಟುಬೂದಿ ಮಾಡಿ ಬಿಡುತ್ತದೆಯೆಂಬುದನ್ನು ಭಗವಂತ ಇಲ್ಲಿ ತೋರಿಸುವಂತಿದೆ. ನಮ್ಮ ಜ್ಞಾನದಿಂದುಂಟಾದ ಭಗವತ್ಕ್ರೋಧಾಗ್ನಿ ನಮ್ಮ ಪಾಪ ಸಾಗರವನ್ನು ಒಣಗಿಸುತ್ತದೆ. ನಮ್ಮ ಜ್ಞಾನ ಮಾತ್ರಕ್ಕೆ ಆಸಾಮರ್ಥ್ಯವಿಲ್ಲ. ಸರ್ವಲೋಕ ಶರಣ್ಯನ ಶರಣಾಗತಿಯನ್ನೂ ಭಂಗಗೊಳಿಸಿದ ಮಹಾಪರಾಧಿ ಸಮುದ್ರ. ಅವನನ್ನೂ ಶರಣಾಗತನಾದ ಕೂಡಲೆ ಶ್ರೀ ರಾಮ ರಕ್ಷಿಸಿದನಾದ್ದರಿಂದ, "ಸರ್ವಾವಸ್ಥಸಕೃತ್ಪ್ರಪನ್ನಜನತಾಸಂರಕ್ಷಣೈಕವ್ರತೀ"—ಎಂಬುದು ವ್ಯಕ್ತವಾಗುತ್ತೆ. ಅಷ್ಟು ಪ್ರವೃದ್ಧವಾಗಿದ್ದ ಕೋಪವು ಆ ಅದ್ರಾರ್ಪರಾಧಿಯು ನಮಸ್ಕರಿಸಿದ ಕ್ಷಣದಲ್ಲಿಯೇ ಶಾಂತವಾಯಿತು. "ರಾಮೋ ವಿಗ್ರಹವಾನ್ ಧರ್ಮಃ" ಎಂಬುದು ಶತ್ರುವಾದ ಮಾರೀಚನು ಮಾಡಿದ ಪ್ರಶಂಸೆ. ಶತ್ರುವನ್ನೂ ರಮಣಗೊಳಿಸುವ ಗುಣ ಇವನಲ್ಲಿದೆ. ಶತ್ರುಕೃತ ಪ್ರಶಂಸೆಯನ್ನು ಎಲ್ಲರೂ ನಂಬುವರು. ಅನುಕೂಲರ ಪ್ರಶಂಸೆಯಾದರೆ ಪಕ್ಷಪಾತಪ್ರಯುಕ್ತವೂ ಆಗಿರಬಹುದು. ಶತ್ರುವು ಮಾಡಿದ ಪ್ರಶಂಸೆ ಮಿಥ್ಯೆಯಾಗಲಾರದು. ಶ್ರದ್ಧೆಯೆಂಬುದು ಪ್ರಪತ್ತಿಗೆ ಮುಖ್ಯ ಅಂಗ. ಶತ್ರು ಪ್ರಶಂಸಾಪದವನ್ನು ಇಲ್ಲಿ ಪ್ರಯೋಗಿಸಿರುವುದರಿಂದ ಆ ಶ್ರದ್ಧೆ ಉತ್ಪಾದಿಕವಾಗುತ್ತೆ. ಇಲ್ಲಿ 'ಧರ್ಮ'ವೆಂದರೆ ಪ್ರಪತ್ತಿ ರೂಪ

ಧರ್ಮ. ಇವನಿಂದ ಅಧರ್ಮವಿರತಿರೂಪವಾದ ಶುಭವನ್ನು ಪ್ರಾರ್ಥಿಸಿದ್ದಾರೆ. ಭವ ಸಾಗರ ವಿರತಿಯನ್ನುಂಟುಮಾಡಲಿ ಎಂದು ಭಾವ.

ಸಾಗರಶೋಷಣ ವೃತ್ತಾಂತದಿಂದ ಸೇತುನಿರ್ಮಾಣದ ಜ್ಞಾಪಕ ಬರುತ್ತೆ. ಈ ಧರ್ಮ ಸೇತು ರಚಿಸಿದ ಆ ಸೇತುವಿನ ದರ್ಶನ ಮಾತ್ರದಿಂದಲೇ ಬ್ರಹ್ಮಹತ್ಯಾದಿ ಪಾಪಗಳು ವಿರತವಾಗುತ್ತವೆ ಎಂದು ಹೇಳಿದೆ. 'ಸಃಧನ್ವೀ'— ಎಂದರೆ, "ರಾಮ ಶ್ಶಸ್ತ್ರಭೃತಾಮಹಂ" ಎಂದು ಪ್ರಸಿದ್ಧನಾದ ಧನ್ವೀ "ಶರಣಮುಪಗತಾನ್ ನಸ್ತ್ರಾಯತೇ ಶಾರ್ಙ್ಗಧನ್ವಾ"—ಎಂಬಂತೆ ಶರಣಾಗತ ತ್ರಾಣ ವಿಷಯದಲ್ಲಿ ಹೇಳಿರುವ ಶಾರ್ಙ್ಗಧನ್ವಿತ್ವ ಕೀರ್ತನವು ಈ ಶ್ಲೋಕಾರ್ಥವನ್ನು ವ್ಯಕ್ತಪಡಿಸುತ್ತದೆ.

ಕ್ಷೇಮ ಕೃಷೀವಲಃ

ಫಕ್ಕತ್ಕಾರವಪತ್ತನಪ್ರಭೃತಯಃ ಪ್ರಾಸ್ತಪ್ರಲಂಬಾದಯಃ
ಕಾಲಾಙ್ಕಸ್ಯ ತಥಾ ವಿಧಾ ವಿಹೃತಯಸ್ತನ್ವನ್ತು ಭದ್ರಾಣಿ ನಃ ।
ಕ್ಷೀರಂ ಶರ್ಕರಯೇವ ಯಾಭಿರಪೃಥಗ್ಭೂತಾಃ ಪ್ರಭೂತೈರ್ಗುಣೈ-
ರಾಕೌಮಾರಕಮಸ್ವದನ್ತ ಜಗತೇ ಕೃಷ್ಣಸ್ಯ ತಾಃ ಕೇಳಯಃ ॥

ಅರ್ಥ. [ಕ್ಷೀರಂ]=ಹಾಲು [ಶರ್ಕರಯಾ, ಇವ]=ಸಕ್ಕರೆಯೊಡನೆ ಸೇರಿರುವಂತೆ [ಯಾಭಿಃ]=ಯಾವ ಬಲ ಭದ್ರನ ಲೀಲೆಗಳೊಡನೆ [ಅಪೃಥಗ್ಭೂತಾಃ]= ಒಂದಾಗಿ ಸೇರಿಕೊಂಡಿದ್ದ [ಕೃಷ್ಣಸ್ಯ]=ಶ್ರೀಕೃಷ್ಣನ [ಆಕೌಮಾರಕಂ]=ಬಾಲ್ಯಾರಭ್ಯ ನಡೆಸಿದ[ತಾಃ]=ಅಂಥ ಪ್ರಸಿದ್ಧಗಳಾದ[ಕೇಳಯಃ]= ಲೀಲೆಗಳು[ಪ್ರಭೂತೈಃ] = ಬಹುವಾದ [ಗುಣೈಃ[= ಕಲ್ಯಾಣಗುಣಗಳಿಂದ [ಜಗತೇ]= ಪ್ರಪಂಚಕ್ಕೆ [ಅಸ್ವದನ್ತ]= ರುಚಿಸಿದವೋ[ತಥಾವಿಧಾಃ]= ಅಂಥ[ಫಕ್ಕತ್ಕಾರವ ಪತ್ತನಪ್ರಭೃತಯಃ] = ಹಾಹಾಕಾರ ಮಾಡುವ ದುರ್ಯೋಧನನ ಪಟ್ಟಣ (ಹಸ್ತಿನಪುರವೇ) ಆದಿಯಾದ [ಪ್ರಾಸ್ತಪ್ರಲಂಬಾದಯಃ]= ಸಂಹರಿಸಲ್ಪಟ್ಟ ಪ್ರಲಂಬಾಸುರನೇ ಮೊದಲಾದ [ಕಾಲಾಙ್ಕಸ್ಯ=] ಬಲರಾಮನ [ವಿಹೃತಯಃ]= ಲೀಲೆಗಳು [ನಃ]= ನಮಗೆ [ಭದ್ರಾಣಿ]= ಮಂಗಳಗಳನ್ನು [ತನ್ವನ್ತು]= ವಿಸ್ತರಿಸಲಿ.

ಅಂಕ—8 ಬಲರಾಮಾವತಾರ ವರ್ಣನೆ—ದೃಶ್ಯ— ವಿಶಿಷ್ಟಾದ್ವೈತ. ಶೇಷ—ಶೇಷಿ ಇಬ್ಬರೂ ಒಟ್ಟಿಗೆ ಭೂಮಿಯನ್ನಲಕಂರಿಸಿದರು. ಶೇಷ ಶೇಷಿಯಾದ. ಶೇಷಿ ಶೇಷನಾದ. ಆ ಶೇಷಿಧರ್ಮ ಇಲ್ಲಿ ಚೆನ್ನಾಗಿ ಸ್ಥಾಪಿತವಾಗಿದೆ. ಶೇಷನನ್ನು ಅತಿಯಾಗಿ ಸಂಮಾನಿಸುತ್ತಾನೆ.

"ಕ್ವಚಿತ್ಕ್ರೀಡಾಪರಿಶ್ರಾನ್ತಂ ಗೋಪೋತ್ಸಙ್ಗೋಪಬರ್ಹಣಮ್ ।
ಸ್ವಯಂ ವಿಶ್ರಮಯತ್ಯಾರ್ಯಂ ಪಾದಸಂವಾಹನಾದಿಭಿಃ॥"

—ಎಂಬಂತೆ ಅಣ್ಣನ ಕಾಲನ್ನೂ ಶ್ರೀಕೃಷ್ಣ ಒತ್ತುತ್ತಾನೆ.

ಬೃಹತ್ತ್ವ ಪ್ರದರ್ಶನ ಇಲ್ಲಿ ಮುಖ್ಯಕೃತ್ಯ. ಹಲಾಗ್ರದಿಂದ ಹಸ್ತಿನಪುರವನ್ನು ಸೆಳೆದು ಗಂಗೆಯಲ್ಲಿಎಸೆಯುವುದು,ಹಲಾಗ್ರದಿಂದಲೇಯಮುನಾ ನದಿಯಕರ್ಷಣೆಮುಂತಾದ ಕೃತ್ಯಗಳಿಂದಬೃಹತ್ತ್ವವುಉಪಲಕ್ಷಿತವಾಗಿದೆ."ಭೂಮಿಯಲ್ಲಿ ಕ್ಷತ್ರಿಯರೇ ಇಲ್ಲದಂತೆ ಮಾಡುವೆನು" – ಎಂದ ಮೊದಲನೆಯ ರಾಮ "ಈಗ ಭೂಮಿಯಲ್ಲಿ ಕೌರವರೇ ಇಲ್ಲದಂತೆ ಮಾಡುವೆನು—ಎಂದ ಮೂರನೆಯ ರಾಮ.ಶ್ರೀಕೃಷ್ಣ ಶಿಶುವಾಗಿದ್ದುಕೊಂಡೇ ವಿಪುಲವಾದ ಒರಳು ಕಲ್ಲನ್ನೆಳೆದ. ಅವನ ಅಣ್ಣನಾದ ಈ ರಾಮ ನಗರವನ್ನೇ ಎಳೆದ. ಸೋದರರಿಬ್ಬರಿಗೂ ಕರ್ಷಕತ್ವಸಮಾನ. ಒಬ್ಬ ಸಂಕರ್ಷಣ. ಮತ್ತೊಬ್ಬ ಕೃಷ್ಣ. ಒಬ್ಬ ಹಲಧರ, ಇನ್ನೊಬ್ಬ ಚಕ್ರಧರ. ಶೇಷನಾದ ಮೊದಲನೆಯ ರಾಮ ಭೂಮಿಯನ್ನು ಕೆತ್ತಿ ಕಂಟಕಗಳನ್ನು ಹೋಗಲಾಡಿಸಿದ. ಶೇಷನಾದ ಮೂರನೆಯ ರಾಮ ಅದನ್ನು ನೇಗಿಲಿನಿಂದ ಉಳುವಂತಿದೆ. ಅದಕ್ಕೇ ಇವನನ್ನು ಕ್ಷೇಮ ಕೃಷೀವಲನೆನ್ನುತ್ತಾರೆ ಶ್ರೀ ಭಟ್ಟಪಾದರು. ಕೌರವಪತ್ತನದ ಕರ್ಷಣದಿಂದ ಈ ಶೇಷನ ಬೃಹಚ್ಛಕ್ತಿ ಅತ್ಯದ್ಭುತವಾಗಿ ಪ್ರದರ್ಶಿತವಾಗಿದೆ. ಈ ಬೃಹಚ್ಛಕ್ತಿ ಬ್ರಹ್ಮದ ಆವೇಶನದಿಂದ ಬಂದುದು. ಇವರಿಂದ ಬ್ರಹ್ಮದ ಬೃಹತ್ತ್ವ ಬೃಹ್ಮಯಿತೃತ್ವಗಳೂ ದರ್ಶಿತವಾಗಿವೆ. ಶೇಷ-ಶೇಷಿಗಳ ವಿಹಾರಗಳೆಲ್ಲವೂ ಅಪೃಥಗ್ಭೂತವೆಂದು ಹೇಳಿರುವುದರಿಂದ ಶೇಷ-ಶೇಷಿಗಳಿಬ್ಬರಿಗೂ ಅನನ್ಯತ್ವ ಚೆನ್ನಾಗಿ ಬೋಧಿತವಾಗುತ್ತದೆ. 'ಅಪೃಥಗ್ಭೂತ'-ಶಬ್ದವು ಸಿದ್ಧಾನ್ತಕ್ಕೆ ಪ್ರತಿತನ್ತ್ರಭೂತವಾದ ಅರ್ಥವನ್ನು ಉದ್ಘಾಟಿಸುವ ಹಾಗಿದೆ. ವಿಶಿಷ್ಟಾದ್ವೈತರೂಪ ಭದ್ರಗಳನ್ನು ವಿಸ್ತರಿಸುವುದರಿಂದ "ತನ್ವನ್ತು ಭದ್ರಾಣಿ ನಃ"—ಎಂದು ಪ್ರಾರ್ಥಿಸಿದ್ದಾರೆ. ಭದ್ರವೆಂದರೆ ಶುಭವೆಂದರ್ಥ. ಭಟ್ಟಾರ್ಯರು 'ಕ್ಷೇಮ ಕೃಷೀವಲ' ಎಂದು ಇವನನ್ನು ಅನ್ನುವಾಗಲೂ ಕ್ಷೇಮಶಬ್ದಕ್ಕೆ ಇದೇ ಅಭಿಪ್ರಾಯ. ಇಬ್ಬರೂ ಪರಸ್ಪರ ಅನನ್ಯರಾಗಿ ಕ್ಷೀರ-ಶರ್ಕರೆಗಳಂತೆ ಸೇರಿಕೊಂಡು ಪರಸ್ಪರ ಆಸ್ವಾದಕರಾಗಿದ್ದಾರೆ. ಇಂತಹ ಭದ್ರವೇ ಇಲ್ಲಿ ಆಶಾಸ್ಯವಾಗಿರುವುದು. ಆಚಾರ್ಯರು ಪ್ರಯೋಗಿಸಿರುವ 'ಅಪೃಥಗ್ಭೂತ'-ಶಬ್ದದಿಂದ ಈ ಅನನ್ಯತ್ವವೇ ದ್ಯೋತಿತವಾಗುವುದು.

ಕೃಷ್ಣ ಗಜ (ಕುವಲಯಾಪೀಡ)ವನ್ನು ಕೊಂದ. ಇವನ ಅಣ್ಣ ಗಜಾಹ್ವಯ ಪಟ್ಟಣವನ್ನು ಸೆಳೆದ. ಯಮುನಾಕರ್ಷಣ ವೃತ್ತಾನ್ತದಿಂದ ಶರಣಾಗತತ್ರಾಣಧರ್ಮ ಪ್ರಖ್ಯಾಪಿತವಾಗಿದೆ. ಇದರಿಂದ ಬ್ರಹ್ಮದಂತೆ ಇವನ ಮಹಿಮೆಯೂ ಸುಸ್ಪಷ್ಟವಾಗಿ ಪ್ರಕಾಶಿತವಾಗಿದೆ. ಇವನಿಗೆ ತಾಲಾಂಕನೆಂದೂ ಹೆಸರಿದೆ. ತಾಳವೃಕ್ಷವು ಇವನಧ್ವಜಾಗ್ರದಲ್ಲಿರುವ ಚಿಹ್ನೆ. ಅಂಕ ಎಂದರೆ ಚಿಹ್ನೆ. ತಮ್ಮನಂತೆ ಇವನು ರಾಗತಾಳಾದಿಗಳಲ್ಲಿ ರಸಿಕನಲ್ಲ. ಧ್ವಜಾಗ್ರದಲ್ಲಿ ತಾಳದ ಚಿಹ್ನ ಮಾತ್ರವಿದೆ. ಬೇರೆ ತಾಳವೆಂಬುದು ಇವನಿಗೆ

ತಿಳಿಯದು—ಎಂಬ ಸ್ವಾರಸ್ಯ ತಾಲಾಂಕ ಪದದಿಂದ ವ್ಯಂಜಿತ. "ನಃ ಶುಭಮಾತನೋತು,"—ಎಂದು ಪ್ರಥಮ ಶ್ಲೋಕದಲ್ಲಿ ಪ್ರಾರ್ಥಿಸಿದ ಶುಭವನ್ನೇ "ತನ್ವನ್ತು ಭದ್ರಾಣಿ ನಃ,"—ಎಂದು ಇಲ್ಲಿಯೂ ಪ್ರಾರ್ಥಿಸಿದ್ದಾರೆ. ಬಲಭದ್ರನಿವನು. ಭದ್ರನಲ್ಲಿ ಭದ್ರಪ್ರಾರ್ಥನೆ ಉಚಿತವೆಂಬ ಸ್ವಾರಸ್ಯ ವ್ಯಂಜನಕ್ಕಾಗಿ ಈ ಪದಗಳನ್ನೇ ಪ್ರಯೋಗಿಸಿದ್ದಾರೆ. "ಭದ್ರಂ ಕರ್ಣೇಭಿಃ ಶೃಣುಯಾಮ ದೇವಾಃ"—ಎಂಬಲ್ಲಿ ಪರಮಾತ್ಮನಿಗೆ ಭದ್ರ ಶಬ್ದ ಪ್ರಯೋಗವಿದೆ. ಶೇಷ—ಶೇಷಿಗಳಿಬ್ಬರೂ ಮತ್ತು ಅವರ ವ್ಯಾಪಾರಗಳೂ ಪರಸ್ಪರ ಕ್ಷೀರ. ಶರ್ಕರೆಗಳಂತೆ ಅಪೃಥಗ್ಭೂತವಾಗಿದ್ದುಕೊಂಡು ಪರಸ್ಪರ ಆಸ್ವಾದಕವಾಗಿರಬೇಕೆಂಬುದೇ ಇಲ್ಲಿ ಭದ್ರವನ್ನು ಪ್ರಾರ್ಥಿಸುವುದರ ವಿವಕ್ಷೆ. ಶೇಷೀ-ಕ್ಷೀರ. ಶೇಷ-ಶರ್ಕರೆ. ಸಕ್ಕರೆಯಂತಿರುವ ಶೇಷ ಶೇಷ ಶೇಷಿಗೆ ಅಧಿಕವಾಗಿ ರುಚಿಸುತ್ತಾನೆ. "ಗುಹೇನ ಸಹಿತೋ ರಾಮೋ ಲಕ್ಷ್ಮಣೇನ ಚ ಸೀತಯಾ",—ಗುಹ, ಲಕ್ಷ್ಮಣ, ಸೀತೆ-ಇವರೊಡನೆ ಕೂಡಿ ಶೋಭಿಸುವಷ್ಟು ದಶರಥರಾಮ ತಾನೊಬ್ಬನೇ ಇದ್ದರೆ ಶೋಭಿಸುವುದಿಲ್ಲ. ಶೇಷರು ಹೆಚ್ಚಾದಷ್ಟೂ ಶೇಷಿಗೆ ಮಾಧುರ್ಯ ಹೆಚ್ಚುವುದು. ಇಲ್ಲಿ, "ಕೃಷ್ಣಸ್ಯ ತಾಃ ಕೇಳಯಃ"—ಎಂದಿದ್ದಾರೆ ಆಚಾರ್ಯರು. ಕೃಷ್ಣನೆಂದರೆ ನಿರ್ವೃತಿ ಭೂಮಿ. ಕೇಳಿಗಳಿಲ್ಲದಿದ್ದರೂ ಇವನು ಸ್ವಯಂನಿರ್ವೃತಿ ಭೂಮಿ. ಇವನ ಕೇಳಿಗಳು ಜಗತ್ತಿಗೆ ರುಚಿಕರ. ಇಂತಹವನ ಕೇಳಿಗಳೂ ಕೂಡ ಬಲಭದ್ರನ ಕೇಳಿಗಳೊಡನೆ ಅಪೃಥಗ್ಭೂತಗಳಾಗಿದ್ದುಕೊಂಡು ಇನ್ನೂ ರಸವತ್ತರಗಳಾಗಿವೆ "ಯದ್ವಿಶ್ಲೇಷೇಽಪಿ ಕಾಳಿಯಭುವೇ ಕೋಲಾಹಲಾಯಾಭವತ್"-ಎಂಬ ಶ್ರೀಭಟ್ಟಾರ್ಯರ ಸೂಕ್ತಿಯಿಂದ ಅಪಾಯದುರಂಧರನೂ ಸಾಹಸರಸಿಕನೂ ಆದ ಶ್ರೀಕೃಷ್ಣನ ಕ್ಷಣವಿಶ್ಲೇಷವನ್ನೂ ಅಣ್ಣನು ಸಹಿಸುತ್ತಿರಲಿಲ್ಲವೆಂದು ವ್ಯಂಜಿತವಾಗುತ್ತೆ.

"—ಕ್ರೋಧೋಽಪಿ ತೇಽನುಗ್ರಹ ಏವ ಸಂಮತಃ—"

ನಾಥಾಯೈವ ನಮಃ ಪದಂಭವತು ನಶ್ಚಿತ್ರೈಶ್ಚರಿತ್ರಕ್ರಮೈಃ
ಭೂಯೋಭಿರ್ಭುವನಾನ್ಯಮೂನಿ ಕುಹನಾ ಗೋಪಾಯ
ಗೋಪಾಯತೇ ।
ಕಾಳಿನ್ದೀರಸಿಕಾಯ ಕಾಳಿಯಫಣಿಸ್ಫಾರಸ್ಫಟಾವಾಟಿಕಾ-
ರಂಗೋತ್ಸಂಗ ವಿಶಂಕ ಚಂಕ್ರ ಮಧುರಾ ಪರ್ಯಾಯ
ಚರ್ಯಾಯತೇ ॥ ೧೦ ॥

ಅರ್ಥ—[ಭೂಯೋಭಿಃ]=ಬಹುವಾದ;[ಚಿತ್ರೈಃ]=ಆಶ್ಚರ್ಯಕರಗಳಾದ [ಚರಿತ್ರಕ್ರಮೈಃ]=ನಡತೆಯ ಕ್ರಮಗಳಿಂದ [ಅಮೂನಿ]=ಈ [ಭುವನಾನಿ]= ಲೋಕಗಳನ್ನು [ಗೋಪಾಯತೇ]=ಕಾಪಾಡತಕ್ಕವನೂ[ಕಾಳಿಂದೀರಸಿಕಾಯ]=

ಯಮುನಾ ವಿಹಾರದಲ್ಲಿ ರುಚಿಯುಳ್ಳವನೂ [ಕಾಳಿಯಫಣಿಸ್ಫಾರಸ್ಫಟಾವಾಟಿಕಾ-ರಂಗೋತ್ಸಂಗ ವಿಶಂಕ ಚಂಕ್ರ ಮಧುರಾ ಪರ್ಯಾಯ ಚರ್ಯಾಃ]=ಕಾಳಿಯನೆಂಬ ಮಹಾಸರ್ಪದ ವಿಶಾಲವಾದ ಹೆಡೆಗಳ ವೀಥಿಯೆಂಬ ನಾಟ್ಯಸ್ಥಳದ ಮಧ್ಯದಲ್ಲಿ ನಿರ್ಭಯವಾದ ನರ್ತನ ನಿರ್ವಾಹಕ್ಕೆ ಸದೃಶಗಳಾದ ನಡೆಗಳನ್ನು [ಯತೇ]=ಹೊಂದುವವನೂ [ಕುಹನಾಗೋಪಾಯ]=ಮಿಥ್ಯಾ ಗೋಪಾಲನೂ ಆದ [ನಃ]=ನಮ್ಮ [ನಾಥಾಯ ಏವ]=ರಂಗನಾಥ ಅಥವಾ ನಮ್ಮ ಹೃದಯ ರಂಗದಲ್ಲಿ ನರ್ತಿಸುವ ಯದುನಾಥನಿಗೇ [ನಮಃ ಪದಂ]=ನಮಸ್ಕಾರವೆಂಬ ಪದವು [ಭವತು]=ಇರಲಿ.

ಭಾವ—ಅಂಕ-9 ದೃಶ್ಯ—ಕಾಳಿಯ ಶಿರೋನ್ನತ್ತರಂಗದಲ್ಲಿ ನರ್ತನ.

ಶ್ರೀ ಕೃಷ್ಣಾವತಾರವು ಆಚಾರ್ಯರಿಗೆ ನಿರ್ವೃತಿ ಭೂಮಿ: ಕೃಷ್ಣ—ಎಂಬುದು ಸರ್ವಾವತಾರಗಳಿಗೂ ಸಾಧಾರಣವಾದ ಶಬ್ದ. "ಉದ್ಧೃತಾಸಿ ವರಾಹೇಣ ಕೃಷ್ಣೇನ ಶತಬಾಹುನಾ"—ಎಂದು ಅವತಾರಾನ್ತರಗಳಿಗೂ ಕೃಷ್ಣ ಶಬ್ದ ಪ್ರಯೋಗವಿದೆ. ಇವನು ಪರಬ್ರಹ್ಮನೆಂಬುದರಲ್ಲಿ ಯಾರಿಗೂ ಸಂಶಯವಿಲ್ಲ.

"ಮಧುಸೂದನ ಸರಸ್ವತಾಃ ಪಾರಂವೇತ್ತಿ ಸರಸ್ವತೀ।
ಸರಸ್ವತ್ಯಾಃ ಪರಂ ಪಾರಂ ವೇತ್ತಿ ವೈ ಮಧುಸೂದನಃ॥" ಎಂದು ಪ್ರಖ್ಯಾತರಾದ ಮಧುಸರಸ್ವತಿಗಳು ಶ್ರೀಕೃಷ್ಣನನ್ನು ಸರ್ವಾವತಾರ ಶಿರೋಮಣಿ, ನಿರುಪಮ ಶ್ಯಾಮಸುಂದರಿ, ಸಾಕ್ಷಾದ್ವೈಕುಂಠನಾಯಕ, ವಿವಿಧ ದಿವ್ಯಲೀಲಾವಿಲಾಸ ಶೀಲ—ಇತ್ಯಾದಿಯಾಗಿ ಕೊಂಡಾಡಿರುವರು. ಕುಹನಾಗೋಪನಾದರೂ ವಿಶ್ವಗೋಪನಿವನು. "ಮಿಥ್ಯಾಗೋಪಸ್ಸಪದಿನಯನೇ ಮಾಲಯನ್ವಿಶ್ವಗೋಪ್ತಾ!!"—ಎಂದು ಶ್ರೀಗೋಪಾಲ ವಿಂಶತಿಯಲ್ಲಿಯೂ ಆಚಾರ್ಯರು ಇದನ್ನು ಪ್ರದರ್ಶಿಸಿದ್ದಾರೆ. ಈ ಅವತಾರದ ಮೇಲಣ ನಿರತಿಶಯ ವ್ಯಾಮೋಹದಿಂದ, "ಗೋಪಾಯೇದನಿಶಂ ಜಗನ್ತಿ ಕುಹನಾಪೋತ್ರೀ"...ಎಂಬಂತೆ ಅವತಾರಾನ್ತರಗಳಲ್ಲಿಯೂ 'ಗೋಪಾಯೇತ್'—ಎಂದು ಇದೇ ಸ್ತೋತ್ರದಲ್ಲಿ ಪ್ರಾರ್ಥಿಸಿದ್ದಾರೆ. 'ಗೋಪಾಯೇತ್'-ಎಂಬುದಕ್ಕೆ ರಕ್ಷಿಸಲಿ ಮತ್ತು ಗೋಪನಂತೆ ಆಚರಿಸಲಿ-ಎಂದು ಎರಡರ್ಥಗಳುಂಟು. ವೈಚಿತ್ರ್ಯ ಪ್ರದರ್ಶನದಲ್ಲಿ ಆಸೆಯುಳ್ಳ ಆಚಾರ್ಯರಿಗೆ ಈ ಅರ್ಥಗಳೆರಡೂ ಸಂಮತವಾಗಿರಬೇಕು. "ಚಿತ್ರೈಶ್ಚರಿತ್ರಕ್ರಮೈಃ"—ಎಂದು ಈ ಶ್ಲೋಕದಲ್ಲಿಯೂ ವೈಚಿತ್ರ್ಯ ಪ್ರದರ್ಶನದಲ್ಲಿರುವ ಆಸಕ್ತಿಯನ್ನು ಪ್ರಕಟಿಸಿದ್ದಾರೆ. ಬ್ರಹ್ಮತ್ವವನ್ನು ಪ್ರದರ್ಶಿಸುವ ವಿಶ್ವರೂಪಾದಿ ವೃತ್ತಾನ್ತಗಳು ಈ ಅವತಾರದಲ್ಲಿ ಬಹುವಾಗಿವೆ. ಎಲ್ಲವನ್ನೂ ಬಿಟ್ಟು ಇಲ್ಲಿ ಕಾಳಿಯಮರ್ದನ ವೃತ್ತಾನ್ತವನ್ನೇ ಏಕೆ ಚಿತ್ರಿಸಿದ್ದಾರೆ?—ಎಂದರೆ ಇದಕ್ಕೆ ಅನೇಕ ಕಾರಣಗಳಿವೆ. 'ರಂಗೇಧಾಮನಿ'—ಎಂಬಲ್ಲಿ ರಂಗಧಾಮದಲ್ಲಿ ನಟನವೆಂದು ಪ್ರತಿಜ್ಞೆ ಮಾಡಿದರು. ನಡೆದು ಹೋದ ಅವತಾರಗಳೆಲ್ಲ ಇಲ್ಲಿ ಸಮಾಪ್ತವಾಗುತ್ತವೆ, ಭಾವಿಯಾದ ಅವತಾರ ಒಂದು ಮಾತ್ರ ಉಳಿದಿದೆ. ನಡೆದು ಹೋದ

ಅವತಾರಗಳ ಪರಿಸಮಾಪ್ತಿಯಲ್ಲಿ ನೃತ್ತವನ್ನು ವರ್ಣಿಸುವುದು ಸಂಭವ. ಆದುದ
ರಿಂದ ಇದು ಸುಸಂಗತವಾದದ್ದು. ಇಲ್ಲಿ ಕಾಳಿಯನ ಫಣೆಯೇ ರಂಗಸ್ಥಳ. ನವ
ನೀತನಟನಾದಿಗಳು ನವನೀತಕ್ಕಿಂತ ಸ್ವಾದುಕರವಾದರೂ ಅವುಗಳಲ್ಲಿ ಬೃಹತ್ತ್ವೋ
ಪಪಾದನವಿಲ್ಲ. ಈ ಚರಿತ್ರದಲ್ಲಿ, "ವಿಲೋಕ್ಯ ದೂಷಿತಾಂ ಕೃಷ್ಣಾಂ ಕೃಷ್ಣಃ
ಕೃಷ್ಣಾಹಿನಾ ವಿಭುಃ"— ಎಂಬಂತೆ ಕೃಷ್ಣತ್ರಯಸಂಗತವನ್ನು ಶ್ರೀಶುಕರು ಸುಂದರ
ವಾಗಿ ಪ್ರದರ್ಶಿಸಿದ್ದಾರೆ. "ತನ್ಮೂರ್ಧರತ್ನನಿಕರಸ್ಪರ್ಶಾತಿತಾಮ್ರಪಾದಾಂಬುಜೋಽಖಿ
ಲಕಲಾದಿ ಗುರುರ್ನನರ್ತ"— ಎಂದು ನರ್ತನೋಪಕ್ರಮ ವಿಚಿತ್ರವಾಗಿ ಪ್ರದರ್ಶಿತ
ವಾಗಿದೆ. ನರ್ತನ ಭೂಮಿಯಲ್ಲಿ ನಟನಟಿಯರ ಪಾದಜಂಘಾದಿ ಸುಂದರ ಲಲಿತ
ಚೇಷ್ಟೆಗಳ ಪ್ರಕಾಶನಕ್ಕಾಗಿ ಭೂತಲದಲ್ಲಿ ದೀಪ ಪಂಕ್ತಿಗಳನ್ನಿಡುವರು. ಶ್ರೀಕೃಷ್ಣನ
ಪಾದಾಂಭೋಜಗಳ ಅಡಿಯಲ್ಲಿರುವ ನಾಗಶಿರೋರತ್ನಗಳಿಂದ ಆ ಕಾರ್ಯ
ನೆರವೇರಿದಂತಾಯಿತು. ಅಖಿಲ ಕಲೆಗಳಿಗೂ ಆದಿಗುರುವೂ ರಸಮಯನೂ
ಆದ ಕೃಷ್ಣನು ನರ್ತಿಸುತ್ತಿರುವಾಗ ನವನವ ಕ್ರಮಗಳನ್ನು ಕಲಿಯಲು ಮತ್ತು
ತಾಳಾದಿಗಳಿಂದ ಸಹಕರಿಸಲು ಪ್ರಸಿದ್ಧ ಗಾಯಕರೆಲ್ಲ ಓಡಿಬರುತಾರೆ. ನವ
ನೀತ ನಾಟ್ಯದಲ್ಲಿ ನಿಮನ್ದ ನದಿಮುಖರವಾದ ದಧಿಯೇ ತಾಳವಾಗಿದ್ದಿತು ಇಲ್ಲಿ.

"ತಂ ನರ್ತುಮುದ್ಯತಮವೇಕ್ಷ್ಯ ತದಾ ತದೀಯ ಗನ್ಧರ್ವಸಿದ್ಧ ಸುರಚಾರಣ
ದೇವವಧ್ವಃ
ಪ್ರೀತ್ಯಾ ಮೃದಂಗಪಣವಾನಕವಾದ್ಯಗೀತಪುಷ್ಪೋಪಹಾರನುತಿಭಿಸ್ಸಹಸೋಪಸೇದುಃ

ಎಂಬಂತೆ ಗನ್ಧರ್ವ ಸಿದ್ಧಾದಿಗಳು ತಾಳವೇ ಮೊದಲಾದ ಸಕಲೋಪಕರಣ ವಾದ್ಯ
ಗಳಿಂದಲೂ, ಗೀತಾದಿಗಳಿಂದಲೂ ಸಹಕರಿಸಿದರೆಂದು ಹೇಳಿದೆ. ಇಂತಹ ವಿಚಿತ್ರ
ತಾಂಡವದಿಂದ ನಡೆದು ಹೋದ ಅವತಾರಗಳ ಸಮಾಪನ ಆಚಾರ್ಯರಿಗೆರುಚಿಸಿದೆ.
ಚರಮ ಶ್ಲೋಕದಲ್ಲಿ ಉಪದಿಷ್ಟವಾದ ಶರಣಾಗತಿಯೆಂಬ ಉಪಾಯದ ಅನುಷ್ಠಾ
ನವೂ ಇದರಿಂದ ಸಂಪಾದಿತವಾಗಿದೆ.

"ಕ್ರೋಧೋಽಪಿ ತೇಽನುಗ್ರಹ ಏವ ಸಂಮತಃ"— ತಪಃ ಸುತಪ್ತಂ ಕಿಮ
ನೇನ ಪೂರ್ವಂ.........ಕಸ್ಯಾನು ಭಾವೋಸ್ಯ ನ ದೇವ ವಿದ್ಮಹೇ ತವಾಂಘ್ರಿರೇಣು
ಸ್ಪರ್ಶಾಧಿಕಾರಃ...."— ಎಂಬಂತೆ ಪರಮ ಕಶ್ಮಲ ಹೊಂದಿದ್ದ ಕಾಳಿಯನಿಗೆ ಸ್ವಲ್ಪ
ಪ್ರಯತ್ನವೂ ಇಲ್ಲದೆ ಶರಣಾವರಣ ಬುದ್ಧಿ ಮಾತ್ರದಿಂದ ತಲೆಗಳ ಮೇಲೆ ಭಗವ
ತ್ಪಾದಾಂಭೋಜದ ಸಂಯೋಜನ ಮತ್ತು ಪ್ರಣಾಮಾದಿ ಸೌಕರ್ಯವೊದಗಿತ್ತು.
ಭಗವತ್ಪಾದಾಂಬುಜ ಸಂಯೋಗದಿಂದ ಇವನ ಎಲ್ಲ ಶಿರಸ್ಸುಗಳು ಅನುಗ್ರಹೀತವಾ
ದವು. ನಮ್ಮ ಒಂದು ತಲೆಗೆ ಕೂಡ ಅದರ ಸಂಯೋಗ ದುರ್ಲಭ. ಅವನಿಗೆ
101 ತಲೆಗಳವೆ. ಇದರಿಂದ ಒಂದು ಸಲ ಪ್ರಣಾಮ ಮಾಡಿದಾಗ 101 ಪ್ರಣಾ
ಮಗಳಾಗುವುವು.

"ತಂ ಪ್ರೇಕ್ಷಣೀಯಸುಕುಮಾರಘನಾವದಾತಂ ಶ್ರೀವತ್ಸಪೀತವಸನಂ
ಸ್ಮಿತಸುಂದರಾಸ್ಯಂ ।
ಕ್ರೀಡನ್ತಮಪ್ರತಿಭಯಂ ಕಮಲೋದರಾಙ್ಘ್ರಿಂ ಸಂದಶ್ಯ ಮರ್ಮಸುರುಷಾ
ಭುಜಗಶ್ಚಛಾದ ॥

— ಎಂದು ಹೇಳಿರುವಂತೆ ಪುಷ್ಪಹಾಸಸುಕುಮಾರನಾದ ಕುಮಾರನನ್ನು ಕ್ರೂರವಾಗಿ ಕಾಳಿಯನು ಕಚ್ಚಿದ. ಪರಮಾಪತ್ತು ಬಂದಾಗ ರಕ್ತಕಾರುತ್ತ ಗತ್ಯನ್ತರವಿಲ್ಲದೆ ಅವನಿಗೆ ನಮಸ್ಕರಿಸಿದ. "ನಾರಾಯಣಂ ತಮರಣಂ ಮನಸಾ ಜಗಾಮ"—ಎಂದು ಹೇಳಿದೆ. ಇಂತಹ ಆದ್ರ್ರಾಪರಾಧಿಯನ್ನು ಶರಣವೆಂಬ ಉಕ್ತಿ ಮಾತ್ರದಿಂದಲೇ ಶ್ರೀ ಕೃಷ್ಣನು ಕಾಪಾಡಿದ. ಅವನನ್ನು ಬಿಟ್ಟದ್ದು ಮಾತ್ರವಲ್ಲದೆ ಸುಪರ್ಣನಿಂದ ತೊಂದರೆಯಾಗದಂತೆ, 'ಸುಪರ್ಣಸ್ತ್ವಾಂನಾದ್ಯಾತ್" ಎಂದು ಅಭಯವಿತ್ತ "ಅಭಯಂ ಸರ್ವಭೂತೇಭ್ಯೋ ದದಾಮಿ"—ಎಂಬುದು ಅವನ ವ್ರತವಷ್ಟೆ. ಹೀಗೆ ಕ್ರೋಧವೂ ಅನುಕೂಲವಾಗಿಯೇ ಪರಿಣಮಿಸಿತು. ತ್ರಿವಿಕ್ರಮನ ಪಾದಾಂಭೋಜದಿಂದ ತ್ರಿಜತ್ತುಗಳಿಗೂ ಅಂಕನವಾಯಿತೆಂದು ಹೇಳಿದೆ. ಅದನ್ನು ನಾವು ಕಣ್ಣಾರೆ ಕಾಣೆವು. ಈ ನಾಗನಿಗೆ ಅವನ ಪದಲಾಂಛನ ದೊರೆಯಿತು. ಅವನ ಪಾದ ಚಿಹ್ನಿತವಾದ ಊರ್ಧ್ವ ಪುಂಡವನ್ನು ಶಿರಸ್ಸಿನಲ್ಲಿ ಇವನು ಮಾತ್ರವಲ್ಲ ಜಾತಿಗೆ ಸೇರಿದ ಕೃಷ್ಣ ಸರ್ಪಗಳೆಲ್ಲ ಧರಿಸಿವೆ. ಮೊದಲು ಕಾಳಿಯ ಪರಮದುಷ್ಟನಾದರೂ ಆದಿದೇವನನ್ನು ಶರಣಹೊಂದಿ ನಿರ್ದೋಷನಾದ ಭಾಗವತನಾದನು. ಈ ವೃತ್ತಾನ್ತದಿಂದ ಮತ್ತೊಂದು ತತ್ತ್ವವೂ ದ್ಯೋತಿತವಾಗುವುದಾಗಿ ಆಚಾರ್ಯರು, ಶ್ರಿಯಾದವಾಭ್ಯುದಯದಲ್ಲಿ, "ಪ್ರಣೇಮುಷಾಂ ಪ್ರಾಣಭೃತಾಮುದೀರ್ಣಂ ಮನೋವಿನೇಷ್ಯನ್ನಿವಮಾಕ್ಷವಕ್ರಂ। ಅಕಲ್ಪಯತ್ಪನ್ನಗಮರ್ದನೇನ ಪ್ರಾಯೇಣ ಯೋಗ್ಯಾಂ ಪತಗೇಶ್ರವಾಹಃ॥ - ಎಂಬ ಶ್ಲೋಕದಲ್ಲಿ ವರ್ಣಿಸಿದ್ದಾರೆ. ನಮ್ಮ ಮನಸ್ಸು ಕೃಷ್ಣಸರ್ಪಕ್ಕಿಂತ ಕೆಟ್ಟದು. ಮಲಘಟನವಾದುದು, ವಿಷಮವಾದ ಅಕ್ಷ ಮತ್ತು ವಕ್ರವುಳ್ಳದ್ದು. ಆಶ್ರಿತರ ಮನಸ್ಸಿಗೆ ಭಗವತ್ಪಾದಾಂಭೋಜದಿಂದ ಮರ್ದನ ಮತ್ತು ಶಿಕ್ಷಣಗಳಾಗಬೇಕು. ಮನೊಮರ್ದನ ಬಹ್ವಪಾಯ ಮತ್ತು ದುರ್ಘಟ. ಕಷ್ಟವಾದ ಈ ಕಾರ್ಯವನ್ನು ಸಾಧಿಸುವುದಕ್ಕಾಗಿ ಅದಕ್ಕಿಂತ ಸುಲಭವಾದ ಕಾಳಿಯ ಶಿರೋಮರ್ದನದಿಂದ ಭಗವಂತ ಮರ್ದನಾಭ್ಯಾಸ ಮಾಡುವಂತಿದೆ. ನಮ್ಮ ಮನಸ್ಸು ಹದವಾಗಬೇಕೆಂಬುದೇ ನಮ್ಮ ಇಚ್ಛೆ. ಕಾಳಿಯನ ತಲೆಗಳೂ 101 ಮನಸ್ಸಿನ ನಾಡಿಗಳೂ 101 ನರ್ತಿಸುತ್ತಿರುವ ದೇವ ಗರುಡ ವಾಹನ. ಗರುಡನ ನೆರಳು ಬಿದ್ದರೇ ಸಾಕು. ಈ ಸರ್ಪ ಸಾಯುವುದಕ್ಕೆ. ಆದರೂ ನಮ್ಮ ಮನೋಮರ್ದನದ ಅಭ್ಯಾಸಕ್ಕಾಗಿಯೇ ಕಾಳಿಯನ ಶಿರಸ್ಸುಗಳನ್ನು ಮರ್ದಿಸುತ್ತ ಅವುಗಳ ಮೇಲೆ ಭಗವಂತ ಕುಣಿದಾಡಿದನೆಂದು ಆಚಾರ್ಯರು ಉತ್ಪ್ರೇಕ್ಷಿಸಿದ್ದಾರೆ. ಕಾಳಿಯನ ಮರ್ದನದಲ್ಲಿ ಆಚಾರ್ಯರಿಗೆ ಬಹುರಸವಿದೆ. ಈ ನರ್ತನಾನುಗುಣವರ್ಣನ

ವನ್ನು ಅತಿವಿಚಿತ್ರವಾಗಿ ಕೆಳಗಿನ ಶ್ಲೋಕದಲ್ಲಿ ಅನುಭವ ಮಾಡಿದ್ದಾರೆ ಶ್ರೀಯಾದವಾಭ್ಯುದಯದಲ್ಲಿ:—

"ಲೋಲಾಪಕಚ್ಛರಣ ಲೀಲಾಹಶಿಕ್ಷರಿತ ಹಾಲಾಹಲೇ ನಿಜಕ್ಷಣೇ ।
ನೃತ್ಯನ್ತಮುಪ್ರತಿಘುಕೃತ್ಯಂ ತಮಪ್ರತಿಮಮುಪತ್ಯನ್ತ ಚಾರುವಪುಷಮ್ ।
ದೇವಾದಿಭಿಸ್ಸಹಯುಸೇವಾದರತ್ವರಿತಹೇವಾಕಘೋಷ ಮುಖರೈಃ ।
ದೃಷ್ಟಾವಧಾನಮಥ ತುಷ್ಟಾವ ಶೌರಿಮಹಿಂಷ್ಟಾವರೋಧಸಹಿತಃ ॥"

ಕಾಳಿಯನ ಶಿರೋನೃತ್ಯರಂಗದಲ್ಲಿ ನರ್ತಿಸುವ ನಮ್ಮನಾಥರಂಗನಾಥ ಅಥವಾ ಯದುನಾಥನಾದ ಶ್ರೀಕೃಷ್ಣನಾಮೋಕ್ತಿಯಲ್ಲಿ ಅರ್ಥೋಕ್ತಿಯೂ ಪೂರ್ಣೋಕ್ತಿಯಂತೆ. ಆದ್ದರಿಂದ 'ನಾಥ' ಎಂದು ಅರ್ಥೋಕ್ತಿಯನ್ನು ಮಾತ್ರ ಇಲ್ಲಿ ಪ್ರಯೋಗಿಸಿದ್ದಾರೆ. ಇವನಲ್ಲಿ ಆಚಾರ್ಯರಿಗೆ ಗುರುತರವಾದ ಭಕ್ತಿಯಿರುವುದರಿಂದ 'ನಾಥಾಯೈವ' ಎಂದು ಅವಧಾರಣದೊಡನೆ 'ನಾಥ' ಶಬ್ದದ ಪ್ರಯೋಗವಿದೆ. ಕಾಳಿಯನನ್ನು ಹದಕ್ಕೆ ತಂದಂತೆ ತನ್ನ ಮನಸ್ಸನ್ನೂ ಮರ್ದಿಸಿ ಹದಗೊಳಿಸಲಿ ಎಂದು ಭಾವ. ಅವನಿಗೆ ಬಾಗದಿದ್ದಲ್ಲಿ ಶಿರಸ್ಸಿಗೆ ಮರ್ದನವಾಗುತ್ತೆ. ಈ ದೇವನು ಸರ್ವಾಶ್ಚರ್ಯಮಯ. ಇವನ ಚರಿತ್ರ ಯಾವುದು ತಾನೇ ಆಶ್ಚರ್ಯವಲ್ಲ! ಆದ್ದರಿಂದ "ಚಿತ್ರೈಶ್ಚರಿತ್ರಕ್ರಮೈಃ" ಎಂದಿದೆ ಇವನು ವೇಷದಿಂದ ಮಾತ್ರ ಗೋಪ. ಯೋಗಮಾಯೆಯಿಂದ ತನ್ನನ್ನು ಗೋಪನ ಮಾಡಿಕೊಳ್ಳುವಂತೆ ನಮ್ಮ ಗೋಪನವನ್ನೂ ಮಾಡತಕ್ಕವನೆಂದು, "ಕುಹನಾಗೋಪಾಯ ಗೋಪಾಯತೇ"—ಎಂದು ಹೇಳಿದ್ದಾರೆ.

ಭಾವುಕರು ರಸಿಕರಾಗಿರುವಂತೆ ರಸಸ್ವರೂಪನಾದ ಇವನು ಪರಮ ರಸಿಕ. ಹಾಗೆಯೇ ಕಾಳಿಂದಿಯಲ್ಲೂ ರಸಿಕ. "ಕಾಳಿಂದೀಪುಲಿನೇಷು ಯತ್ಕಿಮಪಿ ತನ್ನೀಲಂ ಮಹೋಧಾವತಿ"—ಎಂದು ಮಧುಸೂಧನ ಸರಸ್ವತಿ ಅನುಭವಿಸಿದ್ದಾರೆ. ಕೃಷ್ಣಸರ್ಪದಿಂದ ಅದು ದೂಷಿತವಾಗುವುದನ್ನು ಇವನು ಮರ್ಷಿಸನು. ಕಾಳಿಂದಿಯಲ್ಲಿ ವ್ರಜಯುವತಿಯರೊಡನೆ ಜಲಕ್ರೀಡೆಯಾಡಲು ಕೃಷ್ಣಸರ್ಪ ಅಡ್ಡಿಯಾಗಿದ್ದಾನೆ. ಇದೇ ಅವನ ಮರ್ದನಕ್ಕೆ ಕಾರಣ.

ನದ್ಯಸ್ತದಾಕರ್ಣ್ಯ ಮುಕುಂದಗೀತಂ ಆವರ್ತಲಬುದ್ಬುದಮನೋಭವಭಗ್ನವೇಗಾಃ ।
ಆಲಿಂಗನಸ್ಥಗಿತಮೂರ್ಮಿಭುಜೈರ್ಮುರಾರೇಃ ಗೃಹ್ಣನ್ತಿ ಪಾದಯುಗಳಂ
ಕಮಲೋಪಹಾರಾಃ ॥

—ಎಂಬಂತೆ ಶ್ರೀಕೃಷ್ಣನ ಗಾನದಲ್ಲಿ ರಸಿಕಳು ಕಾಳಿಂದೀ. ರಸಿಕಳಾದ ಅವಳಲ್ಲಿ ವಿಹರಣ ರಸಿಕ ಶ್ರೀ ಕೃಷ್ಣ, ನರ್ತನದಿಂದ ಅವಳನ್ನು ಸಂತೋಷಪಡಿಸಲಿಚ್ಛಿಸುತ್ತಾನೆ.

"ಯದ್ಯುಚ್ಛಿರೋ ನ ನಮದಜ್ಞಶತೈಕಶೀರ್ಷ್ಣಃ ತತ್ತನ್ಮಮರ್ದ ಖಲದಣ್ಡಧರೋಙ್ಘ್ರಿಪಾತೈಃ"॥—ಎಂದು ಶ್ರೀಶುಕರ ಅನುಭವ. ಭಗವಂತ ಸಮೀಚೀನ ಸನ್ಮಾರ್ಗವನ್ನು ನಿರ್ಮಿಸತಕ್ಕವನು. ರಸ್ತೆ ಮಾಡುವವರು. ಅಲ್ಲಲ್ಲೇ ಮೇಲಕ್ಕೆ

ತಲೆಯೆತ್ತಿರುವ ಕಲ್ಲು ಅಥವಾ ಜಲ್ಲಿಗಳನ್ನು ದಂಡಾದಿಗಳಿಂದ ಮರ್ದಿಸಿ ಸಮೀಕರಣ ಮಾಡುತ್ತಾರೆ. ಪಾದಗಳಿಂದಲೂ ಅವನ್ನು ಮರ್ದಿಸುವುದುಂಟು. ಇಲ್ಲಿ ಸ್ಫಟಾ ವಾಟಿಕೆಯೇ ವಿಶಾಲವಾದ ಮಾರ್ಗ. ಕಾಳಿಯನ ವಿಷಮ ಶಿರಸ್ಸುಗಳೇ ಮಾರ್ಗ ದಲ್ಲಿ ತಲೆಯೆತ್ತುತ್ತಿರುವ ಜಲ್ಲಿಗಳಂತೆ. ಇವುಗಳ ಮೇಲೆ ಇವನು ಹೊಂದುವ ಚರ್ಯೆ ನಮ್ಮ ಶುಚರ್ಯಾ ಸಂಪಾದನಕ್ಕಾಗಿ.

—"ಧರ್ಮೇಣ ಪಾಪಮಪನುದತಿ"—

ಭಾವಿನ್ಯಾ ದಶಯಾ ಭವನ್ನಿಹ ಭವಧ್ವಂಸಾಯ ನಃ ಕಲ್ಪತಾಂ
ಕಲ್ಕೀ ವಿಷ್ಣುಯಶಸ್ಸುತಃ ಕಲಿಕಥಾ ಕಾಲುಷ್ಯಕೂಲಂಕಷಃ
ನಿಶ್ಶೇಷಕ್ಷತಕಂಟಕೇ ಕ್ಷಿತಿತಲೇ ಧಾರಾಜಲೌಘೈರ್ಧ್ರುವಂ
ಧರ್ಮಂ ಕಾರ್ತಯುಗಂ ಪ್ರರೋಹಯತಿ ಯನ್ನಿಸ್ತ್ರಿಂಶ
ಧಾರಾಧರಃ ॥ ೧೧ ॥

ಅರ್ಥ:-[ಯನ್ನಿಸ್ತ್ರಿಂಶಧಾರಾಧರಃ]=ಯಾವ ಕಲ್ಕಿಯ ಖಡ್ಗವೆಂಬ ಮೇಘವು [ನಿಶ್ಶೇಷ ಕ್ಷತಕಂಟಕೇ]= ಸಂಪೂರ್ಣವಾಗಿ ನಷ್ಟರಾದ ದುಷ್ಟರುಳ್ಳ [ಕ್ಷಿತಿತಲೇ]= ಭೂಮಿಯಮೇಲೆ [ಧಾರಾಜಲೌಘೈಃ]= ಕತ್ತಿಯ ತುದಿಯೆಂಬ ನೀರಿನ ಪ್ರವಾಹ ಗಳಿಂದ [ಕಾರ್ತಯುಗಂ]= ಕೃತಯುಗ ಸಂಬಂಧವಾದ [ಧರ್ಮಂ]= ವರ್ಣಾಶ್ರಮ ಧರ್ಮವನ್ನು [ಧ್ರುವಂ]= ಸ್ಥಿರವಾಗಿ [ಪ್ರರೋಹಯತಿ]= ಬೆಳೆಸುತ್ತದೆಯೋ (ಅಂತಹ) [ಭಾವಿನ್ಯಾ]= ಮುಂದೆ ಆಗತಕ್ಕ [ದಶಯಾ]= ಅವಕಾಶದೊಡನೆ [ಇಹ]= ಈ ಶ್ರೀರಂಗದಲ್ಲಿ [ಭವನ್]= ಅರ್ಚಾರೂಪಿಯಾಗಿರುವ [ಕಲಿಕಥಾ ಕಾಲುಷ್ಯ ಕೂಲಂಕಷಃ]= ಕಲಿಯುಗದಲ್ಲಿ ನಡೆಯುವ ಪಾಪಗಳನ್ನು ನಿಶ್ಶೇಷವಾಗಿ ನಾಶ ಮಾಡುವ [ವಿಷ್ಣುಯಶಸ್ಸುತಃ]= ವಿಷ್ಣುಯಶಸ್ಸೆಂಬ ಬ್ರಾಹ್ಮಣನಿಗೆ ಪುತ್ರನಾದ [ಕಲ್ಕೀ]= ಬಿಳಿಕುದುರೆಯ ಮೇಲೆ ಬರುವ ಪರಮಾತ್ಮನು [ನಃ]= ನಮ್ಮನ್ನು [ಭವಧ್ವಂಸಾಯ]= ಸಂಸಾರನಾಶಕ್ಕೋಸ್ಕರ [ಕಲ್ಪತಾಂ]= ಆಗಲಿ.

ಭಾವ—ಕಲ್ಕ್ಯವತಾರ ವರ್ಣನೆ—ಅಂಕ-10

ಶ್ವೇತಾಶ್ವವದನನಾದ ಶ್ರೀ ಹಯಗ್ರೀವನು ಮೊದಲನೆಯ ಅವತಾರ. ಅವ ನಿಂದ ಅವತಾರನಾಟಕ ಉಪಕ್ರಮವಾಯಿತು. ಕಲ್ಕಿ ಎಂದರೆ ಶ್ವೇತಾಶ್ವ. ಶ್ವೇತಾಶ್ವವುಳ್ಳ ಕಲ್ಕಿಯಿಂದ ಉಪಸಂಹಾರವಾಗುತ್ತದೆ. ಇದು ಆಚಾರ್ಯರಿಗೆ ಪರಮ ಭೋಗ್ಯ. ಧರ್ಮಸಂಸ್ಥಾಪನೆಗಾಗಿ ಅವತಾರಗಳಾಗುತ್ತವೆ. ಧರ್ಮಗಳಲ್ಲಿ ಶ್ರೇಷ್ಠ ಕಾರ್ತಯುಗ ಧರ್ಮ. ಈ ಕಲಿಯುಗದಲ್ಲಿ ಅದಕ್ಕೆ ಅತ್ಯಂತ ಗ್ಲಾನಿ ಯೊದಗಿದೆ. ಕಲಿ ವೃದ್ಧಿಯಾದ ಹಾಗೆಲ್ಲ ಭೂಮಿಯೆಲ್ಲವೂ ಕಂಟಕಜನರಿಂದಲೆ ತುಂಬಿಹೋಗುತ್ತದೆ. ಲೋಕಕಂಟಕನಾದ ರಾವಣನ ಸಂಹಾರದಿಂದ 'ಉತ್ಸಾಹ

ಲೋಕತ್ರಯಕಂಟಕ'-ನೆಂದು ಶ್ರೀರಾಮನಿಗೆ ಪ್ರಥೆಯಿದ್ದಿತು. 'ತ್ರಿದಿವಮುಷ್ಟ್ಯತ ದಾನವಕಂಟಕಂ'—ಎಂದು ಮತ್ತೊಂದು ಯುಗದಲ್ಲಿ ದಾನವರು ಮಾತ್ರ ಕಂಟಕರೆನಿಸಿದ್ದರು. ಈ ಕಲಿಯುಗದ ಕೊನೆಯಲ್ಲಿ ಧರ್ಮ ನಷ್ಟಪ್ರಾಯವಾಗಿ ಎಲ್ಲವೂ ತಲೆಕೆಳಗಾಗುವುದು. ಆಗ ಎಲ್ಲ ಜನರೂ ಕಂಟಕರಾಗುವರು. ಶ್ವೇತಾಶ್ವಾರೂಢನಾದ ಭಗವಂತನ ಖಡ್ಗಧಾರೆಯಿಂದ ಎಲ್ಲ ಕಂಟಕ ಜನರನ್ನೂ ಸಂಹರಿಸುವನು. ಸಂಹಾರ ಸೃಷ್ಟಿಗಳೆರಡೂ ಈ ಅವತಾರದಲ್ಲಿ ಪ್ರದರ್ಶಿತವಾಗುವುವು. ಸಂಹಾರವೂ ಅನುಗ್ರಹದಲ್ಲಿಯೇ ಕೊನೆಗಾಣುವುದರಿಂದ ಖಡ್ಗವನ್ನು ಮೇಘವನ್ನಾಗಿ ರೂಪಿಸಿದೆ. ಈ ಧರ್ಮಮೇಘದಿಂದ ಕೃತಯುಗ ಧರ್ಮ ಬೀಜಾಂಕುರವಾಗುತ್ತದೆ. ಈ ಅವತಾರ ಮುಂದೆ ನಡೆಯಲಿರುವುದು. ಹಿಂದೆ ನಡೆದ ಅವತಾರಗಳನ್ನು ಮಹರ್ಷಿಗಳು ಚೆನ್ನಾಗಿ ವರ್ಣಿಸಿದ್ದಾರೆ. ಇದು ಭವಿಷ್ಯದವತಾರ. ಭೂತಾವತಾರಗಳ ಭಾವನೆಗಿಂತ ಭವಿಷ್ಯದವತಾರದ ಭಾವನೆ ಕ್ಲಿಷ್ಟತರ. ಈಗ ಇತರ ಅವತಾರಗಳೂ ಇವೆ. ಕಲ್ಕ್ಯವತಾರವೂ ಇದೆ. ಆದರೆ ಅವು ಭೂತದಶೆಯಿಂದ ಇವೆ. ಇದು ಭಾವಿದಶೆಯಿಂದ ಇದೆ. ಇತರ ಅವತಾರಗಳಲ್ಲಿ ಭೂತಕಾಲ ವ್ಯವಧಾನ. ಇಲ್ಲಿ ಭವಿಷ್ಯತ್ಕಾಲದ ವ್ಯವಧಾನ. ವ್ಯವಧಾನವಂತೂ ಎಲ್ಲಕ್ಕೂ ಸಮಾನ. ವರ್ತಮಾನತ್ವವೂ ಎಲ್ಲಕ್ಕೂ ಸಮ—ಎಂದು 'ಭವನ್'—ಶಬ್ದದಿಂದ ವ್ಯಂಜಿತವಾಗಿದೆ. ಇದನ್ನು ಅಧ್ಯಕ್ಷಿಸುವವನು ಸರ್ವಶಕ್ತನಾದ ಭಗವಂತ. ಕರ್ಮೋಪಾಧಿ ಕಳೆದರೆ ತ್ರಿಕಾಲ ಭೇದವಿರದು. ಎಲ್ಲ ಕಾಲವೂ ಸತತ ವರ್ತಮಾನವೇ ಆಗುವುದು. ಭಗವಂತ ಸರ್ವಾವತಾರಗಳನ್ನು ಅಧ್ಯಕ್ಷೀಕರಿಸಿದಲ್ಲಿ ಭವಿಷ್ಯತ್ತು ವರ್ತಮಾನವೇ ಆಗುವುದುದೆಂದು ಇಲ್ಲಿ ಸ್ಫುರಿಸುತ್ತದೆ. ಇವನಿಂದಾಗುವ ಶುಭವಾವುದು?—ಎಂದರೆ ಭವಧ್ವಂಸ 'ಭವನ್' ಆದವನಿಂದಲೆ ಭವಧ್ವಂಸವೆಂಬ ವಿರೋಧವೂ ಆಪಾತತಃ ಸ್ವಾರಸ್ಯವಾಗಿ ವ್ಯಂಜಿತವಾಗುತ್ತದೆ. ವಿಷ್ಣುವಿನಯಶಸ್ಸು ಪ್ರಣಷ್ಟಪ್ರಾಯವಾದಾಗ ವಿಷ್ಣುಯಶಸ್ಸೆಂಬ ಬ್ರಾಹ್ಮಣನಿಂದ ಭಗವಂತ ಹುಟ್ಟುವನು. "ಕಸ್ಯ ನಾಮ ಮಹದ್ಯಶಃ,"—ಎಂಬಂತೆ ಭಗವಂತನಿಗೆ 'ಯಶಸ್'—ಎಂಬ ಹೆಸರು ಪ್ರಸಿದ್ಧ. ಇವನಿಗೆ ವಿಷ್ಣುಯಶಸ್ಸೆಂಬವನು ಅನುರೂಪನಾದ ತಂದೆ. ತಮಸ್ಸಿನಿಂದಾವೃತವಾದ ಕಲಿಯುಗದಲ್ಲಿ ಇವನು ಯಶಸ್ಸಿನಿಂದ ಜನಿಸುವನು. ಇವನ ಯಶಸ್ಸು ಕಲಿಮಲಾಪಹ. ಇವನು ಧಾರಾಧರ ಹಸ್ತನಾಗಿ ಪ್ರಚುರವಾದಧರ್ಮವನ್ನು ಸುರಿಸಿ ಪಾಪವನ್ನು ಹೋಗಲಾಡಿಸುವನು ಎಲ್ಲವೂ ಕಂಟಕವೇ ಎಲ್ಲವನ್ನೂ ಪರಿವರ್ತಿಸಿ ನೂತನ ಶುದ್ಧ ಪ್ರರೋಹಗಳನ್ನು ಬೆಳೆಸುವನು. ಕಂಟಕಗಳನಾಶಕ್ಕೆ ಸಾಧನವಾದ ಖಡ್ಗವು ಧರ್ಮಜಲ ಪ್ರವಾಹವನ್ನುವರ್ಷಿಸುವ ಮೇಘವೂಆಗುತ್ತದೆ. ಈ ಮೇಘನ ಖಡ್ಗವೂ ಮೇಘವೇ. ದುಷ್ಟಬುದ್ಧಿನಾಶನವೇ ಧರ್ಮಸಂಸ್ಥಾಪನೆಯ ಸಾಧನವೂ ಆಗುವುದೆಂದು ಭಾವ. ಧರ್ಮ ವಿಗ್ರಹನಾದ ಚಕ್ರವರ್ತಿಕುಮಾರ 'ತ್ರೇತಾಯುಗ ಪ್ರವರ್ತಿತ ಕಾರ್ತಯುಗವೃತ್ತಾಂತ' ಕಲ್ಕಿಯಾದರೋ ಕಲಿಯುಗದಲ್ಲಿಯೇ ಹಾಗಾಗುವನು.

—ಸಮಾಸೋಕ್ತಿ—

ಇಚ್ಛಾಮೀನ ವಿಹಾರಕಚ್ಛಪ ಮಹಾಪೋತ್ರಿನ್ ಯದೃಚ್ಛಾಹರೇ
ರಕ್ಷಾವಾಮನ ರೋಷರಾಮ ಕರುಣಾಕಾಕುತ್ಸ್ಥ ಹೇಲಾಹಲಿನ್।
ಕ್ರೀಡಾವಲ್ಲವ ಕಲ್ಕಿವಾಹನ ದಶಾಕಲ್ಕಿನ್ನಿತಿ ಪ್ರತ್ಯಹಂ
ಜಲ್ಪನ್ತಃ ಪುರುಷಾಃ ಪುನನ್ತಿ ಭುವನಂ ಪುಣ್ಯೌಘಪಣ್ಯಾಪಣಾಃ ॥

ಅರ್ಥ: [ಇಚ್ಛಾಮೀನ]= ಭಕ್ತರ ಇಚ್ಛೆಯನ್ನನುಸರಿಸಿ ಡೋಲಾರೋಹನದೋಹಲನಾದ ಮತ್ಸ್ಯಮೂರ್ತಿಯೇ। [ವಿಹಾರಕಚ್ಛಪ]= ನವವಧುವಿನೊಡನೆ ಆಂದೋಲಿತ ಪರ್ಯಂಕದಲ್ಲಿ ನಿತ್ಯಾರೋಹಣ ನಿರ್ವೃತಿಯಿಂದ ವಿಹರಿಸುವ ಕೂರ್ಮನೆ। [ಮಹಾಪೋತ್ರಿನ್]= ಬೃಹತ್ತ್ವ ಪ್ರತಿಪಾದನೆಗಾಗಿ ನಿರತಿಶಯ ಬೃಹದ್ರೂಪಿಯಾ... ...ನ್ನುನಾ ಮಹತ್ತ್ವ ಪರ್ಯಾಯವಾದ ಸ್ವಬುದ್ಧಿಯಿಂದ ಅವತರಿಸಿದ ವರಾಹನೆ। [ಯದೃಚ್ಛಾಹರೇ]= ಸ್ವೇಚ್ಛೆ ಅಥವಾ ಅಸುರನ ಇಚ್ಛೆಯಂತೆ ಆಪದುದ್ಧಾರಕನಾಗಿ ಸ್ತಂಭದಲ್ಲಿ ಕಾಣಿಸಿಕೊಂಡ ನೃಸಿಂಹನೆ [ರಕ್ಷಾವಾಮನ]= ಸುಹೃದ್, ದುರ್ಹೃದ್, ಉದಾಸೀನರೆಂಬ ಮೂರು ಬಗೆಯವರ ರಕ್ಷಣೆಗಾಗಿ ವಾಮನ ರೂಪಿಯಾಗಿ ಬಂದ ಪರಮಾತ್ಮನೇ [ರೋಷರಾಮ]= ರೋಷದಲ್ಲಿಯೇ ರಮಿಸುವ ಪರಶುರಾಮನೆ। [ಕರುಣಾಕಾಕುತ್ಸ್ಥ]= ಕಾರುಣ್ಯೈಕರಸನಾದ ಶ್ರೀ ರಘುರಾಮನೇ। [ಹೇಲಾಹಲಿನ್]= ಲೀಲೆಯಿಂದ ಕ್ಷೇಮಕೃಷೀವಲನಾದ ಬಲರಾಮನೆ [ಕ್ರೀಡಾವಲ್ಲವ]= ಮಿಥ್ಯಾ ಗೋಪನೆ। [ಕಲ್ಕಿವಾಹನ ದಶಾಕಲ್ಕಿನ್]= ಶ್ವೇತಾಶ್ವವಾಹನನಾದುದರಿಂದ ಕಲ್ಕಿ ಎನಿಸಿದವನೆ। [ಇತಿ]= ಹೀಗೆಂದು [ಪ್ರತ್ಯಹಂ]= ನಿತ್ಯವೂ [ಜಲ್ಪನ್ತಃ]= ಹೇಳುವ [ಪುರುಷಾಃ]= ಮನುಷ್ಯರು [ಪುಣ್ಯೌಘಪಣ್ಯಾಪಣಾಃ]= ಪುಣ್ಯಗಳ ಸಮೂಹವನ್ನು ಮಾರುವ ಅಂಗಡಿಗಳಂತಿರುವವರಾಗಿ [ಭುವನಂ]= ಲೋಕವನ್ನು [ಪುನನ್ತಿ]= ಪಾವನಮಾಡುತ್ತಾರೆ.

ಭಾವ:—ಅಖಂಡ ರಸಾನುಭವ: ಅಖಂಡರಸ ಲಭಿಸುವುದಕ್ಕಾಗಿ ಎಲ್ಲ ಅವತಾರಗಳನ್ನು ಏಕೀಕರಿಸಿ ಇದರಲ್ಲಿ ಅನುಭವಿಸುತ್ತಾರೆ. ಪ್ರತ್ಯವತಾರದಲ್ಲಿಯೂ ಭಗವಂತ ಪೂರ್ಣನಾದರೂ ಅನೇಕ ಪೂರ್ಣಗಳನ್ನು ಒಟ್ಟಿಗೆ ಸೇರಿಸಿ ಅನುಭವಿಸುವುದರಿಂದ ಉಂಟಾಗುವ ರಸ ಅಖಂಡತಮ. ಒಬ್ಬನಿಗೇ ಹತ್ತು ಭೂಮಿ... ...ಗಳು. ಅವುಗಳನ್ನು ಅಖಂಡವಾಗಿ ಅನುಭವಿಸುವುದು ಉಚಿತ. ದಶಪ್ರಕಾರವಾದ ...ದ್ವೈತ ಅನುಭೂತವಾಗಿದೆ. ವಿಶಿಷ್ಟೈಕ್ಯವೇ ಅವತಾರ ನಾಟಕಗಳಿಂದ ...ಸುದು. ಸರ್ವಚಿದಚಿತ್ಪ್ರಕಾರ ವಿಶಿಷ್ಟ ಬ್ರಹ್ಮಾನುಭವ ಹೇಗೋ ಹಾಗೆ ...ನಿಶಿಷ್ಟ ಪ್ರಕಾರ್ಯನುಭವ ನಿರೂಪಿತವಾಗಿದೆ. ಪ್ರಥಮ

ಶ್ಲೋಕದಲ್ಲಿ ಸಮಾಸ; ಅನಂತರ ಹತ್ತು ಶ್ಲೋಕಗಳಿಂದ ವ್ಯಾಸ ಮತ್ತೆ ನಿಗಮ... ಸಮಾಸ. ತಾರ್ಕಿಕಸಿಂಹರಾದ ಈ ಕವಿಸಿಂಹರು ...ಮಾನಸರಣಿಯನ್ನು ಬಿ... ಪ್ರಥಮ ಶ್ಲೋಕದಲ್ಲಿ ಪ್ರತಿಜ್ಞೆ; ಇಲ್ಲಿ ನಿಗಮನ. ವಿಶಿಷ್ಟವೈಶಿಷ್ಟ್ಯಾವಗಾಹಿ ಜ್ಞಾ... ರೂಪವಾದ ಫಲ ಲಭಿಸುತ್ತದೆ. ಆಯಾ ಪೂರ್ವಶ್ಲೋಕೋಕ್ತಗಳಾದ ಅನುಭವಗ... ಪ್ರಾಯಿಕವಾಗಿ ಇಲ್ಲಿಯ ಶಬ್ದಗಳಿಂದ ಸಂಗ್ರಹೀತವಾಗಿವೆ.

ಹಿಂದೆ ಭಗವಂತನನ್ನು ಪರೋಕ್ಷವಾಗಿ ಪ್ರಾರ್ಥಿಸಿದ್ದಾರೆ. ಈಗ ಆಯಾ ಶ್ಲೋಕಾನುಭವದಿಂದ ಅಧ್ಯಕ್ಷಿತನಾದ ಭಗವಂತನನ್ನು ಸಮಕ್ಷನಾಗಿ ಸಂಬೋಧಿಸು... ತ್ತಾರೆ.. "ಅಧ್ಯಕ್ಷಿತೋ ಭಾವುಕೈಃ" — ಎಂಬದು ಅನ್ವರ್ಥಿತವಾಗಿದೆ. "ಶುಭಮಾತನೋತು"— ಎಂಬ ಪ್ರಾರ್ಥನೆ ಫಲಿಸಿತು. **"ಯದೃಚ್ಛಾ ಹರೇ!"**— ಎಂಬಲ್ಲಿ ಹರಿಯು ನಿತ್ಯಹರಿಯೆಂದು ಭಾವ. ನರಹರಿಯಾಗಿದ್ದು ನರತ್ವವನ್ನು ತಾನೇ ಅಧಃಕರಿಸಿದ. ಆದ್ದರಿಂದ ಹರಿತ್ವಮಾತ್ರದಿಂದ ಇಲ್ಲಿ ಸಂಬೋಧನವಿದೆ. ವಾಮನನು ತನ್ನ ಪಾದ ತೀರ್ಥವಾದ ಗಂಗೆಯಂತೆ ಆಶ್ರಿತನಾದ ಇಂದ್ರನನ್ನೂ ಶತ್ರುವಾದ ಬಲಿಯನ್ನೂ ಉದಾಸೀನವಾದ ತ್ರಿಲೋಕವನ್ನೂ ರಕ್ಷಿಸಿದ. ಆದ್ದರಿಂದ ಇವನ 'ರಕ್ಷಾ ವಾಮನ' —ಎಂದು ಸಂಬೋಧಿಸಿದ್ದಾರೆ. **'ರೋಷರಾಮ'** — ಹೆಸರಿನಲ್ಲಿ ಮಾತ್ರ ರಾಮ. ಇವನು ಹೆಸರಿಗೆ ವಿರುದ್ಧಸ್ವಭಾವದವನು. ಎಕ್ಕದ ಗಿಡಕ್ಕೆ ಮಹಾವೃಕ್ಷವೆಂಬಂತೆಯೂ, ಅಮಂಗಳವಾರಕ್ಕೆ ಮಂಗಳವಾರವೆಂಬಂತೆಯು ಕೆಲವೆಡೆಗಳಲ್ಲಿ ವಿರುದ್ಧವಾದ ಹೆಸರುಗಳೂ ಕಂಡು ಬರುತ್ತವೆ. ಅಥವಾ ಯೌಗಿಕಾರ್ಥವನ್ನು ನಿರ್ಬಂಧ ಪಡಿಸಿದಲ್ಲಿ ಕ್ಷತ್ರಕ್ಕೆಲ್ಲ ವಿರಾಮಕರನಾದುದರಿಂದ ರಾಮ, ರೋಷದಲ್ಲಿಯೇ ರಮಿಸ ತಕ್ಕವನಾದುದರಿಂದ ರೋಷರಾಮನೆಂದೂ ಆಗಬಹುದು. **ಕರುಣಾ ಕಾಕುತ್ಸ್ಥ**—ರೋಷರಾಮನಲ್ಲಿ ಪ್ರಯೋಗಿಸಿದ ರಾಮ ಶಬ್ದದಿಂದ ಒಡನೆಯೇ ಇವನನ್ನು ಸಂಬೋಧಿಸ ಕೂಡದೆಂದು ಈ ಲೋಕ ರಾಮನನ್ನು ರಾಮ ಶಬ್ದದಿಂದ ಸಂಬೋಧಿಸಲಿಲ್ಲ. ಈ ಅವತಾರ ವಿಷಯವಾದ "ಪಾರಾವಾರಪಯೋವಿಶೋಷಣಕಲಾ..................." ಇತ್ಯಾದಿಯಾದ ಶ್ಲೋಕಪೂರ್ತಿ ಕರುಣಾ ಪ್ರತಿಪಾದಕವಾದುದರಿಂದ "ಕರುಣಾ ಕಾಕುತ್ಸ್ಥ—ಎಂದು ಸಂಬೋಧಿಸಿದ್ದಾರೆ. **ಕ್ರೀಡಾವಲ್ಲವ!** —ಮಿಥ್ಯಾಗೋಪ-ಉಪಕ್ರಮಸ್ಥ 'ದೇವ'—ಶಬ್ದದಿಂದ ವ್ಯಂಜಿತವಾದ ಕ್ರೀಡನ ಇಲ್ಲಿ ಕಂಠೋಕ್ತವಾಗಿದೆ. **ಕಲ್ಕಿವಾಹನ ದಶಾಕಲ್ಕಿನ್!**—ಇವನ ಅವತಾರ ವಿಷಯಕ ಶ್ಲೋಕದಲ್ಲಿ 'ಕಲ್ಕೀ' —ಎಂದರೆ 'ಕಲ್ಕ'—ಪದಕ್ಕೆ ಕಳಂಕವೆಂದೂ ಅರ್ಥ. ಕಲಿಯುಗದಲ್ಲಿ ಅವತರಿಸುವ ಕಲ್ಕೀ ಸಕಲ್ಕ (ಸಕಳಂಕ) ವೆಂಬ ಭಾವನೆ ಬಂದೀತೆಂಬ ಭಯದಿಂದ ಅದರ ವ್ಯಾವೃತ್ತಿಗಾಗಿ ಕಲ್ಕ ಶಬ್ದಕ್ಕೆ ಶ್ವೇತಾಶ್ವವೆಂಬ ಅರ್ಥ ವರ್ಣನೆಯಿದೆ. ಕಲ್ಕ (ಶ್ವೇತಾಶ್ವ) ಮೇಲೆ ಏರಿ ಬರುವ ದಶೆಯಲ್ಲಿ ಇವನು ಕಲ್ಕಿ. ಭಾವ್ಯವಸ್ಥೆಯನ್ನು ಕು... ಹೆಸರು ಬರಬಹುದು. "ಅಸ್ಯಸೂತ್ರಸ್ಯ ಶಾಟಕಂ ವಯ" ಇತ್ಯಾದಿಯಲ್ಲಿ ಕಂಡಿದೆ. ಅಲ್ಲದೆ ಈ ಪ್ರಕಾರ ಅಸಿದ್ಧನೂ ಅಲ್ಲ. ಪ್ರಕಾರ ...